Havyaka Association Of Americas

# ಹವ್ಯಸಿರಿ

17th Biennial Convention
Chicago - 2017



# ಹವ್ಯಸಿರಿ – 2017

## ಸಂಪಾದಕ ಮಂಡಳಿ

ಕೃಷ್ಣಮೂರ್ತಿ ಪಿ. ಗುಡೇಹಿತ್ತಲು
ಶಿಶಿರ ಹೆಗಡೆ
ಶಂಕರ ಹೆಗಡೆ
ಮಾಲಾ ಹೆಗಡೆ

## ಅಮೆರಿಕೆಗಳ ಹವ್ಯಕರ ಒಕ್ಕೂಟ

## ಮಧ್ಯ-ಪಶ್ಚಿಮ ವಲಯ, ಶಿಕಾಗೋ

# Havyasiri – 2017

## Havyaka Association of Americas

## 17th Biennial Convention Magazine

**Publisher**

Anil Adkoli
President, Havyaka Association of Americas
http:/www.havyak.org/

**Cover Page Design**
Nirmala Mohan
Anil Adkoli
Shishir Hegde

**Inside Layout**

Krishnamurthy P. Gudehithlu
Shankar Hegde

**Copyright** © 2017 Individual Authors

**Printed by**

Digislate, Inc.
630-527-1403

# ವಿಷಯಸೂಚಿ - Table of Contents-1


| SI No. | Title | Writers/Contributors | Page No. |
|---|---|---|---|
| 1 | Havyotsava Sponsors | Editorial Board | 6 |
| 2 | ಅಧ್ಯಕ್ಷರ ಸಂದೇಶ | ಅನಿಲ್ ಮತ್ತ ಸುಜಾತ ಅಡ್ಕೋಳಿ | 7 |
| 3 | Editorial | Krishnamurthy P. Gudehithlu | 9 |
| 4 | Message from Vice President of Midwest Chapter | Rashmi Bhat Palamadai | 10 |
| 5 | HAA Convention Committees | Editorial Board | 11 |
| 6 | ಸ್ವಾಗತವು ತಮಗೆ | ರಾಮ ಬೆಳಗಜೆ | 13 |
| 7 | ಸಂಪಾದಕ ಮಂಡಳಿ | Editorial Board | 14 |
| 8 | ವಾಷಿಂಟೆಗ್ಟನ್ ಡಿ.ಸಿ. ಹವ್ಯಕ ಸಮ್ಮೇಳನದ ವರದಿ | ರಾಮಕೃಷ್ಣ ಭಟ್ಟ ಮತ್ತು ಸಂಗಡಿಗರು | 15 |
| 9 | ತವರು ಕಲಿಸಿದ ಸಂಪ್ರದಾಯಗಳು | ಅಹಲ್ಯ ಚಂದರಶೇಖರ ಭಟ್ಟ | 19 |
| 10 | ಅಜ್ಜನ ಮನೆಯ ಸವಿ ನೆನಪು | ಕಾವ್ಯ ಹೆಗಡೆ | 22 |
| 11 | ಹವಿಕರು ಯಾರು | ರಾಘವೇಂದ್ರ ಕಟ್ಟಿನಕೆರೆ | 24 |
| 12 | A Response to Some Popular Western Atheists | Raghavendra Kattinakere | 29 |
| 13 | Adventure with My Grandparents | Mira Halkar | 31 |
| 14 | ಸಲಹೆಯ ಕರಾಮತ್ತು | ಲತಾ ಹೆಗಡೆ | 32 |
| 15 | ಎಮ್ಮ ಮನೆಯಂಗಳದಿ… | ಶಂಕರ ಹೆಗಡೆ | 35 |
| 16 | ಈ ನಾನು ಆ ನೀನು ಒಂದೇ ತಾನಿನ ತಾನು | ಪ್ರದೀಪ್ ಭಟ್ | 38 |
| 17 | ಪ್ರತಿನಿಧಿತ್ವ | ಬ್ರಹ್ಮಣಸ್ಪತಿ ಗಣಪತಿ ಶಾಸ್ತ್ರಿ | 40 |
| 18 | Believe it or Not | Leela Rao Hegde | 46 |
| 19 | It’s More than Just a Robot | Ankith Adkoli | 47 |
| 20 | Interview with My Ajja | Sarah Hegde | 49 |
| 21 | ರಾಜಕಾರಣದಲ್ಲಿ ಸ್ತ್ರೀಯರು | ಸರಸ್ವತಿ ಶಂಕರ್ | 51 |
| 22 | ಕೊಡಗು – ಒಂದು ಸ್ಥೂಲ ಪರಿಚಯ | ನೀರ್ಕಜೆ ಮಹಾಬಲೇಶ್ವರ ಭಟ್ | 53 |

# ವಿಷಯಸೂಚಿ Table of Contents-2


| | | | |
|---|---|---|---|
| 23 | ಕೊಡಗಿನ ಮುಕುಟಮಣಿ “ಭಾರತೀಸುತ” | ಡಾ. ಶ್ರೀಧರ ಹೆಗಡೆ | 55 |
| 24 | ಪೈಥಾಗೊರಸ್‌ನ ಗುಟ್ಟಿನ ಕನಸು | ಶಂಕರ ಹೆಗಡೆ | 59 |
| 25 | The First Flight Alone | Rohan Ryan Sachdeva | 64 |
| 26 | ಸಣ್ಣ ಕಥೆ - " ಗೋಮುಖ ವ್ಯಾಘ್ರ " | ಲತಾ ಹೆಗಡೆ | 65 |
| 27 | ಹಲಸು ಅಮೇರಿಕಾದಲ್ಲಿ ಸೊಗಸು | ಸುಬ್ರಹ್ಮಣ್ಯ (ಸುಬ್ಬು) ಭಟ್ಟ | 68 |
| 28 | 302: The Document Has Moved | Anoop Bhat | 71 |
| 29 | Giving Language a Meaning | Meghana Mohan | 74 |
| 30 | Ekadashi and Autophagy | Krishnamurthy P. Gudehithlu | 75 |
| 31 | ಎರಡು ಕವನಗಳು | ಪಿ. ಎನ್. ಜಯರಾಮ್ | 78 |
| 32 | ಅಜ್ಜನ ನೆನಪಿನಲಿ ........ | ಕಾಂಚನ ಹೆಗಡೆ | 79 |
| 33 | ಅಮ್ಮನ ಹಾರೈಕೆ | ಕಾಂಚನ ಹೆಗಡೆ | 80 |
| 34 | Where is my memory? | Usha Devi Kuloor Bhat | 81 |
| 35 | Music, Emotions and Thoughts | Soumya Bhat | 83 |
| 36 | ರಮೇಶ ಹೆಗಡೆಯವರ ಎರಡು ಕವನಗಳು | ರಮೇಶ ಹೆಗಡೆ | 84 |
| 37 | गुरुवायूरु - भूलोकवैकुण्ठम् | ವಿಜಯ ಸುಬ್ಬು ಭಟ್ | 85 |
| 38 | CHICAGO CONNECTION | Keshava Kote | 87 |
| 39 | “BE in PRESENT” | Mabal Bhat Sediyapu | 88 |
| 40 | Bye, Bye | Maya Bhagwat | 90 |
| 41 | The origin of life – a discussion | Krishnamurthy P. Gudehithlu | 92 |
| 42 | ಬೇಡುವೆನು ನಾನು… | ಶಂಕರ ಹೆಗಡೆ | 96 |
| 43 | Havyaka from Karki | Pratibha Kote | 97 |
| 44 | LET POSITIVE THOUGHTS PERVADE OUR LIVES | Prof. M. M. Hegde | 100 |
| 45 | "ಕುಮುದಾಳ ಭಾನುವಾರ" ಕಾವ್ಯ ಸಂಕಲನದ ಭಾಗ | ಅಮಿತಾ ಭಾಗವತ್ | 101 |

# ವಿಷಯಸೂಚಿ - Table of Contents-3


| | | | |
|---|---|---|---|
| 46 | Tale of the Two Seeds | Narayan (Chami) Hosmane | 103 |
| 47 | THE CITIES OF PALACES AND FORTS | Vijaya Bhat | 105 |
| 48 | ಅಂಕೋರ್ ವಾಟ್ ನೀವೂ ಒಮ್ಮೆ ನೋಡಿ ಬನ್ನಿ | ವೆಂಕಟರಮಣ ಭಟ್, ಕಜೆಹಿತ್ತಿಲು | 107 |
| 49 | Some Enchanted Evening... | Leela Rao Hegde | 115 |
| 50 | ಕೆಸರಿಬಾತ್ತೋ..... ಹೋಳಿಗೆನೋ? | Dr. Krishna Upadhya | 119 |
| 51 | Havyaka Krishi In The Information Age | Sumanth Hegde | 121 |
| 52 | ಕೊಡಗಿನಲ್ಲಿ ಹವ್ಯಕರು | C.S. Suresh | 126 |
| 53 | ಆ ಗತ ಜೀವನ ದಿನಗಳು | ಜಿ.ಟಿ ರಾಘವೇಂದ್ರ | 129 |
| 54 | Blue Whales | Akhila Adkoli | 132 |
| 55 | ಪ್ರಗತಿಪಥ | ವೈಶಾಲಿ ಹೆಗಡೆ | 133 |
| 56 | Our World | Unnati Bhat | 135 |
| 57 | Secret hero saves the day | Soham Kaje | 137 |
| 58 | Murdeshwara – My Ajja's Childhood Home | Jayaram Bhat Palamadai | 138 |
| 59 | Diwali | Jayani Bhat Palamadai | 138 |
| 60 | ಉಪಾಕರ್ಮ (ಬ್ರಹ್ಮೋಪದೇಶ) | ಕೆ. ಸುಕನ್ಯಾ ಭಟ್ | 139 |
| 61 | ಒಂದು ಹವ್ಯಕ ಕವನ | ನಾರಾಯಣ (ಚಾಮಿ) ಹೊಸಮನೆ | 141 |
| 62 | ಕಲಿಯುಗದ ಅಂತ್ಯ ಎಂದು? | ಶಂಕರ ಹೆಗಡೆ | 140 |
| 63 | Sringeri Mane | Meghana Mohan | 146 |
| 64 | HAA Office Bearers: 2016-2017 | Editorial Board | 148 |
| 65 | HAA Chapters and Vice-Presidents | Editorial Board | 149 |
| 66 | HAA Patron and Life members | Editorial Board | 150 |

# Havyotsava Sponsors

| DIAMOND SPONSOR | GOLD SPONSOR |
|---|---|
| Shaila & Ravikiran Tamragouri | Vijaya & Gopal Sundaresh |
| Prathibha & Vinayak Hegde | Vanamala & Laxminarayan |
| Annapurna & Subrahmanya Bhat | Vijaya & Ram Bhat |
| Kusuma & Ramachandra U Hosmane | Veena & Ravi Bhagwat |
| | Suma & Shripad Hegde |
| | Meenakshi & Shivarama Bhat |
| **SILVER SPONSOR** | Kusum & Naras Bhat |
| Sujata & Anil Adkoli | |
| Pratibha & Keshava Kote | **BRONZE SPONSORS** |
| Mala & Prakash Hegde | Megha & Shishir Hegde |
| Nisha & Rajesh | Sharda & Krishnamurthy Gudehithlu |
| Nirmala & Krishna Mohan | Sowmyashree & Adithya Seetharam |
| Leela & Shankar Hegde | Sahana & Muralidhar Kaje |
| Aparna & Sudhir Adkoli | Sowjanya & Ishwara Varnasi |
| Suma and Rajshankar | Shilpa & Brahmanaspati Shastri |
| Sunanda & Gopal Haregoppa | Bhagirathi and Shankarnarayan Adapathya |
| Sujata & Ganapathi Bhat | Mamata & Sachin C Halemane |
| Nirada & Ramachandra Bhat | Vidya and Venkat Bhat |
| Satyanarayan Hegde | Arati & Shripad Bhagwat |
| Vasudha & Krishna D. Bhat | Vidya & Gajanan Hegde |
| Rekha and Harsha Hegde | Krishna & Chaya Upadhya |
| | Harshavardhan Gangolli Bhat |

# ಅಧ್ಯಕ್ಷರ ಸಂದೇಶ



**ಅನಿಲ್ ಮತ್ತು ಸುಜಾತ ಅಡ್ಕೋಳಿ**
**ಬೋಲಿಂಗ್‌ಬ್ರೂಕ್, ಇಲಿನೊಯ್ಸ**

ಪ್ರೀತಿಯ ಹವ್ಯಕ ಬಂಧುಗಳೇ,

ತಮ್ಮೆಲ್ಲರಿಗೂ 17ನೇ ಹವ್ಯಕ ಸಮ್ಮೇಳನಕ್ಕೆ ಆತ್ಮೀಯ ಸ್ವಾಗತ. ಕಳೆದ ಒಂದೂವರೆ ವರ್ಷದಿಂದ ಈ ಸಂಘಟನೆಯ ಅಧ್ಯಕ್ಷತೆಯನ್ನು ನನಗೆ ವಹಿಸಿ ಕೊಡಲಾಗಿದ್ದು, ಈ ಅವಕಾಶವನ್ನು ನೀಡಿರುವ ನಿಮ್ಮೆಲ್ಲರಿಗೂ ನನ್ನ ಹೃತ್ಪೂರ್ವಕ ಧನ್ಯವಾದಗಳು.

1982ರಲ್ಲಿ ಭಾರತದಿಂದ ವಲಸೆ ಬಂದ ಹವ್ಯಕ ಹಿರಿಯರೆಲ್ಲ ಒಟ್ಟಾಗಿ ಸೇರಿ, ಅಮೆರಿಕಾದ ಹವ್ಯಕರನ್ನು ಒಂದುಗೂಡಿಸುವ ದೃಷ್ಟಿಯನ್ನು ಹೊಂದಿ ಈ ಒಂದು ಸಂಘಟನೆಯನ್ನು ಸ್ಥಾಪಿಸಿರುತ್ತಾರೆ ಎನ್ನುವುದು ನಿಮಗೆಲ್ಲ ತಿಳಿದ ವಿಷಯ. ಅವರ ಈ ದೂರದೃಷ್ಟಿ ಮತ್ತು ಅದನ್ನು ಕಾರ್ಯರೂಪಕ್ಕೆ ತಂದ ನಡೆ ಸದಾ ಸ್ಮರಣೀಯ. ಈ ಸಂಘಟನೆಯ ವತಿಯಿಂದ ಎರಡು ವರುಷಕೊಮ್ಮೆ ನಡೆಯುವ ಹವ್ಯಕ ಸಮ್ಮೇಳನ ಮತ್ತು ಸಂಘಟನೆಯ ವತಿಯಿಂದ ಹಬ್ಬಗಳ ಆಚರಣೆ ಮತ್ತು ಒಗ್ಗೂಡುವಿಕೆ - ಭಾರತದಿಂದ ವಲಸೆ ಬಂದು ಅಮೆರಿಕಾದಲ್ಲಿ ನೆಲೆಸಿರುವ ನಮ್ಮೆಲ್ಲರಿಗೂ 'Home away from Home' ಆಗಿದೆ. ನಮ್ಮ ಈ ಹವ್ಯಕ ಸಂಘಟನೆ ನಮ್ಮ ಹವ್ಯಕ ಸಂಪ್ರದಾಯ ಮತ್ತು ಸಂಸ್ಕೃತಿಯನ್ನು ಉಳಿಸಿ ಬೆಳೆಸಿಕೊಂಡು ಮುನ್ನಡೆಯಲು ಸದಾವಕಾಶವನ್ನೊದಗಿಸಿದೆ. ಹಾಗೆಯೆ ಈ ಸಂಘಟನೆಯ ವತಿಯಿಂದ ನಡೆಯುವ ಸಮ್ಮೇಳನ ನಮ್ಮೆಲ್ಲರ ಕಲೆ ಮತ್ತು ಕೌಶಲ್ಯವನ್ನು ಹೆಮ್ಮೆಯಿಂದ ಪ್ರದರ್ಶಿಸುವ, ಸಾಧನೆಗಳನ್ನು ಆಚರಿಸುವ ಒಂದು ವೇದಿಕೆ ಆಗಿದೆ.

ಪ್ರತೀ ವರ್ಷವೂ ಹೊಸ ಪೀಳಿಗೇಯ ಹವ್ಯಕರು ಅಮೆರಿಕಾ ಸೇರುತ್ತಲೇ ಇದ್ದಾರೆ ಮತ್ತು ನಮ್ಮ ಸಂಘಟನೆಯನ್ನೊಳಗೊಂಡು ಇದರ ಬಲವನ್ನು ಹೆಚ್ಚಿಸುತ್ತಲೇ ಇದ್ದಾರೆ. ಈ ನಮ್ಮ ನವ ಪೀಳಿಗೇಯ ನೂತನ ವಿಚಾರಗಳ ಆಳವಡಿಕೆಯಿಂದ ಈ ನಮ್ಮ ಸಂಸ್ಥೆ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತಾ ಸಮೃದ್ಧವಾಗಿ ಬೆಳೆಯುತ್ತಲಿದೆ. ನಮ್ಮ ಹಿಂದಿನ ಅಧ್ಯಕ್ಷರ ನೇತ್ರತ್ವದಲ್ಲಿ ಹವ್ಯಕ ವಿದ್ಯಾನಿಧಿ, ಹಾ-ಕೃಷಿ ಮತ್ತು ಹವ್ಯಕ Matrimony ಮೊದಲಾದ ಕಾರ್ಯಕ್ರಮಗಳು ಶುರುಮಾಡಲಾಗಿತ್ತು. ಇದೇ ಪ್ರಯತ್ನವನ್ನು ಮುಂದುವರಿಸುತ್ತಾ ನಾವು ಈ ಬಾರಿ HAA Volunteer Day ಅನ್ನುವ ಕಾರ್ಯಕ್ರಮವನ್ನೂ ಪ್ರಾರಂಭಿಸಿದ್ದೇವೆ. ವರ್ಷಕ್ಕೆ ಒಂದು ಬಾರಿಯಾದರೂ ನಾವೆಲ್ಲಾ ತಮ್ಮ ತಮ್ಮ ಹವ್ಯಕ chapter ವತಿಯಿಂದ ಒಗ್ಗೂಡಿ ಒಂದು ಸಮುದಾಯ (Community) ಸೇವೆಯನ್ನ ಸಲ್ಲಿಸುವ ಉದ್ದೇಶದಿಂದ ಆಗಸ್ಟ್ ತಿಂಗಳ ಎರಡನೇ ಶನಿವಾರವನ್ನು HAA Volunteer Day ಆಗಿ ನಿಗದಿಗೊಳಿಸಲಾಗಿದೆ. ಈ ಎಲ್ಲಾ ಕಾರ್ಯಕ್ರಮಗಳು ಯಶಸ್ವಿಯಾಗಿ ನೆಡೆದುಕೊಂಡು ಬಂದಿದ್ದು, ಇದೇ ರೀತಿ ಮುಂದೆ ನೆಡೆಯಲಿ ಎಂದು ನಮ್ಮ ಹಾರೈಕೆ. ಈ ನಿಟ್ಟಿನಲ್ಲಿ ತಮ್ಮೆಲ್ಲರ ಸಹಕಾರ ಮತ್ತು ಭಾಗವಹಿಸುವಿಕೆ ಅವಶ್ಯಕ.

ನಮ್ಮ ಹವ್ಯಕ ಸಂಸ್ಥೆ ಬೆಳೆಯಬೇಕಾದರೆ ಅದರಲ್ಲಿ ಎಲ್ಲಾ ಹವ್ಯಕರು ಭಾಗವಹಿಸಬೇಕು. ನಾವೆಲ್ಲರೂ ನಮ್ಮ ಬಂಧುಮಿತ್ರರನ್ನು ಈ ಹವ್ಯಕ ಸಂಘಟನೆಗೆ ಸೇರಲು ಪ್ರೋತ್ಸಾಹಿಸೋಣ ಮತ್ತು ಇರುವ ಸದಸ್ಯರ ತಮ್ಮ ದೂರವಾಣಿ ಸಂಖ್ಯೆ, ಇಮೇಲ್ ಮತ್ತು ಮನೆ ವಿಳಾಸವನ್ನ ಒಮ್ಮೆ ಪರಿಶೀಲನೆ ಮಾಡಿದಲ್ಲಿ, ಹಾ ಸಂಸ್ಥೆಯ ಸಂದೇಶವನ್ನು ಎಲ್ಲ ಹವ್ಯಕರಿಗೂ ತಲುಪಿಸಲು ಮತ್ತು ಸಂಘಟನೆಯ ಬಲವರ್ಧನೆಯಲ್ಲಿ ಸಹಾಯಕವಾಗುತ್ತದೆ.

ಈ ಭಾರಿಯ ಸಮ್ಮೇಳನವನ್ನು ನೆಡೆಸಲು ಸಹಾಯ ಮಾಡಿದ, ಪ್ರೋತ್ಸಾಹಿಸಿದ ಎಲ್ಲರಿಗೂ ಮತ್ತು ನಮ್ಮ Midwest Chapterನ ಎಲ್ಲ ಕಾರ್ಯಕರ್ತರಿಗೂ, ಎಲ್ಲಾ HAA Chapter ಉಪಾಧ್ಯಕ್ಷರಿಗೂ ನನ್ನ ಹೃತ್ಪೂರ್ವಕ ಧನ್ಯವಾದಗಳು.

ಬನ್ನಿ, ಎಲ್ಲರೂ ಸಂತೋಷದಿಂದ, ಉತ್ಸಾಹದಿಂದ  ಪ್ರತೀ ಎರಡು ವರುಷಕೊಮ್ಮೆ ಜರಗುವ ಈ ಸಮ್ಮೇಳನದಲ್ಲಿ ಭಾಗವಹಿಸ್ಯೋಣ, ಬಂದು-ಮಿತ್ರರನ್ನ ಭೇಟಿ ಮಾಡೋಣ, ಹೊಸ ಮಿತ್ರರನ್ನ ಮಾಡಿಕೊಳ್ಳೋಣ! ಈ ನಮ್ಮ ಸಂಘಟನೆಯ ಬಲವರ್ಧನೆಯ ನಿಟ್ಟಿನಲ್ಲಿ ಎಲ್ಲರೂ ಒಗ್ಗೂಡಿ ಕೆಲಸಮಾಡೋಣ.

ವಂದನೆಗಳೊಂದಿಗೆ,

**ಅನಿಲ್ ಮತ್ತು ಸುಜಾತ ಅಡ್ಕೋಳಿ**
**ಬೋಲಿಂಗ್‌ಬ್ರೂಕ್, ಇಲಿನೊಯ್ಸ**

# Editorial



**Krishnamurthy P. Gudehithlu**
**Bolingbrook, IL**

On the behalf of the souvenir committee, I welcome you all to the 17th biannual Havyaka Association of America convention at Chicago, 2017. Your presence is the most important thing at our convention. Second best thing that happens during this convention is the souvenir that you get to take it back with you along with the beautiful memories you experienced here. Whenever we visit any beautiful places, we always remember to bring back some souvenir to remind us about that visit and the beautiful memories. That is the main purpose of this souvenir, so that you go back with fantastic memories of the convention. Back at your home whenever you take a glance at this souvenir, you will be reminded about the great time you had here during the convention and we are, hopefully, giving you great reading materials for years to cherish.

We thank all the contributors to this souvenir by way of articles, poems, and arts. We have very diversified articles and poems in this souvenir. We have articles not only from adults but also from young adults and kids. We have heart touching personnel experience articles to travel experience. It is so amazing how one Innocent kid put her feelings into words when she moved from one place to another because of her parent's job. So is true of other kids for their knowledge in computers, or their imagination is commendable. I personally encouraged for articles in English, so that our younger generation will be attracted to read some of these articles and appreciate our Havyaka culture. So, we had great fun and excitement when we edited the articles. All these articles, poems and the art are the expression of people who are not a regular writer or a sahithis except for couple of people who are known for their writing. So, we did not do any major editing on these articles. Nevertheless, they are excellent and worth reading.

We also would like to extend our thanks to all Midwest Havyaka chapter members for their support in preparing this souvenir. On behalf of the Midwest chapter, we offer our sincere thanks to all our goodwill message contributors. We also would like to extend our thanks to Havyaka members for their efforts in getting outside sponsors for our souvenir. Similarly, our special thanks to our commercial sponsors included in the souvenir. A special request to all Havyakas to patronize the business mentioned in the souvenir. They have been kind enough to recognize our non-profit organization's need and our commitment to the society to advertise in our souvenir. They deserve our thanks and our business. Special thanks to all souvenir committee members for their help in finishing the souvenir. I would like to thank Mr. Shishir Hegde, Dr. Shankar Hegde and Mrs. Mala Hegde for editing/ proof reading etc., My heartfelt thanks to Mr. Shishir Hegde for his effort in all aspects of the preparation of this souvenir, without his help that would not have been possible to bring out this fine souvenir. I would also extend my thanks to Mr. & Mrs. Anil Adkoli, Mr. Raj Rajashankar and Mr. Ishwar Varanasi for their timely advice and suggestions. I personally take full responsibility for any mistakes, omissions that may have been overlooked.

# Message from Vice President of Midwest Chapter



**Rashmi Bhat Palamadai**
**Naperville, IL**

Dear Friends,

On behalf of the MidWest Havyaka Chapter, I welcome you all to the 2017 Havyaka Convention in the Chicagoland area. We look forward to a weekend of fun and festivities, while celebrating our Havyaka culture and heritage together!

As a first-generation Indian American, I grew up surrounded by the community of Havyaka friends that my parents created when they moved to the US more than 40 years ago. My parents could not take us back to India for every festival or holiday, but they rekindled that spirit of community and culture they left behind. They reached out to form connections, learned and laughed with each other, and raised their family in a new world.

Now as a parent, I see my children growing up in our community—excited to play with their Havyaka friends, and talk to their aunties, uncles, *ajji*s, and *ajja*s. After every event, I call my parents, who are retired to India, and tell them about our get-togethers. The bonds of friendship they built remain strong through time, and across the generations. This is the community I know my parents and their friends hoped to create when they started the Havyaka Association so many years ago.

Our family, culture, and traditions continue to strengthen us, give us an identity, and helps shape who we are as individuals. Someday our children will think of us warmly, and remember us celebrating our festivals, speaking our language, and sharing our experiences together.

Let us continue to seek compatibility with those around us. Let our goals be high—to become educated and enlightened. Let us strive to help each other and in doing so strengthen ourselves.

I am reminded of the Shloka:

*Om saha navavatu, saha nau bhunaktu,*
*saha veeryam karvaavahai |*
*Tejasvi naa vadheetha mastu*
*maa vid vishaa va hai |*
*Om shaantih, shaantih, shaantihi ||*

***Together let us be protected and nourished by God's blessings*. *Let us join our mental forces together for strength to benefit humanity. Let our efforts at learning be filled with light, joy, and the force of purpose. Let us never be poisoned with hatred for anyone. Let there be peace and serenity everywhere.***

Thank you to all of our dear friends who volunteered their time, energy, and enthusiasm towards this wonderful event. We appreciate having you here, and look forward to creating many happier memories together.

# 2017 HAA Convention Committees

**Cultural**
Muralidhar Kaje
Vijaya Ram Bhat
Leela Rao Hegde
Aditya Seetharam
Aparna Adkoli
Vinayak Hegde, Toronto
Anil ad Sujata Adkoli
Suma and Dr. K. Rajashankar
Sona Bhat
Kiran Adkoli (MA)

**Registration**
Ishwara and Sowjanya Varnasi
Prathibha and Keshava Kote
Dr. K. Rajashankar & Suma
Rashmi & Bala Palamadai
Aaditya and Sowmya Seetharam
Krishnamurthy and Sharada Gudehitlu
Vinayak and Meenakshi Hegde
Sudharma Rao, San Diego - CA
Kiran Adkoli, Boston - MA
Sunanda & Gopal Haregoppa (St Paul - MN)
Nikil Hegde, Detroit -MI

**Souvenir**
Krishnamurthy P. Gudehithlu
Mala Prakash Hegde
Shishir Hegde
Shankar Hegde
Anil & Sujatha Adkoli
Raj Rajashankar

**Decoration & Welcome**
Veena and Ravi Bhagwat
Ram & Vijaya Bhat
Vanamala and Laxminarayan

**Promotion and Outreach**
Veda Hegde, DC
Shaila and Ravi Tamregouri
Nalini and Rama Belegajje
Neerada and Rambhat
Nisha Bhat
Laxmi Bhat

**Event Setup**
Sachin HC
Brahmanaspathi
Sudhir Adkoli
Prakash Hegde
Chandan U
Suresh Bhat
Harshavardhana Shastry
Bala Palamadai

**Picnic**
Prakash Hegde
Vijaya and Gopal Sundaresh
Sudhir Adkoli
Sandeep
Ravi Bansal
Nikil and Snigdha Bhat
Bala Palamadai

**Food**
Sujata Adkoli
Suma Rajashankar
Nirmala Mohan
Mamta Sachin
Aarathi Bhagwat
Laxmi Bhat
Bhagirathi Adapathya
Neerada Bhat
Vanamala Laximarayan
Shaila Tamregouri
Veena Bhagwat
Kiran and Anitha Adkoli, MA
Ravi Halker, CA
Niyata Shastry
Sowjanya Bhat
Sahana Kaje
Shilpa Shastri

**Hospitality**
Sachin HC
Gopal Sundaresh
Keshava Kote
Shankar Hegde
Rajashankar & Suma
Krishnamurthy & Sharda
Krishna Mohan

**Transporation**
Harshavardhan Shastri
Keshava Kote
Sudhir Adkoli

**Finance**
Shankar Hegde
Anil & Sujata Adkoli
Ravi Bhagwat
Laxminarayan
Ram Belagajje
Ram Bhat
Ramanchandra Bhat, Toledo
Rajashankar K
Harsha Hegde

**Promotion and Outreach**
Ishwar Varanasi Sowjanya
Anil and Sujata Adkoli
Shishir and Megha Hegde
Keshav and Prathibha Kote
Ram & Vijaya Bhat
Krishna Mohan
Suma and Roy Hegde, KS
Nikhil Hegde, Detroit

Gopal Haregoppa ( MN)
Anil Padyana ( Boston)
Shivu Bhat ( DC)
Rajashankar and Suma
Shankar Hegde
Shubha and Anand Hegde
Vishali and Madhu Matthihalli

## Youth Committee

Sona Bhat
Rashmi Bhat
Sheila Guddehitlu
Anusha Adkoli
Medha Rajashankar
Meghana Mohan
Neha Adkoli
Akash Bhat ( DC)
Ankith Adkoli ( MA)
Manoj Bhagwat( IN)

## MC

Aparna Adkoli
Rashmi P
Shishir Hegde

## Science & Art Committee

Suma RajaShankar
Leela Rao Hegde
Nirmala Mohan
Nisha Bhat

## Treasurer

Shankar Hegde

## Web & Communications

Ishwar Varanasi
Anil and Sujata Adkoli
Shishir Hegde

# ಸ್ವಾಗತವು ತಮಗೆ



**ರಾಮ ಬೆಳಗಜೆ**
**ಕಾರ್ಮೆಲ್, ಇಂಡಿಯಾನಾ**

**<u>ಸ್ವಾಗತ ಕವನ</u>**

ಸ್ವಾಗತವು ಸ್ವಾಗತವು ಸ್ವಾಗತವು ನಿಮಗೆ
ಆಗಮನ ಸುಖವಾಗಲೆನುತ ಸಮ್ಮೇಳನಕೆ ||

ಪೂರ್ವ ಪಶ್ಚಿಮ ಕೆನಡಾ ಬಂಧುಗಳೇ
ಮಧ್ಯವಲಯದ ಅತಿಪ್ರೇಮ ಸಿಂಧುಗಳೇ
ಹಿರಿಮೆಯ ನುಡಿಯವರೇ, ಹವ್ಯಕಾಭಿಮಾನಿಗಳೇ
ಆದರದ ಸ್ವಾಗತವು ಮುದ ಜನರೇ ತಮಗೆ ||

ಹವ್ಯಕರೇ ಬನ್ನಿ ಮಧುರ ಸಮ್ಮಿಲನವಿದೆನ್ನಿ
ನಿಮಗಾಗಿ ಕಾದಿರುವ ಸಂಭ್ರಮಕೆ ಕಳೆತನ್ನಿ
ಹಾರೈಸಿ ಮನಸಾರ ಶುಭಸಮಯ ನಿಮಗೆ
ಆದರದ  ಸ್ವಾಗತವ ನೀಡುವೆವು ತಮಗೆ ||

ಕಳೆದರೂ ಯುಗ ಯುಗವು ಬೆಳಗಲಿ ಹವ್ಯಕರು
ಚಿರವಾಗಲಿ ಸಪ್ತದಶಮ ಹವ್ಯಕ ಸಮ್ಮೇಳನವು
ಕೋರುವೆವು ಶ್ರೇಯಸ್ಸು ಸ್ನೇಹಿತರೆ ನಿಮಗೆ
ಆದರದ ಸ್ವಾಗತವು ಹವ್ಯಕರೇ ತಮಗೆ ||

ಸ್ವಾಗತವು ಸ್ವಾಗತವು ಸ್ವಾಗತವು ನಿಮಗೆ
ಆಗಮನ ಸುಖವಾಗಲೆನುತ ಸಮ್ಮೇಳನಕೆ ||

**<u>ಬಾಳಲಿ ಬೆಳಗಲಿ -  ಅಮೆರಿಕಾದ ಹವ್ಯಕ ಸಂಘ</u>**

ಬಾಳಲಿ ಬೆಳಗಲಿ  ...!  ಅಮೆರಿಕಾದ ಹವ್ಯಕ ಸಂಘ
ಜ್ಞಾನ ಜ್ಯೋತಿ ಬೆಳಗಲಿ ...!  ಅಮೆರಿಕಾದ ಹವ್ಯಕ ಸಂಘ

ದಶದಿಕ್ಕುಗಳಲ್ಲಿ ನಾದ ಮಾಡಲಿ ಹವ್ಯಕ ಸಂಘ
ಕೀರ್ತಿಕಲಷವಾಗಿ ಮೆರೆಯಲಿ ಹವ್ಯಕ ಸಂಘ
ಅಕ್ಷಯ ವೃಕ್ಷವಾಗಿ ಬೆಳೆಯಲಿ ಹವ್ಯಕ ಸಂಘ
ಆಲದ ಮರದಂತೆ ನೆರಳ ನೀಡಲಿ ಹವ್ಯಕ ಸಂಘ
ನಾರೀಕೇಳ ಗಗನ ಚುಂಭಿತವಾಗಲಿ ಹವ್ಯಕ ಸಂಘ
ಸಾಹಿತ್ಯ ಸರಸ್ವತಿಗೆ ಕೀರ್ತಿ ತರಲಿ ಹವ್ಯಕ ಸಂಘ
ಅಮೆರಿಕಾದಲಿ ಹವ್ಯಕರ ಬಾವುಟ ಹಾರಿಸಿದೆ ಹವ್ಯಕ ಸಂಘ
ಬೆಡಗಿನ ಹೆಂಗಳೆಯರು ಆರತಿ ಬೆಳಗಿದ ಹವ್ಯಕ ಸಂಘ

ಬನ್ನಿರಿ ಹವ್ಯಕ ಕಂದಮ್ಮಗಳೇ ಎಂದು
ಕೈಬೀಸಿ ಕರೆವ ಹವ್ಯಕ ಸಂಘ
ಮಾತೆ ರಾಜೇಶ್ವರಿಯು ಹವ್ಯಕ ಮಾತೆಯು
ಅತಿಮಮತೆಯಿಂದ ಹರಸುತ್ತಿರುವಳು
ಮುತ್ತಿನಂತ ನಮ್ಮ ಹವ್ಯಕರ ಕಣ್ಮಣಿಗಳೇ
ಬಾಳಿರಿ ಬದುಕಿರಿ  ಶಾಂತಿ ಸಂತೋಷ ಪಡೆಯಿರಿ ಎಂದು

# ಸಂಪಾದಕ ಮಂಡಳಿ



ಕೃಷ್ಣಮೂರ್ತಿ ಗುಡೆಹಿತ್ತಲು



ಶಿಶಿರ ಹೆಗಡೆ



ಶಂಕರ ಹೆಗಡೆ



ಮಾಲಾ ಹೆಗಡೆ

16th Biennial Convention
HAA 2015
July 3-4 2015, Washington DC

# ವಾಷಿಂಟಿಗ್ಟನ್ ಡಿ.ಸಿ. ೧೬ನೇ ಹವ್ಯಕ ಸಮ್ಮೇಳನದ ವರದಿ



**ರಾಮಕೃಷ್ಣ ಭಟ್ಟ ಮತ್ತು ಸಂಗಡಿಗರು**
**ವಾಶಿಂಗ್‌ಟನ್, ಡಿ. ಸಿ.**

16ನೇ ಅಖಿಲ ಅಮೇರಿಕ ಹವ್ಯಕರ ದ್ವೈವಾರ್ಷಿಕ ಸಮ್ಮೇಳನ ಅಮೇರಿಕ ದೇಶದ ರಾಜಧಾನಿಯಾದ ವಾಷಿಂಗ್ಟನ್ ಡಿಸಿ ಪ್ರದೇಶದಲ್ಲಿರುವ ವರ್ಜೀನಿಯ ರಾಜ್ಯದ ಷಾಂಟಿಲಿ ನಗರದಲ್ಲಿ ಹೊಸದಾಗಿ ನಿರ್ಮಿತವಾದ 'ಚಿನ್ಮಯ - ಸೋಮನಾಥ್' ಪ್ರಾಂಗಣದಲ್ಲಿ ಜುಲೈ 3 ಮತ್ತು 4ರಂದು ಬಹಳ ವಿಜ್ರಂಭಣೆಯಿಂದ ಜರುಗಿತು. ಅತ್ಯಂತ ಸೊಗಸಾಗಿ, ಅಚ್ಚುಕಟ್ಟಾಗಿ, ವ್ಯವಸ್ಥಿತವಾಗಿ ಏರ್ಪಡಿಸಲಾಗಿದ್ದ ಈ ಎರಡು ದಿನಗಳ ಸಮ್ಮೇಳನದಲ್ಲಿ ಅಮೇರಿಕದ ಉದ್ದಗಲದಿಂದ ಸುಮಾರು 440 ಹವ್ಯಕರು ಪಾಲ್ಗೊಂಡು, ಹವ್ಯಕ ಇತಿಹಾಸವನ್ನು ನೆನಪಿಸುವುದರ ಜೊತೆಗೆ ತಮ್ಮ ಮುಂದಿನ ತಲೆಮಾರುಗಳಿಗೂ ಹವ್ಯಕ ಸಂಸ್ಕೃತಿಯ ದೀಪ ಬೆಳಗಿಸಿದರು.

ಪಿಕ್‌ನಿಕ್ ನಿಂದ ಹಿಡಿದು, ಪಲ್ಲಕ್ಕಿ ಉತ್ಸವ ದಿಂದ ಆರಂಭವಾಗಿ, ಸಂಗೀತ, ನಾಟಕ, ನೃತ್ಯ, ಯಕ್ಷಗಾನ, ಜಾನಪದಕಲೆ, ಫ್ಯಾಷನ್ ಶೋ, ಜುಲೈ ೪ ರ ಪಟಾಕಿ ಪ್ರದರ್ಶನ ಮುಂತಾದ ಕಣ್ಮನ ಸೆಳೆಯುವ ಕಾರ್ಯಕ್ರಮಗಳ, ಜೊತೆಗೆ ಕರ್ನಾಟಕದಿಂದ ಬಂದ ಹೆಸರಾಂತ ಕಲಾವಿದರಾದ ಸಂಗೀತಾ ಕಟ್ಟಿ, ಜೂನಿಯರ್ ಶಂಕರ, ನಾಗರಾಜ ಹೆಗಡೆ ಹಾಗೂ ವಿನಯ ಹೆಗಡೆಯವರ ಸಾಂಸ್ಕೃತಿಕ ಹಾಗೂ ಮನೋರಂಜನಾ ಕಾರ್ಯಕ್ರಮ ಜನರನ್ನು ಮಾಯಾ ಲೋಕಕ್ಕೆ ಕರೆದೊಯ್ಯಿತು. ಸಮ್ಮೇಳನದ ಸವಿನೆನಪಿಗೆ ಹವ್ಯಕರ ಪರಂಪರೆ, ಭಾಷೆ ಸಂಸ್ಕೃತಿಯ ಪಕ್ಷಿನೋಟವುಳ್ಳ ಉತ್ತಮ ಬರಹಗಳು 'ಹವ್ಯಸಿರಿ' ಸ್ಮರಣ ಸಂಚಿಕೆಯಾಗಿ ಬಿಡುಗಡೆಯಾಯಿತು. ಸೃಜನಶೀಲ ಹವ್ಯಾಸಗಳನ್ನು ಹಾಗೂ ಮಕ್ಕಳ ವಿಜ್ಞಾನ ವಿಶೇಷತೆಗಳನ್ನು ಪ್ರದರ್ಶಿಸಲು ಕಲಾ ವಿಜ್ಞಾನ ಮೇಳ ಉತ್ತಮ ವೇದಿಕೆಯಾಯಿತು. ಪೂಜೆ ಪುನಸ್ಕಾರ ಸಂಸ್ಕೃತಿಯುಳ್ಳ ಹವ್ಯಕ ಸಮುದಾಯದ ಸಂಕೇತವಾಗಿ ಶಾಸ್ತ್ರೋಕ್ತವಾದ "ಶ್ರೀ ರುದ್ರಾಭಿಷೇಕ" ಪೂಜಾ ಕಾರ್ಯಕ್ರಮದೊಂದಿಗೆ ಸರ್ವವನ್ನು ಭಗವಂತನಿಗೆ ಸಮರ್ಪಿಸಲಾಯಿತು.

ಸಮ್ಮೇಳನ ಜುಲೈ 3 ರಂದು ಬೆಳಗ್ಗೆ ಹೊರಾಂಗಣ (ಪಿಕ್‌ನಿಕ್, ಆಟೋಟ, ಪರಸ್ಪರ ಪರಿಚಯ) ಕಾರ್ಯಕ್ರಮಗಳೊಂದಿಗೆ ಆರಂಭವಾಯಿತು. ತಾಯ್ನಾಡಿಂದ ಸಮ್ಮೇಳನಕ್ಕೋಸ್ಕರ ಸ್ಪೆಶಲ್ ಅಗಿ ತರಿಸಲಾದ ತೊಡೆದೇವು ಅವತ್ತಿನ ಪ್ರಮುಖ ಆಕರ್ಷಣೆಯಾಗಿತ್ತು. ಮಕ್ಕಳಿಗಾಗಿ ವಿವಿಧ ಆಟೋಟ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ಪಿಕ್‌ನಿಕ್ ಊಟದ ನಂತರ ಎಲ್ಲರು ತಮ್ಮ ತಮ್ಮ ಮನೆ/ಹೋಟೆಲ್ ಗಳಿಗೆ ತೆರಳಿ, ಫ್ರೆಷ್ ಆಗಿಕೊಂಡು ಅಪ್ಪಟ ಹವ್ಯಕ ಉಡುಪುಗಳನ್ನು ಧರಿಸಿ ಸಾಯಂಕಾಲದ ಉದ್ಘಾಟನಾ ಸಮಾರಂಭಕ್ಕೆ 'ಚಿನ್ಮಯ - ಸೋಮನಾಥ್' ಪ್ರಾಂಗಣಕ್ಕೆ ಆಗಮಿಸುತ್ತಿದ್ದಂತೆ ನೋಂದಣಿ ಹಾಗೂ ಸ್ವಾಗತ ಸಮಿತಿಯವರು ಎಲ್ಲರನ್ನು ಸ್ವಾಗತಿಸಿ, ಅವರವರ ನಾಮ ಫಲಕಗಳನ್ನು ಹಾಗು ನೋಂದಣಿ ಕಿಟ್ ಬ್ಯಾಗನ್ನು ಸಮ್ಮೇಳನಾರ್ಥಿಗಳಿಗೆ ಒದಗಿಸಿದರು.

ಜುಲೈ 3 ಶುಕ್ರವಾರ ಸಂಜೆಯ ಹೊತ್ತಿಗೆ ಹೂವು, ರಂಗೋಲಿ, ಬ್ಯಾನರ್, ಮತ್ತಿತರ ಆಕರ್ಷಣೆಗಳಿಂದ ಅಲಂಕರಿಸಲಾದ ಚಿನ್ಮಯ ಮಂದಿರ ಹಿತಕರ ವಾತಾವರಣ ನಿರ್ಮಿಸಿತ್ತು. ಪಲ್ಲಕ್ಕಿಯ ನಿರ್ಮಾತೃ ರಾಜ್ ಪರ್ತಜೆಯವರದೇ ವ್ಯಾನ್‌ನಲ್ಲಿ ಆಗಲೇ ಸಿಂಗಾರಗೊಂಡು ಕೂತಿದ್ದ ಪಲ್ಲಕ್ಕಿಯಲ್ಲಿ

ಗಣೇಶನ ವಿಗ್ರಹ ಇಟ್ಟು, ನಾಲ್ಕು ಜನರು ಅದನ್ನು ಭುಜಗಳಿಗೇರಿಸಿ ಶಂಖನಾದ, ಹಾಗೂ ತಾಳ, ಘಂಟೆ, ವಾದ್ಯಗಳ ಜೊತೆಗೆ ಚಿನ್ಮಯ ಮಿಷನ್ ಪ್ರಾಂಗಣದಲ್ಲಿ ಪ್ರದಕ್ಷಿಣೆ ಬಂದು **"ಶಂಕರ"** ಸಭಾಂಗಣದೊಳಕ್ಕೆ ತಂದರು. ಈ ಪಲ್ಲಕ್ಕಿ ಉತ್ಸವ ಜನರನ್ನು ಯಾವುದೊ ದೇವಲೋಕಕ್ಕೆ ಕೊಂಡುಹೋದ ಅನುಭವ. ನಂತರ ಶ್ರೀ ಎಂ.ಏನ್. ಭಟ್ ಮದ್ಗುಣಿ (ಹವ್ಯಕ ಮಹಾಸಭೆಯ ಮಾಜಿ ಅಧ್ಯಕ್ಷರು) ಅವರು ಗಣೇಶನಿಗೆ ದೀಪ ಬೆಳಗಿಸುತ್ತಿದ್ದಂತೆಯೆ, ವಾಷಿಂಗ್ಟನ್ ಡಿಸಿ ಚಾಪ್ಟರ್ ನ ಪುಟಾಣಿ ಮಕ್ಕಳಿಂದ **"ಶರಣು ಶರಣಯ್ಯ ಶರಣು ಬೆನಕ"** ಪ್ರಾರ್ಥನೆಯೊಂದಿಗೆ ಸಮ್ಮೇಳನಕ್ಕೆ ಚಾಲನೆ ನೀಡಲಾಯಿತು. ಪ್ರಸಕ್ತ ಅಮೇರಿಕ ಹವ್ಯಕ ಸಂಘದ ಅಧ್ಯಕ್ಷ ಹಾಗೂ ಸಮ್ಮೇಳನದ ಸಂಚಾಲಕರಾದ ಶಿವು ಭಟ್ ಅವರು ಎಲ್ಲರನ್ನು ಸಮ್ಮೇಳನಕ್ಕೆ ಸ್ವಾಗತಿಸಿ ಎರಡು ದಿನಗಳ ಕಾರ್ಯಕ್ರಮಗಳ ಇಣುಕು ನೋಟ ನೀಡಿದರು. ಸಮ್ಮೇಳನದ ಸಾಂಸ್ಕೃತಿಕ ಕಾರ್ಯಕ್ರಮವನ್ನು ನಮ್ಮ ಭವ್ಯ ಭಾರತೀಯ ನೃತ್ಯ ಕಲೆಯ ಪ್ರಮುಖ ಅಂಗವಾದ ಭರತನಾಟ್ಯ ಕಾರ್ಯಕ್ರಮದೊಂದಿಗೆ ಆರಂಭಿಸಲಾಯಿತು. ಬಳಿಕ ನೃತ್ಯ ಸಂಗಮ, ಕೋಲಾಟ, ಇತ್ಯಾದಿ ನೃತ್ಯ ಪ್ರಾಕಾರಗಳ ಪ್ರದರ್ಶನದೊಂದಿಗೆ ಸಮ್ಮೇಳನದ ರಂಗಸ್ಥಳ ಗರಿಗೆದರಿ ಸಜ್ಜಾಯಿತು.

ಕರ್ನಾಟಕಕ್ಕೆ ಹೋಗಿ ವರ್ಷಗಟ್ಟಲೆ ಹವ್ಯಕ ಜನರೊಂದಿಗೇ ಇದ್ದು ಆ ಸಮುದಾಯದ ಬಗ್ಗೆ ವಿಶೇಷ ಅಧ್ಯಯನ ನಡೆಸಿ ಪುಸ್ತಕಗಳನ್ನೂ ಬರೆದಿರುವ, ಹವ್ಯಕ ಕನ್ನಡ ಭಾಷೆಯಲ್ಲಿ ಮಾತಾಡಲೂಬಲ್ಲ ಅಮೆರಿಕನ್ ಮಹಿಳೆ 'ಹೆಲೆನ್ ಉಲ್ರಿಚ' ಸಮ್ಮೇಳನದಲ್ಲಿ ವಿಶೇಷ ಅತಿಥಿಯಾಗಿ ಬಂದು, ಸಮ್ಮೇಳನದ ಸವಿನೆನಪಿಗೆ ಹವ್ಯಕರ ಪರಂಪರೆ, ಭಾಷೆ ಸಂಸ್ಕೃತಿಯ ಪಕ್ಷಿನೋಟವುಳ್ಳ 'ಹವ್ಯಸಿರಿ' ಸ್ಮರಣ ಸಂಚಿಕೆಯನ್ನು ಬಿಡುಗಡೆ ಮಾಡಿ, ಹವ್ಯಕ ಸಂಸ್ಕೃತಿ ಅವತ್ತು ಇವತ್ತು ಎಂಬ ಕುರಿತು ಉಪನ್ಯಾಸವಿತ್ತರು. ನಂತರ ಸಾಂಸ್ಕೃತಿಕ ಹಾಗೂ ಮನೋರಂಜನಾ ಕಾರ್ಯಕ್ರಮಗಳು ತಾಮುಂದು ತಾಮುಂದು ಎಂದು ರೆಡಿ ಆಗಿನಿಂತಿದ್ದವು. ಶುಕ್ರವಾರ ಸಂಜೆಯ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಮುಖ್ಯ ಆಕರ್ಷಣೆ ವಿನಯ್ ಹೆಗಡೆ ಅವರಿಂದ 'ಬೆಳಕಿನ ಚಿತ್ತಾರ'. ಅವರ ಗ್ಲೋ ಆರ್ಟ್ ಎಲ್ಲರನ್ನು ಬೆರಗುಗೊಳಿಸಿತು. ನಂತರ ವಿಶೇಷ ಆಹ್ವಾನಿತ ಕಲಾವಿದೆ ಸಂಗೀತಾ ಕಟ್ಟಿ ಕುಲಕರ್ಣಿ ಅವರಿಂದ ಭಾವ ಭಕ್ತಿಧಾರೆ ಗಾಯನ ಕಾರ್ಯಕ್ರಮ ಎಲ್ಲರನ್ನು ಗಾನಲೋಕಕ್ಕೆ ಕರೆದೊಯ್ಯಿತು. ಭೋಜನದ ನಂತರ ಶ್ರೀ ಪರಮ್ ಭಟ್ ಮುಂದಾಳತ್ವದ ಯಕ್ಷಮಿತ್ರ ತಂಡದವರಿಂದ 'ಶಿವಪಂಚಾಕ್ಷರಿ ಮಹಿಮೆ' ಯಕ್ಷಗಾನ ಪ್ರದರ್ಶನ. ಕರಾವಳಿಯ ಪ್ರಸಿದ್ಧ ಯಕ್ಷಗಾನ ಮೇಳಗಳಿಗೆ ಯಾವ ರೀತಿಯಲ್ಲೂ ಕಮ್ಮಿಯಿಲ್ಲದ ಪೂರ್ಣಪ್ರಮಾಣದ ಮೇಳ ಟೊರಾಂಟೊ(ಕೆನಡಾ)ದ ಯಕ್ಷಮಿತ್ರ ತಂಡ. ಸುಮಾರು ಎರಡು ಗಂಟೆ ಅವಧಿಯ ಯಕ್ಷಗಾನ ಅತ್ಯದ್ಭುತವಾಗಿತ್ತು. ಇದರ ನಡುವೆ ಮಕ್ಕಳಿಗಾಗಿ ಸ್ಪೆಶಲ್ "Jeopardy"(ರಸಪ್ರಶ್ನೆ) **ಯಜುರ್ವೇದ** ಸಭಾಂಗಣದಲ್ಲಿ ನಡೆಯಿತು.

ಶನಿವಾರ ಬೆಳಗ್ಗೆ ಉಪಾಹಾರದ ನಂತರ ಮಕ್ಕಳು ಹಾಗೂ ದೊಡ್ಡವರಿಂದ 'ಕಲಾ ವಿಜ್ಞಾನ ಮೇಳ'ದಲ್ಲಿ ವಸ್ತುಪ್ರದರ್ಶನ ಪ್ರಾತ್ಯಕ್ಷಿಕೆಗಳು ಪ್ರದರ್ಶಿತವಾದವು. ಅಲ್ಲದೆ ಭಾರತದಿಂದ ಬಂದ ವಿನಯ ಹೆಗಡೆ ಅವರಿಂದ ಆವೆ ಮಣ್ಣಿನಲ್ಲಿ ಮಕ್ಕಳಿಗೆ ಮೂರ್ತಿ ಮಾಡುವ ವರ್ಕ್-ಶಾಪ್. ಅದರಲ್ಲಿ ಮಾಡಿದ ಗೋಪಾಲ್ ಭಟ್ ಅವರ ಮುಖ ಪ್ರತಿಮೆ ಜೀವ ತುಂಬಿದಂತೆ ಇತ್ತು. 'ವಿಜ್ಞಾನ ಕಲಾ ಮೇಳ' ಮಕ್ಕಳು ಹಾಗು ದೊಡ್ಡವರ ಕ್ರಿಯೇಟಿವಿಟಿ ಮತ್ತು ಪ್ರತಿಭೆಯನ್ನು ಹವ್ಯಕ ಸಮುದಾಯಕ್ಕೆ ಪರಿಚಯಿಸುವಲ್ಲಿ ಬಹಳ ಮುಖ್ಯ ಪಾತ್ರವಹಿಸಿತು. ಪಕ್ಕದ ಹಾಲ್‌ನಲ್ಲಿ ರುದ್ರಾಭಿಷೇಕ ಪೂಜಾಕಾರ್ಯಕ್ರಮವನ್ನು ರಾಜೇಂದ್ರ ಭಟ್ಟರು ನಡೆಸಿ ಕೊಟ್ಟರು. "ಶ್ರೀ ರುದ್ರ" ಪಠಣ ದಲ್ಲಿ ದೊಡ್ಡವರ ಜೊತೆಗೆ ಮಕ್ಕಳು ಸಹ ತಮ್ಮ ದನಿಗೂಡಿಸಿದರು. ಮಂಗಳಾರತಿಯ ಮೊದಲು ಅಮೇರಿಕ ಹವ್ಯಕ ಒಕ್ಕೂಟದ ಹುಟ್ಟಿಗೆ ಕಾರಣೀಕರ್ತರಾಗಿ ಹಾಗೂ ಸಮುದಾಯದ ಒಗ್ಗೂಟಕ್ಕೆ ಕಳೆದ ಹಲವಾರು ದಶಕಗಳಿಂದ ಹಿತೈಷಿಗಳಾಗಿ (ಸಾಮಾಜಿಕ ಹಾಗು ಆರ್ಥಿಕವಾಗಿ) ಪ್ರೋತ್ಸಾಹ ನೀಡುತ್ತ ಬಂದ ಗಿರಿನಾರಿ ಮತ್ತು ರಾಮಚಂದ್ರ ಭಟ್ಟ ಹಾಗೂ ಕುಸುಮ ಮತ್ತು ರಾಮ ಹೊಸಮನೆ ದಂಪತಿಗಳಿಗೆ ಧ್ರುವ ಕಂಜರ್ಪಣೆ ದಂಪತಿಗಳು ಫಲಕ ನೀಡಿ, ಶಾಲು ಹೊದಿಸಿ ಸನ್ಮಾನಿಸಿದರು. ನಂತರ 'ಅಯಂ ಬ್ರಹ್ಮನ್' (ಅನಿವಾಸಿ ಯುವಪೀಳಿಗೆಗೆ ಭಾರತೀಯ ಸಂಸ್ಕೃತಿ, ಮುಖ್ಯವಾಗಿ ಶಂಕರಭಗವತ್ಪಾದರ ತತ್ತ್ವಗಳನ್ನು ಅಮೆರಿಕನ್ ಇಂಗ್ಲಿಷ್ ಭಾಷೆಯಲ್ಲೇ ಸುಲಭವಾಗಿ ಅರ್ಥವಾಗುವಂತೆ ಡಾ.ಮೈ.ಶ್ರೀ.ನಟರಾಜ ಅವರು ಬರೆದಿರುವ ಕಿರುನಾಟಕ) ಪುಸ್ತಕ ಬಿಡುಗಡೆ ಮಾಡಲಾಯಿತು. ಅದರ ಕೊನೆಗೆ ಮಹಾಮಂಗಳಾರತಿ ಆಗಿ ಪ್ರಸಾದ ವಿತರಣೆ ಸಮಯದಲ್ಲಿ ಪುಟಾಣಿ ಮಗುವಿನಿಂದ ಭಗವದ್ಗೀತೆ ಕಂಠಪಾಠ ಪಠಣ. ಅದೇ ದಿನ ಅಮೇರಿಕ ದೇಶದ ಹುಟ್ಟು ಹಬ್ಬದ ಪ್ರಯುಕ್ತ ಮಕ್ಕಳು ಅಮೇರಿಕ ದೇಶದ ಪತಾಕೆಯೊಂದಿಗೆ 'Pledge of Allegiance' ಹೇಳುವುದರ ಮೂಲಕ ರಾಷ್ಟ್ರಕ್ಕೆ ಗೌರವ ಸಲ್ಲಿಸಿದರು. ತದನಂತರ ವಾಷಿಂಗ್ಟನ್

ಡಿಸಿ ಹವ್ಯಕ ಮಕ್ಕಳು "ಆದಿ ಶಂಕರಾಚಾರ್ಯ" ಕಿರುನಾಟಕವನ್ನು ಬಹಳ ಸೊಗಸಾಗಿ ಮಾಡಿತೋರಿಸಿ ಹವ್ಯಕ ಪರಂಪರೆ ಹಾಗು ಇತಿಹಾಸವನ್ನು ಜನರಿಗೆ ನೆನಪಿಸಿದರು.

ಭಾರತದಿಂದ ಬಂದಿರುವ ಸಂಗೀತ ಕಲಾವಿದ ನಾಗರಾಜ ಹೆಗಡೆಯವರಿಂದ ಹಿಂದೂಸ್ಥಾನಿ ಶೈಲಿಯಲ್ಲಿ ಅಮೋಘ ಕೊಳಲು ವಾದನ. ಶುದ್ಧಸಾರಂಗ್ ರಾಗದ ಪ್ರಸ್ತುತಿಯ ನಂತರ ಭಟಿಯಾಲ್ ಮಾಂಡ್ ಮಿಶ್ರಣದ ಧುನ್ ಮತ್ತೊಂದು ಪಹಾಡಿ ರಾಗದ ಧುನ್‌ಗಳನ್ನು ಕೇಳಿದಾಗ ಗೋಕುಲದಲ್ಲಿ ಕೃಷ್ಣ ಬಹುಶಃ ಇದೇರೀತಿ ಕೊಳಲು ನುಡಿಸುತ್ತಿದ್ದನಿರಬಹುದು ಎಂದುಕೊಂಡರು ಶ್ರೋತೃಗಳು. ಇದರ ನಡುವೆ ಮಕ್ಕಳಿಗಾಗಿ ಸ್ಪೆಶಲ್ "**Every Day Illusion**" ಎಂಬ ಪ್ರೊಗ್ರಾಂನ್ನು ತೇಜಸ್ವಿ (**Shankar Junior**) ಅವರು ಮಕ್ಕಳಿಗೆ ಅರ್ಥೈಸಿದರು. ಮಧ್ಯಾಹ್ನದ ನಂತರವೂ ಒಂದಾದ ಬಳಿಕ ಒಂದು ಉತ್ಕೃಷ್ಟ ಮನರಂಜನಾ ಕಾರ್ಯಕ್ರಮಗಳು. ನೃತ್ಯ, ಹಾಡು, ಫ್ಯಾಷನ್ ಶೋ ಮುಂತಾದವುಗಳ ಜೊತೆಯೇ ಹವ್ಯಕ ರೀತಿರಿವಾಜುಗಳನ್ನು ನೆನಪಿಸುವ ಪ್ರಹಸನಗಳು, ಬಾಸ್ಟನ್ ಹವ್ಯಕರ 'ಗಪ್ಪತ್ ಹೆಗಡೆ ಕಗ್ಗೊಲೆ ಪ್ರಹಸನ' - ಶೋಲೆ ಗಬ್ಬರ್ ಸಿಂಗ್ ದೃಶ್ಯಾವಳಿಯ ಹವ್ಯಕ ಅವತರಣಿಕೆ ಹೊಟ್ಟೆಹುಣ್ಣಾಗುವಷ್ಟು ನಗಿಸಿತು. ನಂತರ ಪ್ರಸಕ್ತ ಕಾರ್ಯದರ್ಶಿ ಉಷಾ ಕೂಳೂರು ಸಂಯೋಜಿಸಿದ ಕಾರ್ಯಕ್ರಮ ಸ್ವರಾಂಜಲಿ. ಅಮೇರಿಕಾ ಮತ್ತು ಕೆನಡಾದ ವಿವಿಧ ಊರುಗಳಲ್ಲಿ ನೆಲೆಸಿರುವ ಸಂಗೀತ ಮತ್ತು ವಾದ್ಯಗಳನ್ನು ಅಭ್ಯಸಿಸುತ್ತಿರುವ ಪುಟ್ಟ ಮಕ್ಕಳನೇಕರು ಶ್ರೀ ವಿನಾಯಕ ಹೆಗಡೆ ಅವರ ನಿರ್ದೇಶನದಲ್ಲಿ ಪ್ರಸ್ತುತಪಡಿಸಿದ 'ಸ್ವರಾಂಜಲಿ' ಕಾರ್ಯಕ್ರಮ- ಹವ್ಯಕ ಯುವ (Youth, ಇಂಗ್ಲಿಷ್, ಹಿಂದಿ, ಕನ್ನಡ ಗೀತೆಗಳ ಸಿಂಫೊನಿ) ಪ್ರತಿಭೆಗಳಿಗೆ ಕೈಗನ್ನಡಿಯಾಯ್ತು. ನ್ಯೂಜರ್ಸಿ ತಂಡದವರ ನೃತ್ಯ ಜನರನ್ನು ಮನರಂಜಿಸಿದರೆ, ಚಿಕ್ಕ ಮಕ್ಕಳ ಇನ್ಸ್ಪೆಕ್ಟರ್ ಸ್ಕಿಟ್ ಎಲ್ಲರನ್ನು ಹಾಸ್ಯ ಲೋಕದಲ್ಲಿ ಮುಳುಗಿಸಿತು. ಅಲ್ಲದೆ ವಾಷಿಂಗ್ಟನ್ ಡಿಸಿ ಸ್ವಯಂಸೇವಕರಿಂದ "ಮೆಟ್ರೊ- ರೆಟ್ರೊ" ನೃತ್ಯ ರೂಪಕ ಸಭಿಕರನ್ನು ಭಾರತದ ಚಿತ್ರಲೋಕಕ್ಕೆ ಕೊಂಡುಹೋಯಿತು. ತೇಜಸ್ವಿ ಅವರ 'ಗಿಲಿ ಗಿಲಿ ಮ್ಯಾಜಿಕ್' ಪ್ರದರ್ಶನವಂತೂ ಹಿರಿಕಿರಿಯರೆನ್ನದೆ ಎಲ್ಲರನ್ನೂ ರೋಮಾಂಚನಗೊಳಿಸಿತು. ರಾತ್ರಿಯ ಊಟದ ಬಳಿಕ ವಂದನಾರ್ಪಣೆ ಸಮಯದಲ್ಲಿ ಸುಜಾತ ಮತ್ತು ಅನಿಲ್ ಅಡ್ಕೋಳಿ ಅವರು ಚಿಕಾಗೊದಲ್ಲಿ ನಡೆಯುವ **2017** ರ ಸಮ್ಮೇಳನಕ್ಕೆ ಎಲ್ಲರಿಗೂ ಆಮಂತ್ರಣವಿತ್ತರು. ಸ್ವಯಂ ಸೇವಕರನ್ನು ಗೌರವಿಸಲಾಯಿತು. ಈ ಸಂಸ್ಥೆಯನ್ನು ಕಳೆದ ೩೩ ವರ್ಷಗಳಿಂದ ನಡೆಸಿಕೊಂಡು ಬಂದ ಎಲ್ಲಾ ಅಧ್ಯಕ್ಷರನ್ನು ಸ್ಮರಿಸಿಕೊಳ್ಳಲಾಯಿತು. ಬಳಿಕ ತಾಯ್ನಾಡು ಭಾರತ ಹಾಗೂ ನಮಗೆ ಆಶ್ರಯವಿತ್ತ ಅಮೇರಿಕಾ ಸಂಯುಕ್ತ ಸಂಸ್ಥಾನದ ರಾಷ್ಟ್ರಗೀತೆಗಳನ್ನು ಹಾಡಿ ಗೌರವಪೂರ್ವಕವಾಗಿ ಸಮ್ಮೇಳನದ ಸಭಾಕಾರ್ಯಕ್ರಮಗಳಿಗೆ ಮಂಗಳ ಹೇಳಲಾಯಿತು. ನಂತರ ಭರ್ಜರಿ "ಪಟಾಕಿ" ಪ್ರದರ್ಶನ. "ಡಿ.ಜೆ" ಡ್ಯಾನ್ಸ್ ನಲ್ಲಿ ಮಧ್ಯ ರಾತ್ರಿಯ ತನಕ ಎಲ್ಲರೂ ಕುಣಿದು ಕುಪ್ಪಳಿಸಿದರು.

ಒಟ್ಟಿನಲ್ಲಿ ಎರಡು ದಿನವೂ ಒಂದಕ್ಕಿಂತ ಒಂದು ಉತ್ತಮ ಮನರಂಜನಾ ಕಾರ್ಯಕ್ರಮಗಳು. ಪಕೋಡ, ಕಚೋರಿ, ಅಂಬಡೆ, ಅವಿಯಲ್, ಸ್ಪೆಶಲ್ ಹೋಳಿಗೆ, ಬಾದಾಮಿ ಪೂರಿ, ಪೈನಾಪಲ್ ಕೇಸರಿಭಾತ್, ಕ್ಯಾರೆಟ್ ಹಲ್ವ, ಫ್ರೆಶ್ ಜಿಲೇಬಿ ಇತ್ಯಾದಿ ಹಬ್ಬದ ಊಟೋಪಚಾರ, ಕಾಫಿ ತಿಂಡಿ ವ್ಯವಸ್ಥೆಯ ರೂವಾರಿ ವಾಷಿಂಗ್ಟನ್‌ನ ಪ್ರಸಿದ್ಧ ಕನ್ನಡಿಗ ಹೋಟೆಲ್ ಉದ್ಯಮಿ ಆನಂದ್ ಪೂಜಾರ್ ನಿರ್ವಹಿಸಿದ ಊಟ ತಿಂಡಿಗಳ ರುಚಿ ಇನ್ನೂ ನಾಲಿಗೆಯ ತುದಿಯಲ್ಲಿದೆ. ಪ್ರತೀ ಊಟದ ನಂತರ ಬಾಯಿಗೆ ವಿಶೇಷವಾಗಿ ತರಿಸಿದ ಎಲೆ, ಅಡಿಕೆ (ಕವಳ) ನಮ್ಮ ಹವ್ಯಕರ ಜೀವನ ರೀತಿಯನ್ನು ನೆನಪಿಸಿತು.

ಸಮುದಾಯದವರೆಲ್ಲ ಒಂದೇ ಕುಟುಂಬದವರು, ಒಂದೇ ಮನೆಯವರು ಎಂಬ ಹಬ್ಬದ ವಾತಾವರಣ ಅಲ್ಲಿ ಮೂಡಿತ್ತು. ಮುಖ್ಯವಾಗಿ ವಲಸಿಗರ ಎರಡನೇ ತಲೆಮಾರಿನವರಿಗೆ (ಅಂದರೆ ಇಲ್ಲಿ ಅಮೆರಿಕದಲ್ಲಿ ಹುಟ್ಟಿ ಬೆಳೆದ ಮಕ್ಕಳಿಗೆ) ಹವ್ಯಕ ಸಂಸ್ಕೃತಿಯ ಮಹತ್ವವನ್ನು ಪರಿಚಯಿಸುವ, ಆಧುನಿಕತೆಯಲ್ಲೂ ಸನಾತನ ಸಂಪ್ರದಾಯಗಳನ್ನು ಅರಿಯುವ ಅವಕಾಶ. 'ಹ'-ಹಸಿರು ಕಾನನ ಪರಿಸರ; 'ವ್ಯ'-ವ್ಯಸನ(ಗೀಳು) ವೇದವಾಙ್ಮಯವಿಚಾರ; 'ಕ'- ಕಸುವು ಪ್ರತಿಭೆಯ ಮೇರುಶಿಖರ ಇದು 'ಹವ್ಯಕ' ಸಮುದಾಯದ ಒಟ್ಟಂದ ಎಂದು ಶ್ರೀವತ್ಸ ಜೋಶಿ ತಮ್ಮ ಅಭಿಪ್ರಾಯ ತಿಳಿಸಿದರು.

ಬಹಳಷ್ಟು ಸಾಂಸ್ಕೃತಿಕ ಹಾಗೂ ಮನೋರಂಜನಾ ಕಾರ್ಯಕ್ರಮಗಳಿದ್ದುದರಿಂದ, ಸಾರ್ವಜನಿಕ ಸದಸ್ಯರ ಸಭೆ ಹಾಗು ವ್ಯಾವಹಾರಿಕ ಕುರಿತಾದ ಸಭೆಗಳು ಮರುದಿನ ಜುಲೈ ೫ ರಂದು ಬೆಳಗ್ಗೆ ಹ್ಯಾಂಪ್ಟನ್ ಇನ್ ಹೋಟೇಲ್ ನಲ್ಲಿ ನಡೆಯ ಬೇಕಾಗಿ ಬಂತು. ಅದರಲ್ಲಿ ಮುಖ್ಯವಾಗಿ ಹಾ-ಕೃಷಿ ತಂಡ ತಮ್ಮ ಯೋಜನೆಯನ್ನು ಪ್ರಸ್ತುತಪಡಿಸಿದರೆ, ಹವ್ಯಕ ಉದಯೋನ್ಮುಖ

ಉದ್ಯಮಿಗಳು ತಮ್ಮ ಅನುಭವಗಳನ್ನು ಹವ್ಯಕ ಬಿಸಿನೆಸ್ ನೆಟ್ವರ್ಕ್ (**HBN**) ನಲ್ಲಿ ಹಂಚಿಕೊಂಡರು. ಸಂಘದ ಆರ್ಥಿಕ-ವ್ಯವಹಾರಗಳ ಚರ್ಚೆಯಾಯಿತು. ದೂರದ ಊರಿನಿಂದ ಬಂದ ಸಮ್ಮೇಳನಾರ್ಥಿಗಳು ವಾಷಿಂಗ್ಟನ್ ಡಿಸಿ ಪ್ರೇಕ್ಷಣೀಯ ಸ್ಥಳಗಳನ್ನು ನೋಡಿ ತಮ್ಮ ತಮ್ಮ ಊರಿಗೆ ತೆರಳಿದರು.

ಒಟ್ಟಿನಲ್ಲಿ ಹೇಳುವುದಿದ್ದರೆ, **HAA** ಅಧ್ಯಕ್ಷ ಶಿವು ಭಟ್ ಹಾಗೂ ವಾಷಿಂಗ್ಟನ್ ಡಿ ಸಿ ವಲಯದ ಉಪಾಧ್ಯಕ್ಷ ಉದಯ ಭಟ್ಟ ಅಡಿಕೆಹಿತ್ಲು ಮತ್ತು ವಾಷಿಂಗ್ಟನ್ ಡಿಸಿ ವಲಯದ ಎಲ್ಲ ಹವ್ಯಕರ, ಹಾಗೂ ಉಳಿದೆಲ್ಲಾ Chapterನ ಹವ್ಯಕ ಸ್ವಯಂಸೇವಕರು ಒಟ್ಟಾಗಿ ಶ್ರಮವಹಿಸಿದರೆ ಎಂತಹ ಅದ್ಭುತಗಳನ್ನು ಸೃಷ್ಟಿಸಬಹುದು ಎಂಬುದಕ್ಕೆ ೧೬ನೇ ಅಖಿಲ ಅಮೇರಿಕ ಹವ್ಯಕರ ದ್ವೈವಾರ್ಷಿಕ ಸಮ್ಮೇಳನ ನಿದರ್ಶನವಾಯಿತು. ವಿಜ್ರಂಭಣೆಯ ಈ ಸಮ್ಮೇಳನ ಇತಿಹಾಸವನ್ನು ದಾಖಲಿಸಿತು ಎಂಬ ಸಮ್ಮೇಳನಾರ್ಥಿಗಳ ಮೆಚ್ಚುಗೆಯ ಪ್ರತಿಕ್ರಿಯೆಯು ಸ್ವಯಂಸೇವಕರು ಒಂದು ವರ್ಷದಿಂದ ಪಟ್ಟ ಪರಿಶ್ರಮ ಸಾರ್ಥಕ ಎಂಬ ಭಾವವನ್ನು ಪ್ರತಿಪಾದಿಸಿತು. ಇನ್ನೂ ಫೋಟೋ ಹಾಗು ವಿಡಿಯೋ ಗಾಗಿ http://www.havyak.org/ ಗೆ ಭೇಟಿಕೊಡಿ.

**ಇದೊಂದು ಫ್ರೆಂಚ್ ಕತೆ.**

ಮೂವರು ಬಡಗಿಗಳು ಒಂದು ಕಟ್ಟಡ ನಿರ್ಮಾಣ ಕಾರ್ಯದಲ್ಲಿ ತೊಡಗಿದ್ದರು. ಕೆಲಸ ನಡೆಯುತ್ತಿದ್ದ ಜಾಗಕ್ಕೆ ಬಂದ ದಾರಿಹೋಕನೊಬ್ಬ ಕುತೂಹಲದಿಂದ - 'ಇಲ್ಲೇನು ಕೆಲಸ ಮಾಡುತ್ತಿದ್ದೀರಿ?' ಎಂದು ಮೊದಲನೆಯ ಬಡಗಿಯನ್ನು ಕೇಳಿದ. 'ನಿನಗೆ ಕಣ್ಣು ಕಾಣಿಸುತ್ತಿಲ್ಲವೇ? ನಾವು ಕಟ್ಟಡ ಕಟ್ಟುತ್ತಿದ್ದೇವೆ. ಇವರು ಕೊಡುವ ಜುಜುಬಿ ಹಣಕ್ಕೆ ಬೆಳಗ್ಗೆ ೯ ರಿಂದ ಸಂಜೆ ೬ ರವರೆಗೆ ಕತ್ತೆಯಂತೆ ದುಡಿಯಬೇಕು. ಇದು ಒಂದು ಕೆಲಸವೇ ಥುತ್!' ಎಂದ ಅಸಹನೆಯಿಂದ.

ದಾರಿಹೋಕ ಅದೇ ಪ್ರಶ್ನೆಯನ್ನು ಎರಡನೆಯ ಬಡಗಿಗೆ ಕೇಳಿದಾಗ, ಬಡಗಿ 'ನಾನು ನನ್ನ ಕುಟುಂಬಕ್ಕಾಗಿ ದುಡಿಯುತ್ತಿದ್ದೇನೆ. ಇವರು ನನಗೆ ಸಂಬಳ ಕೊಡುತ್ತಾರೆ. ಆ ಹಣದಲ್ಲಿ ನಾನು ಮಡದಿ-ಮಕ್ಕಳನ್ನು ನೋಡಿಕೊಳ್ಳುತ್ತೇನೆ' ಎಂದ. ಮೂರನೆಯ ಬಡಗಿಗೆ 'ನೀವೇನು ಮಾಡುತ್ತಿದ್ದೀರಿ?' ಎಂದು ದಾರಿಹೋಕ ಕೇಳಿದ. 'ಓಹ್, ನಾನು ಚರ್ಚ್ ಕಟ್ಟುವ ಈ ತಂಡದಲ್ಲಿ ಮರದ ಕೆಲಸ ಮಾಡುತ್ತೇನೆ. ನಿಮಗೆ ಗೊತ್ತಾ? ಇದು ಈ ಪ್ರಾಂತ್ಯದ ದೊಡ್ಡ ಚರ್ಚ್ಅಂತೆ. ನಾನೂ ಇದರ ನಿರ್ಮಾಣದಲ್ಲಿ ಕೆಲಸ ಮಾಡುತ್ತಿರುವುದರಿಂದ ನನಗೆ ಬಹಳ ಖುಷಿಯಾಗುತ್ತಿದೆ' ಎಂದ ಬಹಳ ಉತ್ಸಾಹದಿಂದ.

ಆ ಮೂವರು ಬಡಗಿಗಳೂ ಒಂದೇ ಕಟ್ಟಡ ನಿರ್ಮಾಣದಲ್ಲಿ ಪಾಲ್ಗೊಂಡವರು. ಎಲ್ಲರೂ ಒಂದೇ ರೀತಿಯ ಕೆಲಸ ಮಾಡುತ್ತಿದ್ದಾರೆ. ಮೊದಲ ಬಡಗಿಗೆ ತಾನು ಮಾಡುತ್ತಿರುವ ಕೆಲಸದ ಬಗ್ಗೆ ಅಸಹನೆಯಿದೆ. ಆತ ಎಲ್ಲದರ ಬಗ್ಗೆಯೂ ದೂರುತ್ತಾ ಇರುತ್ತಾನೆ. ಆತನಿಗೆ ನೆಮ್ಮದಿಯೇ ಇಲ್ಲ. ಎರಡನೆಯ ಬಡಗಿ ಹಣಕ್ಕಾಗಿ ದುಡಿಯುವವನು. ಕೆಲಸದಲ್ಲಿ ಅಂಥ ಆಸಕ್ತಿಯಿಲ್ಲದಿದ್ದರೂ ಕೂಲಿಗಾಗಿ ಕೆಲಸ ಮಾಡುತ್ತಾನಷ್ಟೆ. ಮೂರನೆಯ ಬಡಗಿ ಇದ್ದಾನಲ್ಲ ಆತ ಕನಸುಗಾರ. ಒಂದು ದೊಡ್ಡ ಚರ್ಚ್ ನಿರ್ಮಾಣದಲ್ಲಿ ತನ್ನದೂ ಪಾತ್ರವಿದೆ ಎಂದು ಖುಷಿ ಪಡುತ್ತಾ, ತನ್ನ ಕೆಲಸದಲ್ಲಿ ತೃಪ್ತಿ ಕಾಣುವವನು. ನಾವೆಲ್ಲರೂ ಆ ಮೂರನೆಯ ಬಡಗಿಯಂತೆ ಯೋಚಿಸಲು ಶುರು ಮಾಡಿದರೆ 'ಅಯ್ಯೋ ಆಫೀಸಿಗೆ ಹೋಗಬೇಕಲ್ಲ' ಎಂಬ 'Monday' ಬಿಸಿ ನಿಮ್ಮನ್ನು ಕಾಡುವುದಿಲ್ಲ. ನೀವು ಮಾಡುತ್ತಿರುವ ಉದ್ಯೋಗ ಕೇವಲ ಜೇಬನ್ನು ತುಂಬಿದರೆ

ಸಾಲದು, ಅದು ನಿಮ್ಮ ಹೃದಯವನ್ನೂ ತುಂಬಬೇಕು. ಬರೀ ಹಣಕ್ಕಾಗಿ ಕೆಲಸ ಮಾಡಬೇಡಿ. ನಿಮ್ಮ ಕೆಲಸ ಕೇವಲ ಕಾಸು ಮಾಡುವ ಉದ್ದೇಶದ್ದಾಗಿರಬಾರದು.

ಅದೆಲ್ಲಾ ಹೇಳಲಷ್ಟೇ ಚಂದ. ಬದುಕಲು ಹಣ ಮಾಡಲೇಬೇಕು' ಎನ್ನುತ್ತೀರಾ? ಸರಿ ಹಾಗಾದರೆ Find something fulfilling which also fi lls your pocket full. ಇದು ಒಳ್ಳೆಯ ಐಡಿಯಾ ಅಲ್ಲವೇ? ಸರಿ ಇದ್ಯಾವುದೂ ಸಾಧ್ಯವಾಗದಿದ್ದರೆ, ಯಾವ ಕೆಲಸ ಮಾಡುತ್ತಿದ್ದೀರೋ ಅದನ್ನೇ ಪ್ರೀತಿಸಿ.

# ತವರು ಕಲಿಸಿದ ಸಂಪ್ರದಾಯಗಳು



**ಅಹಲ್ಯಾ ಚಂದ್ರಶೇಖರ ಭಟ್ಟ**
**ಕರಸುಳ್ಳಿ**

ನಾನು ಹುಟ್ಟಿ ಬೆಳೆದದ್ದು ಶ್ರೀಕ್ಷೇತ್ರ ಮಂಜಗುಣಿಯಲ್ಲಿ, ಇಂದಿರಾ ಮತ್ತು ಅರ್ಚಕ ಅಣ್ಣಯ್ಯ ಭಟ್ಟರ ಮಗಳಾಗಿ, ನಂತರ ಮದುವೆಯಾಗಿ ನೆಲೆಸಿದ್ದು ಕರಸುಳ್ಳಿಯ ಸಂಪ್ರದಾಯಸ್ಥರ ಮನೆಯಲ್ಲಿ. ನನಗೀಗ ಎಪ್ಪತ್ತೊಂದು ವರ್ಷ. ನಾವು ಚಿಕ್ಕವರಿದ್ದಾಗ ನನ್ನ ಅಪ್ಪಯ್ಯ ಆಯೀ ಕಲಿಸಿದ ಕೆಲವೊಂದು ಸಂಪ್ರದಾಯಗಳನ್ನೂ ಅಥವಾ ಪದ್ಧತಿಗಳನ್ನೂ, ನನ್ನ ಮಗ ಒತ್ತಾಯಿಸಿದ್ದರಿಂದ, ನಿಮ್ಮೊಂದಿಗೆ ಇಲ್ಲಿ ಹಂಚಿಕೊಳ್ಳುತ್ತಿದ್ದೇನೆ.

**ದಿನ ಬೆಳ್ಳಿಗ್ಗೆ ಏಳುವಾಗ** ಕರಗಳನ್ನು ಬೊಗಸೆ ಮಾಡಿ ಭಕ್ತಿಯಿಂದ ಬೊಗಸೆ ನೋಡುತ್ತಾ ಈ ಶ್ಲೋಕವನ್ನು ಹೇಳಬೇಕೆಂದು ಕಲಿಸಿ ಕೊಟ್ಟಿದ್ದಾರೆ.

*ಕರಾಗ್ರೇ ವಸತೇ ಲಕ್ಷ್ಮಿ ಕರ ಮದ್ಯೆ ಸರಸ್ವತಿ /*
*ಕರ ಮೂಲೇತು ಗೋವಿಂದ ಪ್ರಭಾತೇ ಕರ ದರ್ಶನಂ //*

ದಿನ ಬೆಳೆಗ್ಗೆ ಪರಮಾತ್ಮನನ್ನು ನೆನೆಯುವದರಿಂದ ನಮ್ಮ ದೈನಂದಿನ ಜೀವನಕ್ಕೆ ಒಳ್ಳೆಯದಾಗುತ್ತದೆಂದು ಹೇಳುತ್ತಿದ್ದರು. ಹೆಣ್ಣು ಮಕ್ಕಳು ದೇವರಿಗೆ ನಮಸ್ಕರಿಸುವಾಗ 'ಸರ್ವಮಂಗಳೆಯ' ಶ್ಲೋಕವನ್ನು ಹೇಳಲೇ ಬೇಕು. ಭಕ್ತಿಯಿಂದ ಹೇಳುವದರಿಂದ ನಿಮಗೆ ಒಳಿತನ್ನು ಮಾಡಿ ಒಳ್ಳೆ ಗಂಡ, ಮುತ್ತೈದೆ ಭಾಗ್ಯ ಕೊಟ್ಟು ರಕ್ಷಿಸುವ ಈ ತಾಯಿಯನ್ನು ದಿನ ಸ್ತುತಿಸಿರಿ ಎಂದು ಹೇಳಿ ಕೊಟ್ಟಿದ್ದಾರೆ.

**ಬಾಗಿಲಿಗೆ ರಂಗವಲ್ಲಿ**: ದಿನ ಬೆಳ್ಳಿಗ್ಗೆ ಬಾಗಿಲ ಸಾರಿಸಿ ರಂಗೋಲಿ ಇಡುವಾಗ ಭಜಗೋವಿಂದಂ ಸ್ತೋತ್ರ, ನವಗ್ರಹ ಸ್ತೋತ್ರ ಹೇಳಿ ದೇವರ ಮೊರೆ ಹೋಗುವಂತೆ ನಮ್ಮ ಅಪ್ಪ ರೂಢಿಯಲ್ಲಿ ಇಟ್ಟಿದ್ದರು. ಚೆಂದದ ರಂಗೋಲಿ ಇಡುವದರಿಂದ ಬಾಗಿಲಿಗೆ ಅಂದ, ನೋಡುವವರಿಗೆ ಖುಷಿ, ನಿಮಗೆ ಸಂತೋಷ ಎಂದು ಮಕ್ಕಳಿಗೆ ಬಹಳ ಪ್ರೋತ್ಸಹ ಕೊಡುತ್ತಿದ್ದರು.

**ದೇವರಿಗೆ ಹೂವು ತುಳಸಿ ಕೊಯ್ಯುವದು:** ಹೂವು ತುಳಸಿ ದುರ್ಬೆ ಹೂ ಬುಟ್ಟಿಯಲ್ಲಿ ಒಟ್ಟಿಗೆ ಸೇರಿಸದೆ ಎಲ್ಲ ತರಹದ್ದನ್ನು ಬೇರೆ ಬೇರೆ ಇಡಬೇಕು. ಪೂಜೆಗೂ ಅನುಕೂಲ ಎಂದು ತಿಳಿಸಿದ್ದಾರೆ.

**ಬಾಗಿಲಿಗೆ ದೀಪ**: ಮೂರು ಸಂಜೆ ಕೈಕಾಲು ಮುಖ ತೊಳೆದು ಒಳೆಣ್ಣೆ ದೀಪವನ್ನು ಹಚ್ಚಿ ಪ್ರಧಾನ ಬಾಗಿಲಿಗೆ, ಕೊಟ್ಟಿಗೆಗೆ ಮತ್ತು ತುಳಸಿ ಕಟ್ಟೆಗೆ ಇಡುವದು ಪದ್ದತಿ. ಒಳ್ಳೆಣ್ಣೆ ದೀಪ ಕಣ್ಣಿಗೆ ತಂಪು, ದೇವರಿಗೆ ಶ್ರೇಷ್ಟ. ಪ್ರಧಾನ ಬಾಗಿಲಿಗೆ ದೀಪ ಹಚ್ಚುವದು: ಮನೆ ಕಟ್ಟುವಾಗ ಪ್ರಧಾನ ಬಾಗಿಲಿಗೆ ವಿಶೇಷ ಆದ್ಯತೆಯಿದೆ. ಅದರ ಅಡಿಗೆ ನವರತ್ನ ಇಟ್ಟು ಕೂರ್ಮಾವತಾರವನ್ನು ನೆನೆದು, ಶುಭ ಮುಹೂರ್ತದಲ್ಲಿ ಬ್ರಾಹ್ಮಣರ ವೇದ ಘೋಷದಿಂದ ಪ್ರಧಾನ ಬಾಗಿಲನ್ನು ಇಟ್ಟು ಈ ಮನೆಯನ್ನು ಸದಾ ರಕ್ಷಿಸೆಂದು ಬೇಡುತ್ತೇವೆ. ಆ ದಿನದಿಂದ ಪ್ರಧಾನ ಬಾಗಿಲಿಗೆ ನಮಸ್ಕರಿಸುವಾಗ ಈ ಶ್ಲೋಕ ಹೇಳುವ ಪದ್ಧತಿ.

*ವಾಸ್ತು ಪುರಷ ನಮಸ್ತೇಸ್ತು ಭೂಷಯ ನಿರತಿಪ್ರಭು /*
*ಮದ್ಗಹೇ ಧನ ಧಾನ್ಯಾದಿ ಸಂಭ್ರಮಂ ಕುರು ಸರ್ವದಾ //*

ವಿಷ್ಣು ಹಿಂದೆ ಕೂರ್ಮಾವತಾರವಾಗಿ ಧರಣಿಯನ್ನು ರಕ್ಷಿಸಿದಂತೆ ನಮ್ಮ ಮನೆಯನ್ನು ರಕ್ಷಿಸೆಂದು ಬೇಡುವದು. ಆದ ಕಾರಣ ಪ್ರಧಾನ ಬಾಗಿಲಿಗೆ ದೀಪ ಹಚ್ಚಿ

*ದೀಪ ಮೂಲೆ ಸ್ಥಿತೋ ಬ್ರಹ್ಮ ದೀಪ ಮದ್ಯೆ ಜನಾರ್ಧನ /*
*ದೀಪಾಗ್ರೆ ಶಂಕರಃ ಪ್ರೋಕ್ತ ಸಂಧ್ಯಾ ಜ್ಯೋತಿ ನಮೋಸ್ತುತೇ //*

ಎಂದು ಬೇಡುವದು ಅಪ್ಪಯ್ಯ ಕಲಿಸಿದ ಪದ್ಧತಿ.

**ಬಾಯಿ ಪಾಠ ಹೇಳುವುದು:** ಅಪ್ಪಯ್ಯ ಅಥವಾ ಹಿರಿಯರು ಮಕ್ಕಳೆಲ್ಲರನ್ನು ದೇವರ ಮುಂದೆ ಅಥವಾ ಪ್ರಧಾನ ಬಾಗಿಲಿನ ಮುಂದೆ ಕೂಡ್ರಿಸಿಕೊಂಡು ಮಗ್ಗಿ ಬಾಯಿಪಾಠ ಹಾಗು ಶ್ಲೋಕಗಳನ್ನು ಹೇಳಿಕೊಡುತ್ತಿದ್ದರು. ಇದರಲ್ಲಿ ವಾರಗಳಿಂದ

ಹಿಡಿದು ಸಂವತ್ಸರಗಳ ತನಕ ಉರು ಹಾಕಿಸುತ್ತಿದ್ದರು. ಆ ನಂತರ ಪ್ರಾರ್ಥನಾ ಶ್ಲೋಕಗಳನ್ನು ಹೇಳಿಕೊಡುತ್ತಿದ್ದರು.

**ಮನೆಗೆ ಬಂದ ಬ್ರಾಹ್ಮಣರಿಗೆ ಚಂಬು ನೀರಿಟ್ಟು ನಮಸ್ಕರಿಸುವದು:** ಅತಿಥಿಗಳಿಗೆ ಕೊಡುವ ಗೌರವ. ಇದು ಈಗಲೂ ನಡೆಯುತ್ತ ಬಂದಿರುವ ಪದ್ಧತಿ. ನಡೆದು ಬಂದಿರುವದರಿಂದ ದಣಿದಿರುತ್ತಾರೆ, ನೀರಿನಿಂದ ಕಾಲು ಮುಖ ತೊಳೆಯುವದರಿಂದ ಸ್ವಲ್ಪ ಆಯಾಸ ಕಡಿಮೆಯಾಗುತ್ತದೆ. ಬಂದ ಸಮಯ ನೋಡಿ ಊಟ ಉಪಹಾರಗಳನ್ನು ವಿಚಾರಿಸಿಕೊಂಡು ಉಪಚರಿಸುವದು ಹೆಂಗಸರ ಕರ್ತವ್ಯ. ಮನೆಯವರೆಲ್ಲ ಮಾತನಾಡಿಸಿ ನಮಸ್ಕರಿಸಿವದು ರೂಢಿ. ಗಂಡುಮಕ್ಕಳು ಗೋತ್ರ ಪ್ರವರ ಹೇಳಿ ನಮಸ್ಕರಿಸಿವದು ಹಳ್ಳಿಯಲ್ಲಿ ರೂಢಿಯಲ್ಲಿದೆ.

**ಅನ್ನದ ಚರಿಗೆಗೆ ನಮಸ್ಕಾರ:** ಊಟದ ಪಂಕ್ತಿಯ ಎದುರು ಅನ್ನ ಬಡಿಸುವ ಮೊದಲು ಅನ್ನದ ಚರಿಗೆಯನ್ನಿಟ್ಟು ನಮಸ್ಕರಿಸುವುದು ಅನ್ನಪೂರ್ಣೆಗೆ ಕೊಡುವ ಗೌರವ.

**ಊಟಕ್ಕೆ ಮೊದಲು:** ಬಾಳೆ ಮಣೆ ಹಾಕುವಾಗ ಅನ್ನ ಬಡಿಸುವವರೆಗೆ ಭಗವತ್‌ಗೀತೆಯನ್ನು ಮಕ್ಕಳೆಲ್ಲ ಸೇರಿ ಹೇಳಬೇಕಾಗಿತ್ತು. ಮಧ್ಯಾನ್ಹ ಊಟದ ಹೊತ್ತಿಗೆ, ಬಂದ ಅತಿಥಿ ಯಾರೇ ಆಗಲಿ ಅವರಿಗೆ ತುಪ್ಪ ಅಭಿಗೇರಿಸಿ ಮೊದಲು ಅವರಿಗೆ ಅನ್ನ ಬಡಿಸಬೇಕು. ಅದು ಅವರಿಗೆ ಕೊಡುವ ಗೌರವ. ಸಂಜೆ ಅನ್ನ ಬಡಿಸುವಾಗ ಮನೆಯ ಯಜಮಾನನಿಗೆ ಮೊದಲು. ಊಟದ ಮಧ್ಯೆ ದೇವರ ನಾಮ ಹೇಳುವ ಪದ್ಧತಿಯಿತ್ತು.

**ಗೋವಿಗೆ ಗೋಗ್ರಾಸ:** ಅಕ್ಕಿ ಬೆಲ್ಲ ಸೇರಿಸಿ ಆಕಳಿಗೆ ತಿನ್ನಲು ಕೊಡುವದೇ ಗೋಗ್ರಾಸ. ಗೋವು ಸೂರ್ಯ, ಚಂದ್ರ, ಲಕ್ಷ್ಮಿ, ಬ್ರಹ್ಮ ಹೀಗೆ ಹಲವು ದೇವರುಗಳನ್ನೊಳಗೊಂಡ ಮಾತೆ. ಗೋವು ದೇವರ ಅಭಿಷೇಕಕ್ಕೆ ಹಾಲು ಮತ್ತು ನಮಗೆ ಹಾಲು ಮೊಸರು ಬೆಣ್ಣೆ ತುಪ್ಪ ಕೊಟ್ಟು ಉಪಕಾರ ಮಾಡುತ್ತದೆ. ಹಾಗಾಗಿ ಗೋಗ್ರಾಸ ಕೊಟ್ಟು ಕುಂಕುಮ ಹಚ್ಚಿ ಮೈಮುಟ್ಟಿ ನಮಸ್ಕರಿಸಿದರೆ ಪುಣ್ಯ ಬರುತ್ತದೆಂದು ಹೇಳುತ್ತಿದ್ದರು.

**ಭೂಮಿ ಹುಣ್ಣಿಮೆ**: ಮಾನವನಿಗೆ ಬದುಕಲಿಕ್ಕೆ ಊಟಕ್ಕೆ ದಾರಿ ತೋರುವ ಭೂ ಮಾತೆಯನ್ನು ಪೂಜಿಸುವ ದಿನ. ಅಶ್ವಿಜ ಶುದ್ಧ ಹುಣ್ಣಿಮೆ ದಿನ ಒಂದು ದಿನವಾದರೂ ಭೂಮಿಯನ್ನು ಅಗೆದು ಕೊಚ್ಚಿ ಪೆಟ್ಟು ಮಾಡಬಾರದೆಂದು ಪದ್ದತಿಯಿದೆ. ಅವರವರ ಹೊಲಗಳಿಗೆ ಹೋಗಿ ಕಡುಬು ಮಾಡಿಕೊಂಡು ಹೊಸ ಬಟ್ಟೆ ಉಟ್ಟುಕೊಂಡು ಸಡಗರದಿಂದ ಪೂಜೆ ಮಾಡುತ್ತಿದ್ದೆವು. ಅಂದು ಮಾಡಿದ ಕಡುಬು, ಪಾಯಸ, ಅನ್ನ, ಹರಿವೆ ಸೊಪ್ಪು ಮುಂತಾದ ಅಡುಗೆಯನ್ನು ಕುಡಿ ಬಾಳೆಯಲ್ಲಿ ಹಾಕಿ ನೈವೇದ್ಯ ಮಾಡಿ ನಮಸ್ಕಾರ ಮಾಡುವದು.

**ನವರಾತ್ರಿ**: ನವರಾತ್ರಿ ಒಂಬತ್ತು ದಿನಗಳ ಹಬ್ಬ. ದುರ್ಗಾ ಪೂಜೆ ಪಾಡ್ಯದಿಂದ ನವಮಿಯ ವರೆಗೆ. ಸಪ್ತಮಿ ದಿನ ಶಾರದಾ ಸ್ಥಾಪನೆ. ಹತ್ತನೇ ದಿನ ವಿಜಯದಶಮಿ.

ಶಾರದೆ ಅಲಂಕಾರ ಪ್ರಿಯಳು. ಶಾರದೆಯ ಪ್ರತಿಮೆಯನ್ನು ಇಟ್ಟು ತಳಿರು ತೋರಣಗಳಿಂದ ಅಲಂಕರಿಸಿ ಪಟ್ಟೆ ಮಡಿ ಉಡಿಸಿ ಬಂಗಾರ ಹಾಕಿ ಹೂವುಗಳಿಂದ ಶೃಂಗರಿಸಿ ಅವಳ ಎದುರು ಭಾಗವತ, ವೇದ ಸಪ್ತಶಿತಿ, ಭಗವದ್ಗೀತಾ ಹೀಗೆ ಹಲವಾರು ಪುಸ್ತಕಗಳನ್ನು ಇಡುತ್ತಾರೆ. ಮಕ್ಕಳು ಶಾಲೆಯ ಪುಸ್ತಕಗಳನ್ನು ಇಡಬೇಕು. ಚಿಕ್ಕಮಕ್ಕಳು ಪಾಟಿ ಮೇಲೆ ಅ ಆ ಇ ಈ ಬರೆಯಬೇಕು. ಶ್ರೀ ಶಾರದಾಯ ನಮಃ ಎಂದು ದೊಡ್ಡವರೂ ಬರೆಯುತ್ತಾರೆ. ಶಾರದೆಯು ನಮಗೆ ವಿದ್ಯಾ ಬುದ್ಧಿಯನ್ನು ಕೊಡುವ ಜ್ಞಾನದೇವತೆ. ಅದು ಮೂರು ದಿನದ ಪೂಜೆ. ನಾಲ್ಕನೇ ದಿನ ವಿಜಯದಶಮಿ. ಅಂದು ಬೆಳಿಗ್ಗೆ ಹಿರಿಯರು ಒಂದು ಶ್ಲೋಕ ಹೇಳಿಕೊಟ್ಟು ಜ್ಞಾನದೇವತೆಗೆ ನಮಸ್ಕರಿಸಿ, ಎಲ್ಲರಿಗೂ ಅವರವರ ಪುಸ್ತಕ ಕೊಟ್ಟು ಎಲ್ಲರೂ ಅರ್ಧ ಗಂಟೆ ಓದಲೇ ಬೇಕು. ಇದು ನಮ್ಮ ತಂದೆ ನಮಗೆ ಕಲಿಸಿ ಕೊಟ್ಟ ಪದ್ಧತಿ. ಇಂದಿಗೂ ನಡೆಸಿಕೊಂಡು ಬಂದಿದ್ದೇವೆ.

**ದೀಪಾವಳಿ:** ಮೂರು ದಿನಗಳ ಹಬ್ಬ. ಮೊದಲನೇ ದಿನ ನರಕ ಚತುರ್ದಶಿ. ವಿಷ್ಣು ಬಲಿಚಕ್ರವರ್ತಿಯ ಗರ್ವ ಮುರಿದು ಪಾತಾಳಕ್ಕೆ ಕಳುಹಿದ ದಿನ. ಬಲಿಯು ಅಖಂಡ ವಿಷ್ಣು ಭಕ್ತ. ಮೂರು ದಿನ ಭೂಮಿಗೆ ಬಂದು ಸಂಭ್ರಮದ ಪೂಜೆ ತೆಗೆದುಕೊಂಡು ಮರಳಿ ಹೋಗ ಬೇಕೆಂದು ವಿಷ್ಣು ಬಲಿಗೆ ವರವಿತ್ತ ದಿನ.

**ನರಕ ಚತುರ್ದಶಿ** ದಿನ ಬೂರೆ ಕಪ್ಪನ್ನು ಮಾಡಿ ( ಅಂದರೆ ಒಳ್ಳೆಣ್ಣೆ ದೀಪದ ಕುಡಿಯಲ್ಲಿ ತಾಟನ್ನು ಸ್ವಲ್ಪ ಹೊತ್ತು ಹಿಡಿದರೆ ಕಪ್ಪು ಬಣ್ಣ ಬರುತ್ತದೆ. ಅದೇ ಬೂರೆ ಕಪ್ಪು) ಅಂದು ಬೆಳಿಗ್ಗೆ ತಾಯಂದಿರು ಗಂಡು ಮಕ್ಕಳನ್ನು ಜಗುಲಿಯ ಮೇಲೆ ಕುಳ್ಳಿಸಿ ಮೈಗೆ, ತಲೆಗೆ ಎಣ್ಣೆ ಹಚ್ಚಿ, ಬೂರೆ ಕಪ್ಪನ್ನು ನಾಮದ ರೂಪದಲ್ಲಿ ಹಚ್ಚಿ ಆರತಿ ಮಾಡುತ್ತಾರೆ. ಅಂದು ಎಲ್ಲರೂ ಇಡೀ ಮೈಗೆ ಎಣ್ಣೆ ಹಚ್ಚಿ ಕೊಂಡು ಸ್ನಾನ ಮಾಡುತ್ತಾರೆ. ಈ ಹಬ್ಬದ ದಿನ ನನ್ನ ತಂದೆಯ ಮನೆಯಲ್ಲಿ ದೊಡ್ಡ ದೊಡ್ಡ ದಳ್ಳೆಯಲ್ಲಿ ಬಿಸಿ ನೀರು ತುಂಬಿ ಮಕ್ಕಳನ್ನೆಲ್ಲ ಅದರಲ್ಲಿ ಕೂಡಿಸುತ್ತಿದರು. ಈ ಹಬ್ಬಕ್ಕೆ ಎಣ್ಣೆ ಹಚ್ಚಿ ಕೊಳ್ಳುವ ಕಾರಣ, ಮಳೆಗಾಲ ಮುಗಿದು ಚಳಿ ಪ್ರಾರಂಭವಾಗುವ ಕಾಲ ಮಾನವನ ಚರ್ಮಕ್ಕೆ ಚಳಿಯಿಂದ ರಕ್ಷಿಸಲು ತೈಲದ ಅಂಶ ಬೇಕೆಂದು ಹಿರಿಯರು ಆಚರಣೆಗೆ ತಂದ ಪದ್ಧತಿ.

**ಬಲಿವೇಂದ್ರನ ಕರೆಸುವದು:** ತಾಮ್ರದ ತಂಬಿಗೆಗೆ ಶೇಡಿ ಕೆಮ್ಮಣ್ಣಿನಿಂದ ಚಿತ್ತಾರ ಬರೆದು ಅದರೊಳಗೆ ಅಕ್ಕಿ ಕಡಲೆ ಅರಿಶಿನ ಕೊಂಬು ತುಂಬಿ ಕೆಂಪು ಗೋಟು ವೀಳ್ಯದೆಲೆ ಸುವರ್ಣ ಇಟ್ಟು ಚಂಬಿನ ಬಾಯಿಗೆ ತೆಂಗಿನ ಕಾಯಿಗೆ ಕಪ್ಪುಬಣ್ಣದಿಂದ ಬಲಿವೇಂದ್ರನ ಮುಖ ಬರೆದು ಶಿಂಗಾರ ಇಟ್ಟು ಬಲಿಯನ್ನು ತಯಾರಿಸುವದು. ಬಲಿವೇಂದ್ರನಿಗೆ ಗೋವೆಕಾಯಿ ನೈವೇದ್ಯ ಮಾಡುವದು.

**ಲಕ್ಷ್ಮಿ ಪೂಜೆ:** ಮರುದಿನ ಲಕ್ಷ್ಮಿ ಪೂಜೆ. ಅಶ್ವಿಜ ಅಮಾವಾಸ್ಯೆ ಲಕ್ಷ್ಮಿ ಪೂಜೆಗೆ ವಿಶೇಷ. ಹಣ ಬಂಗಾರ ಬೆಳ್ಳಿಗಳನ್ನು ಪೂಜೆಗೆ ಇಡುತ್ತಾರೆ. ಹೊಲದಲ್ಲಿ ಬೆಳೆದ ಧಾನ್ಯಗಳನ್ನು ಇಟ್ಟು ಪೂಜಿಸುತ್ತಾರೆ. ಹಣ್ಣು ಸಿಹಿ, ತಾಂಬೂಲಗಳನ್ನಿಟ್ಟು ಅಷ್ಟಲಕ್ಷ್ಮೀ ಸ್ತೋತ್ರದಿಂದ ಪೂಜಿಸಿ ಎಲ್ಲರಿಗೂ ಧನ ಧಾನ್ಯ ಸಂಪತ್ತನಿತ್ತು ರಕ್ಷಿಸುಯೆಂದು ಬೇಡುವರು.

**ಮೂರನೇ ದಿನ ಗೋಪೂಜೆ:** ಕಾರ್ತಿಕ ಶುದ್ಧ ಪಾಡ್ಯ ಗೋವಿನ ಪಾಡ್ಯವೆಂದು ಆಚರಣೆಗೆ ಬಂದ ದಿನ. ಗೋಪೂಜೆಯ ದಿನ ಗಂಡಸರು ದನಕರುಗಳ ಮೈತೊಳೆದು ಶೇಡಿ, ಕೆಮ್ಮಣ್ಣಿನಿಂದ ಮುದ್ರೆಯಿಟ್ಟು, ಕೋಡುಗಳಿಗೆ ಬಣ್ಣ ಹಚ್ಚಿ, ಕೆಂಪುಗೋಟು ಶಿಂಗಾರ ವಿಳ್ಯದೆಲೆಗಳಿಂದ ಪೋಣಿಸಿ ಸರ ಮಾಡಿ ಕುತ್ತಿಗೆಗೆ, ಕೊಡಿಗೆ ಕಟ್ಟಿ ಗೋವುಗಳನ್ನು ಶೃಂಗರಿಸುತ್ತಾರೆ. ಅಂದು ಬೆಳಗ್ಗೆ ಸ್ನಾನ ಮಾಡಿ ಹೆಂಗಸರದು ಗೋಗ್ರಾಸ ಮತ್ತು ಅಡುಗೆ ತಯಾರಿಸುವ ಕೆಲಸ. ಸವತೇಕಾಯಿ ಅಕ್ಕಿಯಿಂದ ತಯಾರಿಸಿದ ತೆಳ್ಳೇವು, ಬಾಳೆಹಣ್ಣು ಅಕ್ಕಿಯಿಂದ ತಯಾರಿಸಿದ ಸುಟ್ಟೇವು, ಪಾಯಸ, ಕೆಸುವಿನ ಗಡ್ಡೆಯನ್ನು ಬೇಯಿಸಿ ಇಡುವದು. ಅಕ್ಕಿ ತೊಳೆದು ಬೆಲ್ಲ ಹಾಕಿ ಹಣ್ಣು ಹಂಪಲಗಳನ್ನು ಇಡುವದು.

ಮನೆಯವರೆಲ್ಲ ಸೇರಿ ದೀಪ ಹಿಡಿದು, ಗಂಡಸರು ಮಂತ್ರ ಹೇಳಿ, ಹೆಂಗಸರು ಹಾಡು ಹೇಳಿ ಮಕ್ಕಳು ಜವಟೆ ಶಂಖ ಗಂಟೆಗಳಿಂದ ನಾದ ಮಾಡುತ್ತ ಗಂಧಾಕ್ಷತೆ ಹಿಡಿದು ಕೊಟ್ಟಿಗೆಗೆ ಹೋಗಿ ಗೋಪೂಜೆ ಮಾಡಿ ಗೋಗ್ರಾಸವಿಟ್ಟು ಆರತಿ ಮಾಡಿ ಗೋವಿಗೆ ನಮಸ್ಕರಿಸಿ ಪ್ರಾರ್ಥಿಸುತ್ತಾರೆ. ನನ್ನ ಅಮ್ಮ ಹೇಳಿಕೊಟ್ಟ ಒಂದು ಹಾಡಿನ ತುಣುಕನ್ನು ಬರೆಯಲು ಇಚ್ಛಿಸುತ್ತೇನೆ.

*ಶ್ರೀ ಕರಧೇನುವಿಗಾರತಿ ಲೋಕಪಾವನೆಯಳಿಗಾರತಿ*
*ಶ್ರೀ ಕರಧೇನುವಿಗಾರತಿ //ಪ //*

*ಕಟ್ಟಿದ ಕಂಬದೋಳ್ ಇಟ್ಟ ಮೇವನೇ ತಿಂದು*
*ಕಷ್ಟಜೀವನದಿಂದಿಷ್ಟಾರ್ಥ ಜೀವನವೆಲ್ಲ /೧/*
*ದಟ್ಟ ಅರಣ್ಯದೊಳ್ ಪುಟ್ಟಿದ್ ಹುಲ್ಲನೆ ತಿಂದು*
*ತಟ್ಟನೆ ಕ್ಷೀರವ ಕೊಟ್ಟು ರಕ್ಷಿಪತಾಯೆ /೨/*

**ಹುಲಿ ದೇವರ ಪೂಜೆ**: ಹಿಂದೆ ಊರಿನವರಲ್ಲ ಸೇರಿ ತಯಾರಿಸಿದ ಹುಲಿ ರೂಪದ ಕಲ್ಲಿನ ವಿಗ್ರಹಕ್ಕೆ ಊರವರೆಲ್ಲರೂ ಹೋಗಿ ಮಾಡುವ ಪೂಜೆ. ಹುಲಿ ವಿಗ್ರಹ ಊರ ಹೊರಗೆ ಕಾಡಿನಲ್ಲಿ ಇರುತ್ತದೆ. ಗೋ ಪೂಜೆ ಮಾಡುವ ಮೊದಲೇ ಹುಲಿ ದೇವರನ್ನು ಮಾಡಿ ಬಾಲಕ್ಕೆ ಒಂದೊಂದು ತೆಂಗಿನಕಾಯಿ ಒಡೆದು ಆರತಿ ಮಾಡಿ ನಮ್ಮ ದನಗಳನ್ನು ರಕ್ಷಿಸೆಂದು ಪ್ರಾರ್ಥಿಸಿ, ಪ್ರಸಾದ ತಂದು ದನಗಳಿಗೆ ಮುಡಿಸುತ್ತಾರೆ. ಹಿಂದೆ ಎಲ್ಲರ ಮನೆಯ ದನಕರುಗಳು ಕಾಡಿಗೆ ಹೋಗಿ ಮೇಯಬೇಕಿತ್ತು. ಆಗ ಹುಲಿ ದನಗಳನ್ನು ತಿನ್ನುತ್ತಿತ್ತಂತೆ. ಈ ನಂಬಿಕೆಯಿಂದ ಹುಲಿ ಪೂಜೆ ಪದ್ಧತಿಯಲ್ಲಿ ಇದೆ.

ಅಂದು ಊಟದ ನಂತರ ದನಬೈಲು. ಕೆಲ ಜನರು ಹೋರಿಗೆ ಬಾಸಿಂಗ ಕಟ್ಟಿ ಮೊದಲೇ ಗೊತ್ತುಮಾಡಿದ ದನಬೈಲಿಗೆ ದನಗಳನ್ನು ತಂದು ಅಶ್ವಥ ಕಟ್ಟೆಗೆ ಪ್ರದಕ್ಷಿಣ ಮಾಡುತ್ತಾರೆ. ಬಾಸಿಂಗ ಕಟ್ಟಿದ ಹೋರಿಯನ್ನು ಓಡಿಸಿ ಹಿಡಿಯುವದು ಯುವಕರಿಗೆ ಹುಮ್ಮಸ್ಸು. ತಿರುಗಿ ದನಗಳು ಕೊಟ್ಟಿಗೆಗೆ ಬರುವಾಗ ಒನಕೆ ಅಡ್ಡ ಇಡುವದು. ದನಗಳಿಗೆ ದೃಷ್ಟಿ ಬೀಳಬಾರದು ಎಂದು ಮಜ್ಜಿಗೆಗೆ ಕೆಂಡ ಹಾಕಿ ದೃಷ್ಟಿ ಬಳಿದು ಶಿಂಡೇಲೇ ಕಾಯಿಗೆ ಜುಂಜು ಮಾಡಿ ಆರತಿ ಮಾಡುವ ಪದ್ದತಿ. ಕಾರ್ತೀಕ ಮಾಸದ ನಿಮಿತ್ತ ಮನೆ ದೀಪದ ಬೆಳಕಿನಂತೆ ಪ್ರಕಾಶಮಾನವಾಗಿರಲೆಂದು, ಮನೆಯನ್ನು ದೀಪದಿಂದ ಅಲಂಕರಿಸುತ್ತಾರೆ. ದೇವರ ಮುಂದೆ ಪೂಜಿಸಿದ ಬಲಿರಾಜನನ್ನು ತುಳಸಿಯ ಕಟ್ಟೆಗೆ ತಂದು ಅಡಿಕೆ ಶಿಂಗಾರಾವನ್ನು ' ಇಂದು ಹೋಗಿ ನಾಳೆ ಬಾ' ಎಂದು ಕೂಗುತ್ತ ಮನೆ ಮಾಡಿನ ಮೇಲೆ ಎಸೆಯುತ್ತಾರೆ.

**************************************

# ಅಜ್ಜನ ಮನೆಯ ಸವಿ ನೆನಪು



**ಕಾವ್ಯ ಹೆಗಡ**

ನಮಸ್ಕಾರ ಎಲ್ಲರಿಗೂ, ನನ್ನ ಹೆಸರು ಕಾವ್ಯ ಹೆಗ್ಡೆ ನನಗೆ ಹತ್ತು ವರ್ಷ. ನಾನು ಕೆನಡಾ ದೇಶದ ಮಿಸಿಸ್ಸಾಗ ನಗರದಲ್ಲಿ ನನ್ನ ಅಪ್ಪ ಮತ್ತು ಅಮ್ಮನ ಜೊತೆ ವಾಸ ಮಾಡುತ್ತೇನೆ. ನನ್ನ ಅಪ್ಪನ ಹೆಸರು ಸುಧೀರ್ ಹೆಗ್ಡೆ ಮತ್ತು ಅಮ್ಮನ ಹೆಸರು ಶೋಭಾ ಹೆಗ್ಡೆ. ನಾನು ಐದನೇ ತರಗತಿಯಲ್ಲಿ ಓದುತ್ತಾ ಇದ್ದೀನಿ. ನಾನು ಇವತ್ತು ನನ್ನ ಅಜ್ಜನ ಮನೆಯ ಸವಿ ನೆನಪನ್ನು ನಿಮ್ಮೆಲ್ಲರಿಗೂ ಹೇಳಲು ಇಷ್ಟಪಡುತ್ತೇನೆ.

ನನ್ನ ಅಜ್ಜನ ಮನೆ ಭಾರತ ದೇಶದ, ಕರ್ನಾಟಕ ರಾಜ್ಯದ ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲ್ಲೂಕಿನ ಮುಗ್ವಾ ಗ್ರಾಮದಲ್ಲಿ ಇದೆ. ನಾನು ಈ ಸಲ ಜನವರಿ ೨೦೧೭ರಲ್ಲಿ ನಮ್ಮ ಅಜ್ಜನ ಮನೆಗೆ ಹೋಗಿ ಬಂದಿದ್ದೆ. ನನಗೆ ಅಜ್ಜನ ಮನೆಗೆ ಹೋಗುವುದು ಅಂದರೆ ತುಂಬಾ ಪ್ರೀತಿ. ನನ್ನ ಅಜ್ಜನ ಹೆಸರು ಈಶ್ವರ್ ರಾಮ ಹೆಗ್ಡೆ, ನನ್ನ ಅಜ್ಜಿಯ ಹೆಸರು ಅನುಸೂಯ ಹೆಗ್ಡೆ. ಈಗ ಅಜ್ಜನ ಮನೆಯಲ್ಲಿ ದೊಡ್ಡಪ್ಪ ಮತ್ತು ದೊಡ್ಡಮ್ಮ ಇದ್ದಾರೆ.

ಪ್ರತಿ ಸಲ ನಾವು ಬೆಂಗಳೂರಿಂದ ಊರಿಗೆ ಕಾರಿನಲ್ಲಿ ಹೋಗುತ್ತೇವೆ. ನನಗೆ ಯಾವಾಗಲೂ ಕಿಟಕಿ ಬಳಿ ಕುಳಿತು ಹೊರಗೆ ಇರುವ ಗಿಡ ಮರಗಳು, ನದಿಗಳನ್ನು ಹಾಗು ಜನರನ್ನು ನೋಡುತ್ತಾ ಪ್ರಯಾಣ ಮಾಡುವುದು ಅಂದರೆ ನನಗೆ ತುಂಬಾ ಖುಷಿ. ಅದರಲ್ಲೂ ಶರಾವತಿ ನದಿ, ಸೇತುವೆಯನ್ನು ನೋಡಲು ಇನ್ನೂ ಸಂತೋಷ. ದಾರಿಯಲ್ಲಿ ಆಚೆ - ಈಚೆ ಗೇರುಸೊಪ್ಪಿನ ಕಾಡುಗಳು ಸಹ ಕಾಣುತ್ತೇವೆ.

ಅಜ್ಜನ ಮನೆ ಅಂದರೆ ನನಗೆ ನೆನಪಿಗೆ ಬರುವುದು ಅಜ್ಜನ ಮನೆಯ ಕಾಲು ದಾರಿ, ಅಂಗಳ ಹಾಗು ಹಸಿರಿನ ಅಡಿಕೆ ಮರಗಳು. ದೊಡಪ್ಪ ಮತ್ತು ದೊಡ್ಡಮ್ಮ ಇಬ್ಬರೂ ಕವಳ ಹಾಕುತ್ತಾ ಕುಳಿತಿರುತ್ತಾರೆ. ನನ್ನನ್ನು ನೋಡಿದ ತಕ್ಷಣ ಇಬ್ಬರೂ "ಕಾವ್ಯ ಆರಾಮ? ಹೇಂಗಿದ್ದೆ? " ಎಂದು ಕೇಳುತ್ತಾರೆ. ನಾನು ಕಾಲು ತೊಳೆದು ಒಳಗೆ ಹೋದ ಕೂಡಲೇ ದೊಡ್ಡಮ್ಮಕುಡಿಯಲು ಜೀರಿಗೆ ಕಷಾಯ ಕೊಡುತ್ತಾರೆ. ನಾನು ಕಷಾಯ ಕುಡಿದ ಕೂಡಲೇ ಅಡಿಕೆ ತೋಟಕ್ಕೆ ಹೋಗುತ್ತೇನೆ. ನನಗೆ ತೋಟದಲ್ಲಿ ಓಡಾಡುವುದು, ಅಲ್ಲಿರುವ ನೀರಿನ ಕಾಲುವೆಯಲ್ಲಿ ಕಾಲಾಡಿಸುವುದು ಅಂದರೆ ತುಂಬಾ ಸಂತೋಷ.

ಪ್ರತಿ ಸಲ ಊರಿಗೆ ಹೋದಾಗಲೂ ನನ್ನ ಅಪ್ಪ ಮತ್ತು ಅಮ್ಮ ಅಲ್ಲಿರುವ ಇಡಗುಂಜಿ ಹಾಗು ಸುಬ್ರಹ್ಮಣ್ಯ ದೇವಸ್ಥಾನಕ್ಕೆ ಹೋಗಿ ಕೈ ಮುಗಿದು ಪೂಜೆ ಮಾಡಿಸಿಕೊಂಡು ಬರುತ್ತಾರೆ. ನನಗೂ ಸಹ ಅವರೊಟ್ಟಿಗೆ ದೇವಸ್ಥಾನಕ್ಕೆ ಹೋಗಲು ತುಂಬಾ ಖುಷಿ. ಅದರಲ್ಲೂ ನಮ್ಮ ಮನೆ ದೇವರಾದ ಗೋಪಾಲ ಕೃಷ್ಣ ದೇವಸ್ಥಾನಕ್ಕೆ ಹೋಗುವುದು ಅಂದರೆ ಇನ್ನೂ ಇಷ್ಟ, ಈ ದೇವಸ್ಥಾನಕ್ಕೆ ಹೋಗುವ ದಾರಿಯಲ್ಲಿದಟ್ಟವಾದ ಕಾಡು ಇದೆ. ಈ ಸಲ ಅಲ್ಲಿಗೆ ಹೋಗುವಾಗ ಮಳೆ ಬಂದಿತ್ತು, ನಮ್ಮ ಕಾರು ಮುಂದಕ್ಕೆ ಹೋಗದೆ ಅಲ್ಲೇ ನಿಂತಿತು. ನಾವು ರಸ್ತೆಯಿಂದ ದೇವಸ್ಥಾನದವರೆಗೆ ನೆನೆದು ಕೊಂಡು ಹೋದೆವು. ನನಗಂತೂ ಮಳೆಯಲ್ಲಿ ನೆನೆದು ತುಂಬಾ ಸಂತೋಷ ಆಯಿತು ಆದರೆ ನನ್ನ ಬಟ್ಟೆ ಎಲ್ಲಾ ಕೆಸರಾಗಿತ್ತು

ಈ ಸಲ ನಾನು ನಮ್ಮ ಅಡಿಕೆ ತೋಟದಲ್ಲಿ ಬೆಳಿಗ್ಗೆ ನವಿಲುಗಳನ್ನು ನೋಡಿದೆ. ಅವುಗಳನ್ನು ನಾನು ಅಷ್ಟು ಹತ್ತಿರದಲ್ಲಿ ಎಂದೂ ನೋಡಿರಲಿಲ್ಲ. ನಾನು ಖುಷಿಯಿಂದ ಚಪ್ಪಾಳೆ ತಟ್ಟಿದೆ, ಪಾಪ ಅವು ಹೆದರಿ ಅಲ್ಲಿಂದ ಓಡಿ ಬಿಟ್ಟವು. ನನಗೆ ತುಂಬಾ ಬೇಸರವಾಯಿತು. ಆದರೆ ಅವು ನನ್ನನ್ನು ನಿರಾಶೆ ಮಾಡಲಿಲ್ಲ ಏಕೆಂದರೆ ನನಗೆ ಅವುಗಳ ಮೂರು ನವಿಲು ಗರಿಗಳು ಸಿಕ್ಕಿತು. ಅವು ನೋಡಲು ತುಂಬಾ ಸುಂದರವಾಗಿದೆ, ನಾನು ಅದನ್ನು ಕೆನಡಾಗೆ ಸಹ ತೆಗೆದುಕೊಂಡು ಬಂದಿದ್ದೇನೆ.

ಅಜ್ಜನ ಮನೆಯಲ್ಲಿ ಬೇಗ ರಾತ್ರಿ ಆಗುತ್ತೆ.ರಾತ್ರಿಯಾದ ಕೂಡಲೇ ಜೀರುಂಡೆಗಳು ಶಬ್ದ ಮಾಡುತ್ತವೆ. ಅಲ್ಲಿ ಮನೆಗಳಿಗೆ ದೊಡ್ಡ ಕಿಟಕಿಗಳು ಇರುತ್ತೆ, ಇದರ ಮೂಲಕ ತಂಪಾದ ಗಾಳಿ ಬರುತ್ತೆ. ಆಚೆ-ಈಚೆ ಮನೆಯವರು ಬಂದು ಅಜ್ಜನ ಅಂಗಳದಲ್ಲಿ ನಿಂತು ಮಾತಾಡಿ ಹೋಗುತ್ತಾರೆ.

ಈ ಸಲ ನಾವು ಅಜ್ಜನ ಮನೆಯಿಂದ ಒಂದು ದಿನದ ಪ್ರವಾಸಕ್ಕೆಂದು ಮೀರ್ಜನ್ ಕೋಟೆಗೆ ಹೋಗಿದ್ದೆವು. ಮೀರ್ಜನ್

ಕೋಟೆಯು ಅಘನಾಶಿನಿ ನದಿಯ ದಂಡೆಯ ಮೇಲೆ ನಿರ್ಮಾಣವಾಗಿದೆ. ಪೆಪ್ಪರ್ ರಾಣಿ ಎಂದೇ ಪ್ರಖ್ಯಾತಳಾಗಿರುವ ರಾಣಿ ಚೆನ್ನಭೈರಾದೇವಿ ಈ ಕೋಟೆಯನ್ನು ೧೬೦೮-೧೬೪೦ರ ನಡುವೆ ಕಟ್ಟಿದಳು ಎಂದು ನಂಬಲಾಗಿದೆ. ಈ ಕೋಟೆಯು ಸುಮಾರು ೧೧.೫ ಎಕರೆಗಳಷ್ಟು ವಿಸ್ತಾರವಾಗಿದೆ ಮತ್ತು ಇದನ್ನು ನಿರ್ಮಿಸಲು ಕೆಂಪು ಕಲ್ಲುಗಳನ್ನು ಬಳಸಲಾಗಿದೆ. ಕೋಟೆಯು ನಾಲ್ಕು ದ್ವಾರಗಳನ್ನು ಹೊಂದಿದ್ದು, ಪ್ರತಿಯೊಂದು ದ್ವಾರದಲ್ಲು ಅಗಲವಾದ ಮೆಟ್ಟಿಲುಗಳಿವೆ. ಕೊಟೆಯ ಒಳಗಡೆ ಒಂದು ಮುಖ್ಯ ದ್ವಾರ, ಒಂದು ಗುಪ್ತ ದ್ವಾರ, ಒಂಬತ್ತು ಬಾವಿ, ಹಾಳು ಬಿದ್ದ ದೊಡ್ಡ ದರ್ಬಾರ್ ಹಾಲ್ ಮತ್ತು ಬಹಳ ವಿಸ್ತಾರವಾದ ಮಾರುಕಟ್ಟೆ ಜಾಗವಿದೆ ಹಾಗೂ ಕೊಟೆಯ ಸುತ್ತ ೧೨ ಬುರುಜುಗಳಿವೆ. ನಾನಂತೂ ಕೋಟೆಯ ತುದಿಯ ಮೇಲೆ ನಿಂತು ಸುತ್ತ- ಮುತ್ತಿನ ಹಸಿರು ಮರ ಗಿಡಗಳನ್ನು ನೋಡುತ್ತಾ ಆನಂದಪಟ್ಟೆ.

ಅಜ್ಜನ ಮನೆಯಲ್ಲಿ ಬೆಕ್ಕು, ನಾಯಿ ಮತ್ತು ಎಮ್ಮೆಗಳು ಇವೆ. ಇವುಗಳಲ್ಲಿ ನನಗೆ ನಾಯಿಯನ್ನು ಕಂಡರೆ ತುಂಬಾ ಇಷ್ಟ. ಇದರ ಹೆಸರು ರಾಣಿ ಅಂತ. ನಾನು ಎಲ್ಲಿ ಹೋದರೂ ನನ್ನ ಹಿಂದೆಯೇ ಇರುತ್ತೆ.

ಅಜ್ಜನ ಮನೆಯ ಹಿಂದೆ ಹಳ್ಳ ಇದೆ. ಇದನ್ನು ದಾಟಲು ಸಂಕ ಇದೆ. ನನಗಂತೂ ಇದನ್ನು ದಾಟಲು ತುಂಬಾ ಹೆದರಿಕೆ. ನಾನು ಯಾವಾಗಲೂ ಅಮ್ಮನ ಜೊತೆ ಕೈ ಹಿಡಿದು ದಾಟುತ್ತೇನೆ.

ನಮ್ಮ ಅಜ್ಜನ ಮನೆ ರಸ್ತೆ ಇಂದ ತುಂಬಾ ದೂರ ಇದೆ. ಹಾಗಾಗಿ ವಾಹನಗಳ ಶಬ್ದ ಇರುವುದಿಲ್ಲ, ತುಂಬಾ ನಿಶಬ್ದವಾಗಿರುತ್ತೆ. "ಹೋಏ " ಎಂದು ಕೂಗಿದರೆ ನಮ್ಮ ಧ್ವನಿಯೇ ಪ್ರತಿಧ್ವನಿಸುತ್ತದೆ, ಅಷ್ಟು ಶಾಂತಿ ಇರುತ್ತದೆ. ಅಜ್ಜನ ಮನೆಯಲ್ಲಿ ಮಾವಿನ ಮರದ ಕೊಂಬೆಗೆ ದೊಡಪ್ಪ ಉಯ್ಯಾಲೆ ನನಗಾಗಿ ಕಟ್ಟಿದ್ದಾರೆ. ನನಗಂತೂ ಇದರಲ್ಲಿ ಕೂತು ತೂಗುವುದೇ ಕೆಲಸ. ತೂಗಿ, ತೂಗಿ ಮೇಲಕ್ಕೆ ಹೋದಂತೆ ನಾನು ಹಕ್ಕಿ ಹಾಗೆ ಹಾರುತಿದ್ದೇನೆ ಅನ್ನಿಸುತ್ತೆ. ಈ ಸಲ ಊರಿಗೆ ಹೋದಾಗ ನಾನು ಯಕ್ಷಗಾನವನ್ನು ನೋಡಿದೆ. ಈ ನೃತ್ಯ ಕಲೆ ನೋಡುವುದು ಅಂದರೆ ನನಗೆ ತುಂಬಾ ಇಷ್ಟ. ಪ್ರಸಂಗದ ಹೆಸರು "ವಾಲೀ ಸುಗ್ರೀವ". ಈ ಆಟವನ್ನು ಇಡೀ ರಾತ್ರಿ ಆಡುತ್ತಾರೆ, ನನಗಂತೂ ಅವರ ವೇಷ - ಭೂಷಣಗಳನ್ನು ಮತ್ತೆ ಮತ್ತೆ ನೋಡಬೇಕು ಅನ್ನಿಸುತಿತ್ತು.

ನನ್ನ ದೊಡ್ಡಪ್ಪ ವಿಧ ವಿಧವಾದ ಮೂರ್ತಿಗಳನ್ನು ಮಣ್ಣಿನಿಂದ ತಯಾರಿಸುತ್ತಾರೆ. ಈ ಸಲ ಊರಿಗೆ ಹೋದಾಗ ದೊಡ್ಡಪ್ಪ ಗಣೇಶ ಹಬ್ಬಕ್ಕೆಂದು ಗಣೇಶನ ಮೂರ್ತಿಯನ್ನು ತಯಾರಿಸುತ್ತಿದ್ದರು. ನನಗೂ ಸಹ ಹಾಗೆ ಮಾಡ ಬೇಕು ಅನ್ನಿಸುತಿತ್ತು.

ನಮ್ಮ ಊರಿನ ಜನ ತುಂಬಾ ಸರಳವಾಗಿರುತ್ತಾರೆ. ನಾನು ಪ್ರತಿ ಸಲ ರಜೆಗೆ ಭಾರತಕ್ಕೆ ಹೋದಾಗಲೂ ನಾನು ತಪ್ಪದೆ ಅಜ್ಜನ ಮನೆಗೆ ಹೋಗುತ್ತೇನೆ. ಕೆನಡಾಗೆ ಬಂದ ನಾನು ಊರಲ್ಲಿ ಕಳೆದ ಒಂದೊಂದು ನಿಮಿಷವನ್ನು ಸಹ ನೆನೆದು ಸಂತೋಷ ಪಡುತ್ತೇನೆ.

ನಾನು ನನ್ನ ಅಜ್ಜನ ಮನೆಯನ್ನು ತುಂಬಾ ಇಷ್ಟಪಡುತ್ತೇನೆ. ಅಲ್ಲಿ ದಣಿದಾಗ, ನಾನು ಶಕ್ತಿಯನ್ನು ಪಡೆಯಬಹುದು ಮತ್ತು ವಿಶ್ರಾಂತಿ ಪಡೆಯಬಹುದು. ಏಕೆಂದರೆ ನಾನು

ರುಚಿಕರವಾದ ಆಹಾರವನ್ನು ತಿನ್ನುತ್ತೇನೆ ಮತ್ತು ಆರಾಮವಾಗಿ ನಿದ್ರೆ ಮಾಡುತ್ತೇನೆ. ಅಲ್ಲದೆ, ನಾನು ಪ್ರಕೃತಿಯ ಸುಂದರವನ್ನು ನೋಡಬಹುದು. ನನಗೆ ಸಾಕಷ್ಟು ಆಹ್ಲಾದಕರ ನೆನಪುಗಳಿವೆ. ಈ ಎಲ್ಲಾ ಕಾರಣಕ್ಕಾಗಿ, ನಾನು ನನ್ನ ಅಜ್ಜನ ಅಮೂಲ್ಯ ಸ್ಥಳವಾಗಿದೆ.

ನಿಮ್ಮೆಲ್ಲರಿಗೂ ನನ್ನ ಅಜ್ಜನ ಊರಿನ ಪರಿಚಯ ಹಾಗೂ ಸವಿ ನೆನಪುಗಳ ವರ್ಣನೆ ಇಷ್ಟವಾಯಿತೆಂದು ಆಶಿಸುತ್ತೇನೆ.

****************************************

**ಪ್ರಯತ್ನ :**

ಎಲ್ಲವೂ ವಿಲಿಖಿತ, ಹಣೆಬರಹ ಎಂದ ಮೇಲೆ ಮನುಷ್ಯರೇಕೆ ಪ್ರಯತ್ನ ಪಡಬೇಕು? ಎಲ್ಲವೂ ತನ್ನಿಂದ ತಾನೇ ಆಗಿ ಬಿಡಲಿ' ಎಂದು

ಶಿಷ್ಯನೊಬ್ಬ ಗುರುಗಳಲ್ಲಿ ಕೇಳಿದ. ಅದಕ್ಕೆ ಗುರುಗಳೆಂದರು - 'ಯಾರಿಗೆ ಗೊತ್ತು ನಮ್ಮ ಹಣೆಯಲ್ಲಿ ಆ ದೇವರು 'ಪ್ರಯತ್ನಿಸಿದರೆ ಫಲ ಸಿಗುತ್ತದೆ' ಎಂದು ಬರೆದಿರಬಹುದು. ನಾವು ಪ್ರಯತ್ನಿಸದೆ ಸುಮ್ಮನೆ ಕುಳಿತರೆ ದೇವರೇನು ಮಾಡುತ್ತಾನೆ ಪಾಪ!'

# ಹವಿಕರು ಯಾರು?



**ರಾಘವೇಂದ್ರ ಕಟ್ಟಿನಕೆರೆ,**

**ಟೊರೊಂಟೊ, ಕೆನಡಾ**

ಈ ಲೇಖನದಲ್ಲಿ ನಮ್ಮ ಅಂದರೆ ಹವಿಕರ ಪರಂಪರೆ ಮತ್ತು ಇತಿಹಾಸವನ್ನು ಕುರಿತು ಹಲವು ಮಾಹಿತಿಗಳನ್ನು ಸಂಗ್ರಹಿಸಿ ನನ್ನದೇ ಕೆಲವು ವಿಚಾರ ಮತ್ತು ಅಭಿಪ್ರಾಯಗಳೊಂದಿಗೆ ವಿವರಿಸುವ ಪ್ರಯತ್ನ ಮಾಡಿದ್ದೇನೆ. ಈ ಲೇಖನದ ಪೂರಕವಾಗಿ, "A Response to Some Popular Western Atheists" ಎಂಬ ಇಂಗ್ಲಿಶ್ ಲೇಖನದಲ್ಲಿ ಅಮೆರಿಕಾದ "ಚಿಂತಕರು" ನಮ್ಮ ಪರಂಪರೆ ಮತ್ತು ದರ್ಶನಗಳ ಮೇಲೆ ಮಾಡುತ್ತಿರುವ ಆಕ್ರಮಣ, ಅವುಗಳ ಕುರಿತು ನನ್ನ ಪ್ರತಿಕ್ರಿಯೆ ಮತ್ತು ನಾವು ಮಾಡಬೇಕಿರುವ ಸಂಘಟನೆಯ ನನ್ನ ವಿಚಾರಗಳನ್ನು ಮಂಡಿಸಿದ್ದೇನೆ.

**ಹವಿಕರ ಸ್ವಸ್ವರೂಪ (Identity) ಯಾವುದು ?**

ಹವಿಕರನ್ನು ಜನಾಂಗ (ethnicity) ಎಂದು ಗುರುತಿಸಿ ನಮ್ಮ ಇತಿಹಾಸ ಕಂಡುಕೊಳ್ಳುವ ಪ್ರಯತ್ನ ಆಗಿದೆ. ಸುಮಾರು ೧೬೦೦ ವರ್ಷದ ಹಿಂದೆ ಈಗಿರುವ ಕಡೆ ಬಂದವರೆಂದು ಇಟ್ಟುಕೊಂಡರೆ, ಅದಕ್ಕೆ ಮೊದಲು ಎಲ್ಲಿದ್ದರು? ಅಹಿಚ್ಛತ್ರ ಈಗಿನ ರಾಮನಗರ (ಉತ್ತರ ಪ್ರದೇಶ) ಎಂದಿಟ್ಟುಕೊಂಡರೆ, ಅಲ್ಲಿಗೆ ಎಲ್ಲಿಂದ ಬಂದವರು? ಹಿಂದೆ ಯಾವುದೋ ಪ್ರಾಕೃತ ಮಾತಾಡಿದರೂ, ಕನ್ನಡ ಮಾತಾಡಿದರೂ, ಮುಂದೆ ಇಂಗ್ಲಿಷ್ ಮಾತಾಡಿದರೂ, ಬೇರೆ ಜಾತಿಯವರೊಡನೆ ಹಿಂದಿನಿಂದಲೂ ವಿವಾಹ ನೆಡೆಯುತ್ತಿದ್ದರೂ (not really endogamous) ನಾವು ಹವಿಕರು ಎಂದಾದರೆ, ನಮ್ಮತನ ಯಾವುದು? ಇದನ್ನು ಕಂಡುಕೊಳ್ಳುವ ಪ್ರಯತ್ನ ಇಲ್ಲಿ ಮಾಡಿದ್ದೇನೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಪುರಾತನ ಭಾರತೀಯ ಪರಂಪರೆಗಳ ಜೊತೆ ನಮ್ಮನ್ನು ಗುರುತಿಸಿಕೊಳ್ಳಬೇಕು (identity) ಎನ್ನುವುದು ನನ್ನ ವಾದ.

ಭಾರತೀಯ ನಾಗರಿಕತೆ ಸುಮಾರು ೯೦೦೦ ವರ್ಷ ಹಳತು ಎಂದು ಕಾರ್ಬನ್ ಡೇಟಿಂಗ್ ಮೂಲಕ ದಿ ನೇಚರ್ ನಲ್ಲಿ ಅನಿಂದ್ಯ ಸರ್ಕಾರ್ ಎಂಬವರು ಇತರ ಕೆಲವೆ ಲೇಖಕರೊಡಗೂಡಿ ಪ್ರಕಟಿಸಿದ್ದಾರೆ [1]. ಆಗ ಬಳಕೆಲ್ಲಿದ್ದ ಅಳತೆಯ ಮಾನಗಳು ಇತ್ತೀಚಿನವರೆಗೂ ಬಳಕೆಯಲ್ಲಿದ್ದ ಅಂಗುಲ ಅಳತೆ,ಗೇಣು, ಮೊಳ ಇತ್ಯಾದಿಯೇ ಎಂದು ಈಗ ತಿಳಿದು ಬರುತ್ತಿದೆ. ಅಂದರೆ ನಾವು ಸರಸ್ವತೀ ನದಿ ನಾಗರಿಕತೆಯಿಂದ ಬಂದಿರಬಹುದೇ? ಅದೇನೇ ಇದ್ದರೂ ನಾವು ಯಾರು (identity) ಎಂಬ ಸಮಸ್ಯೆಯನ್ನು ನಮ್ಮ ಹಿರಿಯರು ಬಹಳ ಸ್ಪಷ್ಟವಾಗಿ ಬಗೆಹರಿಸಿದ್ದಾರೆ. ಅದೇ ನಮ್ಮ ಉಪನಯನದಲ್ಲಿ ಬೋಧಿಸುವ ಶಾಖಾ-ಗೋತ್ರ-ಪ್ರವರ (ಪ್ರವರ ಎಂದು ಬಳಸುತ್ತೇನೆ). ಆ ಪ್ರವರ, ನಿತ್ಯಕರ್ಮ ಇತ್ಯಾದಿಗಳ ಸರಿಯಾದ ಅರ್ಥವು ಸಂಧ್ಯಾಭಾಷ್ಯ ಎಂಬ ಗ್ರಂಥದಲ್ಲಿ ಸಿಗುತ್ತದೆ. ಈ ಗ್ರಂಥ ಬೆಂಗಳೂರು ಗಿರಿನಗರದ ರಾಮಚಂದ್ರಾಪುರ ಮಠದಲ್ಲಿ ಲಭ್ಯ. ಅದರಲ್ಲಿ ಇಲ್ಲದ ನಾನು ಕಂಡುಕೊಂಡ ಕೆಲವು ವಿವರಗಳನ್ನು ಇಲ್ಲಿ ಹೇಳುತ್ತೇನೆ. ಮುಂದೆ ಹೇಳಲಿರುವುದು ಬರಿ ಸಂಪ್ರದಾಯವಾದ ಅಲ್ಲ. ನಮ್ಮ ಬಗ್ಗೆ ಹೊಸದಾಗಿ ತಿಳಿದು ಬರುತ್ತಿರುವ ವೈಜ್ಞಾನಿಕ ಸಂಶೋಧನೆಗಳ ಆಧಾರ ಇದಕ್ಕೆ ಇದೆ. *ಪ್ರವರಕ್ಕೆ ಒಂದು ಉದಾಹರಣೆ:*

***"ಶ್ರೀಮದ್ಯಜುಶಾಖಧ್ಯಾಯೀ ಬೋಧಾಯನ ಸೂತ್ರಾನ್ವಿತ ಕಾಶ್ಯಪಾವತ್ಸಾರ ನೈಧ್ರುವ ತ್ರಯಾರ್ಷೇಯ ಕಾಶ್ಯಪ ಗೋತ್ರೋತ್ಪನ್ನ ರಾಘವೇಂದ್ರ ಶರ್ಮಣಮಹಮಸ್ಮಿ; ಅಹಂ ಭೋಃ ಅಭಿವಾದಯೇ."***

ನಾವು ನಮ್ಮ ಪ್ರವರದಲ್ಲಿರುವ ವೇದದ ಶಾಖೆಯನ್ನು ಅಧ್ಯಯನ ಮಾಡಿ (ಅದರಲ್ಲಿರುವ ಮಾಹಿತಿಯನ್ನು ಲೋಕೋಪಕಾರಕ್ಕಾಗಿ ಬಳಸಬೇಕು) ಎನ್ನುವುದು ತಾತ್ಪರ್ಯ. ಹೆಚ್ಚಿನ ಹವಿಕರು ಕೃಷ್ಣಯಜುರ್ವೇದ ಶಾಖೆಯವರಾದರೆ ಕೆಲವು ಸಾಮವೇದಿಗಳು ಇದ್ದಾರೆ (ಬೆರೆಯು ಇರಬಹುದು) (ಉತ್ತರ ಭಾರತದ ಮಂತ್ರ ಬೇರೆ ರೀತಿ ಕೇಳುವುದು ಅವು ಸಾಮಗಾನ ಎಂಬುದು ಮುಖ್ಯ ಕಾರಣ. ನೂರಾರು ಸಾಮಗಳಿವೆ). ಮೇಲಿನ ಪ್ರವರದ ಅರ್ಥ: "ಕೃಷ್ಣಯಜುರ್ವೇದವನ್ನು ಅಧ್ಯಯನ ಮಾಡುವ ಬೋಧಾಯನರ ಸೂತ್ರದಲ್ಲಿ ಇರುವ ಸಂಸ್ಕಾರಗಳು ಇತ್ಯಾದಿ ಕ್ರಮ ಅನುಸರಿಸುವ ನನಗೆ ಕಶ್ಯಪ ಅವತ್ಸಾರ ಮತ್ತು ನೈಧ್ರುವ

ಎಂಬ ಮೂರು ವೇದಮಂತ್ರ ದ್ರಷ್ಟಾರರಾದ ಋಷಿಗಳ ಮಾರ್ಗದರ್ಶನವಿರುವ (ವತ್ಸಾರ, ನಿಧ್ರುವ ಕಶ್ಯಪರ ಪರಂಪರೆ ಎಂಬರ್ಥ) ನಾನು ಕಶ್ಯಪರ ಗೋತ್ರದಲ್ಲಿ ಹುಟ್ಟಿದ ರಾಘವೇಂದ್ರ ಶರ್ಮಾ, ನಿಮಗೆ ನನ್ನ ಅಭಿವಾದನೆ."

ಬೇರೆಲ್ಲ ಬಿಟ್ಟು ಇದೆ ನಮ್ಮ ಗುರುತು ಯಾಕಾಗಬೇಕು? ಈ ಆಧುನಿಕ ಯುಗದಲ್ಲಿ ಈ ಹಳೆ ವಿಷಯಗಳು ಅಪ್ರಸ್ತುತ ಅಲ್ಲವೇ ಎಂಬುದಕ್ಕೆ ಹಲವು ಉತ್ತರ ಇದೆ. ಭಾರತೀಯ ಜ್ಞಾನಕ್ಕೆ ಸಂಭಂಧಿಸಿದ ಎಲ್ಲಾ ಶಾಖೆಗಳನ್ನೂ ಮತೀಯ (ಧಾರ್ಮಿಕ) ಎಂದು ಪಾಶ್ಚಾತ್ಯರು ಗುರುತಿಸಿದ್ದನ್ನು ನಾವು ಒಪ್ಪಿ ಈ ರೀತಿಯ ಪ್ರಶ್ನೆ ಕೇಳುತ್ತೇವೆ. ನಮ್ಮ ಮೂಲ ವಿಜ್ಞಾನ ತರ್ಕ ತಂತ್ರಜ್ಞಾನದ ಅನೇಕ ಅಂಶಗಳು ತಪ್ಪಾಗಿ ಧಾರ್ಮಿಕ (religious/ಮತೀಯ) ಎಂದು ಗುರುತಿಸಲ್ಪಟ್ಟಿವೆ. ಅದನ್ನು ಗೊಡ್ಡು ಸಂಪ್ರದಾಯ ಎಂದು ನೋಡದೆ ಅರ್ಥಮಾಡಿಕೊಳ್ಳಲು ಪ್ರಯತ್ನಿಸಬೇಕಾಗಿದೆ. ಬೇರೆ ಯಾವ ಸಂಸ್ಕೃತಿಗೂ ಅರಿವಾಗದ ಬ್ರಹ್ಮ ಎಂಬ ಅನುಭೂತಿಗೆ ಮತ್ತು ಧರ್ಮವೆಂಬ ತತ್ವಕ್ಕೆ ಪ್ರಮಾಣವನ್ನು (ಪ್ರೈಮರಿ ಸೊರ್ಸ್) ವೇದಗಳಲ್ಲಿ ಮತ್ತು ಕೊನೆಗಿರುವ ಉಪನಿಷತ್ತಿನಲ್ಲಿ ಋಷಿಗಳು ಸಂಗ್ರಹಿಸಿಟ್ಟರು. ಬ್ರಹ್ಮಸೂತ್ರ ಮತ್ತು ಗೀತೆಯಲ್ಲಿ (ಪ್ರಸ್ಥಾನತ್ರಯಗಳು) ಅದರ ವಿವರ ನೀಡಿದರು. ಅದರ ಸುತ್ತ ಹುಟ್ಟಿಕೊಂಡ ವೇದಾಂಗಗಳೂ ಸೇರಿ ವೇದಾಧ್ಯಯನ ಎಂದಾಯಿತು. ಆಗಮಗಳು ಮತ್ತು ವೇದಾಂಗಗಳ ಅನೇಕ ಅಂಶಗಳು ಇಂದಿನ ವಿಜ್ಞಾನಕ್ಕೆ ಸಮನಾದ ಸಂಗ್ರಹಗಳು. ಸಾವಿರಾರು ಆಗಮಗಳ ಅನುವಾದವೇ ಇನ್ನೂ ಆಗಿಲ್ಲ - ಈಗ ಆಗುತ್ತಿದೆ. ಸಾವಿರಾರು ವೇದದ ಶಾಖೆಗಳು ಆಗಮಗಳೂ ನಷ್ಟವಾಗಿವೆ. ವ್ಯಾಕರಣ, ಪಂಚಾಂಗ (calendar), ಜ್ಯೋತಿಷ(ಖಗೋಲಶಾಸ್ತ್ರ), ನಿರುಕ್ತ(etymology) ಶಿಕ್ಷಾ (phonetics and phonology) ವಾಸ್ತು (civil engineering and architecture) ಇತ್ಯಾದಿ ಎಲ್ಲವೂ ಪ್ರವರದಲ್ಲಿ ಹೇಳಿದ ನಮ್ಮ ಪರಂಪರೆಯ ಅಂಗ. ಹಾಗಾಗಿ ಇವುಗಳ ಅಧ್ಯಯನ ಬರೀ ಅಪ್ರಸ್ತುತ ವಿಷಯಗಳ ಅಧ್ಯಯನ ಆಗುವುದಿಲ್ಲ. ಪ್ರವರದಲ್ಲಿರುವ ಋಷಿಗಳು ವೇದಮಂತ್ರ ದೃಷ್ಟಾರರು(composers). ನಾವು ಮಾಡುವುದನ್ನು ಬಿಟ್ಟು ವೇದ ಓದಬೇಕು ಎಂದಲ್ಲ. ಇಡೀ ವೇದದ ಶಾಖೆಯಲ್ಲದಿದ್ದರೂ ಪ್ರವರದಲ್ಲಿರುವ ಋಷಿಗಳ ಕೆಲವು ಮಂತ್ರಗಳನ್ನಾದರೂ ಅರ್ಥಮಾಡಿಕೊಳ್ಳುವ ಪ್ರಯತ್ನವನ್ನು ನಾವೆಲ್ಲರೂ ಮಾಡಿದರೆ ಒಳ್ಳೆಯದು.

ಪ್ರವರದಲ್ಲಿನ ಪರಂಪರೆ ಹವಿಕರ ಗುರುತು ಯಾಕೆ ಎನ್ನುವುದಕ್ಕೆ ಇನ್ನು ಬಹಳ ಕಾರಣಗಳಿವೆ. ನಮ್ಮ ಸಂಸ್ಕೃತಿಯ ಅನೇಕ ಅಂಶಗಳು ನಮ್ಮ ವೈದಿಕ ಅಧ್ಯಯನದಲ್ಲಿ ಅಡಕವಾಗಿದೆ. ಭಾರತೀಯ ಯೋಚನಾಕ್ರಮವೇ ಬೇರೆ, ಅದರಿಂದ ವೈಜ್ಞಾನಿಕ ಪ್ರಗತಿಯಾಗಿದೆ. ಆಧುನಿಕ ಭಿನ್ನರಾಶಿ, ವೃತ್ತಗಣಿತ (trigonometry), ಭಿಜಗಣಿತ ಇತ್ಯಾದಿಗಳು ಭಾರತದಲ್ಲೇ ಜನಿಸಿದವು ಎಂದು ಸಿದ್ಧವಾಗುತ್ತಿದೆ. ಇವುಗಳಲ್ಲಿ ಅನೇಕವನ್ನು ಪ್ರಾಚೀನವಾದ ವೇದಾಂಗಗಳಲ್ಲಿ ಕಾಣಬಹುದು. ಪೌಲ್ ಬೈರೊಕ್ ಮತ್ತು ಆಂಗಸ್ ಮ್ಯಾಡಿಸನ್ ಎಂಬ ಖ್ಯಾತ ಅರ್ಥಶಾಸ್ತ್ರಜ್ಞರು ಭಾರತ ೧ ರಿಂದ ೧೬ನೇ ಶತಮಾನದವರೆಗೂ ಎಲ್ಲರಿಗಿಂತ ಶ್ರೀಮಂತ ರಾಷ್ಟ್ರವಾಗಿತ್ತು ಎಂದು ಸಂಶೋಧನೆಗಳನ್ನು ಪ್ರಕಟಿಸಿದ್ದಾರೆ[೨]. ವೈಜ್ಞಾನಿಕವಾಗಿ ಮುಂದಿಲ್ಲದೇ ಆರ್ಥಿಕ ಬಲ ಸಾಧ್ಯವೇ? ಅದೇನೇ ಇದ್ದರೂ ಪಾಶ್ಚಾತ್ಯ ಯೋಚನಾಕ್ರಮ, ವಿಜ್ಞಾನ, ಗಣಿತ ಇವು ಒಂದೇ ಅಲ್ಲ. ಇವನ್ನು ಬೇರೆ ಬೇರೆ ರೀತಿಯಲ್ಲಿ ಮಾಡಲು ಸಾಧ್ಯ ಮತ್ತು ಹೇಗೆ ಎನ್ನುವ ತಿಳುವಳಿಕೆ ನಮ್ಮ ಸಂಸ್ಕೃತಿಯಲ್ಲಿ ಅಡಕವಾಗಿದೆ ಎನ್ನುವುದು ಮುಖ್ಯ. ಅದು ನಮ್ಮ ಪರಂಪರೆಯನ್ನು ನಾವು ಅವಗಣಿಸಿದರೆ ನಷ್ಟವಾಗುತ್ತದೆ ಎನ್ನುವುದರಲ್ಲಿ ಸಂಶಯವಿಲ್ಲ. ಖ್ಯಾತ ಗಣಿತಜ್ಞ ಮತ್ತು ಭೌತವಿಜ್ಞಾನಿ ಚಂದ್ರಕಾಂತ ರಾಜು ಅವರ ಸಂಶೋಧನೆ ಇದರ ಬಗ್ಗೆ ಹೊಸ ತಿಳುವಳಿಕೆಯನ್ನು ಸಂಗ್ರಹ ಮಾಡಿದೆ (Decolonizing mathematics education). Western science ನಲ್ಲಿ ಮತ್ತು western speculation (philosophy) ಯಲ್ಲಿ Christian dogma ಎಲ್ಲೆಲ್ಲೂ ಮನೆ ಮಾಡಿದೆ, ಅದನ್ನು ಅಳವಡಿಸಿಕೊಳ್ಳುವ ಮುನ್ನ ನಮ್ಮ ಪರಂಪರೆಯ ಕಣ್ಣಿನಿಂದ ಅದನ್ನು ಸೋಸಬೇಕೆಂಬುದು C K ರಾಜು ಅವರ ಮತ. ಕಷ್ಟಪಟ್ಟು ಕಲಿಯಬೇಕಾಗುವ ಈ ಹಲವು ಅಂಶಗಳು ಹವಿಕರ ಜೀವನದಲ್ಲೇ ಇನ್ನೂ ಅಡಕವಾಗಿ ಉಳಿದುಕೊಂಡಿವೆ. ನಮ್ಮ ಪುರಾತನ ಯೋಚನಾಕ್ರಮವೊಂದಿದೆ ಅದು ನಮ್ಮ ಪರಂಪರೆಯಲ್ಲಿ ಅಡಕವಾಗಿದೆ. ಅವನ್ನು ಉಳಿಸಿಕೊಳ್ಳಲು ಸರಿ ಅರ್ಥಮಾಡಿಕೊಳ್ಳಲು ನಮ್ಮ ಪೂರ್ವಿಕರ ಕ್ರಮವನ್ನು ಅಧ್ಯಯನ ಮಾಡುವುದು ಅವಶ್ಯ. ನಮ್ಮ ಸಂಪ್ರದಾಯವನ್ನೇ ಅಧ್ಯಯನ ಮಾಡುವುದರ ಮೂಲಕ ಅದನ್ನು ನಾವು ಪ್ರಾರಂಭಿಸಬಹುದು.

## ಅಧ್ಯಯನ ಮತ್ತು ಜೀವನ

ಭಾರತೀಯ ದರ್ಶನ ಮತ್ತು ತತ್ವಗಳು ಹವಿಕರ ಜೀವನದಲ್ಲಿ ಅಡಕವಾಗಿದೆ. ನಮ್ಮ ಪರಂಪರೆಯ ಅಧ್ಯಯನ ನಮ್ಮ ಜೀವನಕ್ರಮವನ್ನು ಬಲಪಡಿಸಬಲ್ಲದು. ಪಾಶ್ಚಾತ್ಯ ಸಾಮಾಜಿಕ ಅಧ್ಯಯನದಲ್ಲಿ (western sociology) ಮಾಡುವ ವಿಭಾಗಗಳನ್ನು [೩] ಜನಜೀವನದ ಮೇಲೆ ಹೇರುವ ಅಭ್ಯಾಸ ಇದೆ. ನಮ್ಮ ಪರಂಪರೆಯ ಅಧ್ಯಯನ ಹಾಗಲ್ಲ. ಅದು ಹೇಗೆ ಎಂದು ನೋಡೋಣ.

ಹವಿಕರಲ್ಲಿ ಮೂಲ ಅರ್ಥದಲ್ಲಿ "ವಾದ" ಮಾಡುವ ಕ್ರಮ ಇನ್ನೂ ಇದೆ. ವಾದ ಎಂದರೆ scientific debate. ಇದರಲ್ಲಿ ಜನಪ್ರಿಯ ಡಿಬೇಟ್ ಗಳಲ್ಲಿ ಇರುವ logical fallacy, rhetoric ಇತ್ಯಾದಿಗಳಿಗೆ ಅವಕಾಶ ಇಲ್ಲ. ಶಂಕರಾಚಾರ್ಯರು ಮಾಡಿದ್ದು ಈ ರೀತಿಯ ವಾದ. ಶಾಸ್ತ್ರಗಳು ನಿರ್ಣಯವಾಗಿದ್ದು ಈ ರೀತಿಯ honest debateನಿಂದ. ಯಕ್ಷಗಾನದಲ್ಲಿ, ತಾಳಮದ್ದಳೆಯಲ್ಲಿ ಇರುವುದು ಜಾರಿಕೆಯವಾದ, ಪ್ರಾಮಾಣಿಕವಾದ್ದಲ್ಲ. ಇದಕ್ಕೆ ನಮ್ಮ ಪರಂಪರೆಯಲ್ಲಿ ಹೆಚ್ಚು ಬೆಲೆ ಇಲ್ಲ. ಮನೆಗೆ ಬಂದಾಗ ಅತಿಥಿಯನ್ನು ನೀರುಕೊಟ್ಟು ನಮಸ್ಕರಿಸುವ ಪದ್ಧತಿ ಇನ್ನು ಶಿರಸಿ ಸಿದ್ದಾಪುರದಲ್ಲಿ ಇದೆ. ಇದೇ ತೈತ್ತಿರೀಯ ಉಪನಿಷತ್ತಿನ - ಅತಿಥಿ ದೇವೋಭವ, ಮಾತೃ ಪಿತೃ ಆಚಾರ್ಯ ದೇವೋಭವ ಇತ್ಯಾದಿ (ಶಂಕರರು ಇದಕ್ಕೆ ಭಾಷ್ಯ ಬರೆದಿದ್ದಾರೆ). ತಾಯಿ ದೇವರು ಎಂಬುದನ್ನು ಉಪನಿಷತ್ತಿನಲ್ಲಿ ಹೇಳಿದ್ದನ್ನು ಸರಳವಾಗಿ ಮಹಾಭಾರತದಂತಹ ಇತಿಹಾಸದ ಕಥೆಗಳಲ್ಲಿ ಉದಾಹರಿಸಲಾಗಿದೆ. ಶಾಂತಿಪರ್ವದಲ್ಲಿ ಕೊನೆಗೆ ಭೀಷ್ಮ ಧರ್ಮಯಾವುದು ಎಂದು ಸರಳೀಕರಿಸಿ ಧರ್ಮರಾಯನಿಗೆ ತಂದೆ ತಾಯಿ ಮತ್ತು ಗುರುಗಳ ಸೇವೆಯೇ ಅತಿ ಹೆಚ್ಚಿನದು ಎಂದು ಹೇಳುತ್ತಾನೆ.

मातापित्रोर गुरूणां च पूजा बहुमता मम।
पितृन दश तु मातैका सर्वां वा पृथिवीम अपि।
अत्र युक्तो नरो लोकान यशश च महद अश्नुते।३।
गुरुत्वेनाभिभवति नास्ति मातृसमो गुरुः ।०६।

(ವ್ಯಾಸಭಾರತ ಶಾಂತಿಪರ್ವ) (*a mother is equal to 10 fathers and there is nothing equal the mother*)

ನಮ್ಮಲ್ಲಿ ಸಭಾ ಪೂಜೆ ಅತಿಥಿ ಪೂಜೆ ಹೀಗೆ ಎಲ್ಲ ಒಳ್ಳೆಯದಕ್ಕೂ ಪೂಜೆ ಇದೆ ಬರಿ ದೇವರಿಗಷ್ಟೇ ಅಲ್ಲ. ಹಾಗಾಗಿ ನಾವು ಮಾಡುವ ಪೂಜೆ worship ಅಲ್ಲ. ನಮ್ಮ ಪೂಜೆ ದೇವರಿಗಷ್ಟೇ ಸೀಮಿತವಲ್ಲ. ನಮ್ಮ ಪರಂಪರೆಯಲ್ಲಿ ಗಂಡ ಹೆಂಡಿರು ಸ್ನೇಹಿತರೇ ಹೊರತು ಹೆಂಡತಿ ಕೆಳಗಿನವಳಲ್ಲ (ಸಖಾಸಪ್ತಪದೀಭವಂ - ಸಪ್ತಪದಿಯ ಕೊನೆಯ ಹೆಜ್ಜೆಗೆ ಪತಿಯು, ತನ್ನ ಸಖಳು ಎಂದು ಪತ್ನಿಯನ್ನು ಸ್ವೀಕರಿಸುವುದು). ಮದುವೆಯಲ್ಲಿ ಮಾಡುವ ಸಭಾಕಾರ್ಯಕ್ರಮ ಸೀಮೆದೇವರಿಗೆ ವೀಳ್ಯ ಇತ್ಯಾದಿ ಹವಿಕರ ಸಭಾಕಾರ್ಯಕ್ರಮದ ಮೂಲ ರೂಪ. ಈಗಿನ ಪ್ರಾರ್ಥನೆ ಸ್ವಾಗತ ವಂದನಾರ್ಪಣೆ ಇವೆಲ್ಲ ಪಾಶ್ಚಾತ್ಯ ಕ್ರಮ. ಮನೆಗೆ ಬಂದವರನ್ನು ಸಮಾನವಾಗಿ ಮನೆಯ ಹೆಂಗಸರು ಗಂಡಸರೆಲ್ಲ ಹೊಸ್ತಿಲು ದಾಟಿ ಬಂದು ಮಾತಾಡಿಸುವುದು, ಸಾಮಾಜಿಕ ಆರ್ಥಿಕ ಸ್ಥಾನಕ್ಕೆ ಬೆಲೆಕೊಡದೆ ನಮ್ಮ ಹತ್ತಿರದ ನೆಂಟರನ್ನು ಮೊದಲು ಮಾತಾಡಿಸುವುದು. ಆಮಂತ್ರಣ ಕೊಡುವಾಗ ಸಣ್ಣ ಮಕ್ಕಳನ್ನೂ ಬಿಡದೆ ಅಕ್ಷತೆ ಕೊಟ್ಟು ಕರೆಯುವುದು. ಸಹಪಂಕ್ತಿ ಭೋಜನ, ಹಣಕ್ಕಿಂತ ವಿದ್ವತ್ತಿಗೆ ಹೆಚ್ಚಿನ ಬೆಲೆ. ಹಿರಿಯರಿಗೆ ಸ್ಥಳ ಬಿಟ್ಟು ಕೊಡುವುದು. ಆಕಳನ್ನು ಗೊಡ್ಡಾದರೂ ಮುದಿಯಾದರು ಕಸಾಯಿಕಾನೆಗೆ ಮಾರದಿರುವುದು (ಶಂ ಚತುಷ್ಪದೇ). ಕರುವಿಗೆ ಎರಡುಮೂಲೆ ಬಿಟ್ಟು ಎರಡೆ ಮೊಲೆ ಹಾಲನ್ನು ಮಾತ್ರ ಕರೆದು ಬಳಸುವುದು. ಪುಸ್ತಕವನ್ನು ಕಾಲಿನಿಂದ ಮುಟ್ಟದೆ ಇರುವುದು, ಚಪ್ಪಲಿ ಧರಿಸಿ ವೇದಿಕೆ ಸಭೆ ಶಾಲೆ ಆಸನದಮೇಲೆ ಕೂರದಿರುವುದು. ಹೀಗೆ ಅನೇಕ ವಿಷಯಗಳ ಯಾದಿಯನ್ನೇ ತೆರೆದಿಡಬಹುದು. ನಮ್ಮ ಈ ಆಚರಣೆಗಳು ಪರಂಪರೆಯಿಂದ ಬಂದವಾದ್ದರಿಂದ ಇವು ಹವಿಕರ ಗುರುತು ಎಂದು ಒಪ್ಪಿಕೊಂಡರೂ ಪರಂಪರೆಯೇ ನಮ್ಮ ಮೂಲ ಗುರುತು ಎಂದಾಗುತ್ತದೆ. ಇವೆಲ್ಲ ನಮ್ಮ ಪರಂಪರೆಯ ತಾತ್ವಿಕ ತಳಹದಿಯಿರುವ ಆಚರಣೆಗಳು. ನಮ್ಮ ಪರಂಪರೆಯ ಸರಿಯಾದ ತಿಳುವಳಿಕೆಯಿಂದ ನಮ್ಮ ಜೀವನಕ್ರಮವನ್ನು ನಾವು ಸರಿಪಡಿಸಲು ಸುಧಾರಿಸಲು ಅವಕಾಶವಿದೆ (ಆಚರಣೆಯಲ್ಲಿದ್ದರೂ ತಾತ್ವಿಕವಾಗಿ ಸಲ್ಲದವನ್ನು ಕೈಬಿಡುವುದು). ಇದು ಮಕ್ಕಳಿಗೆ ನಾವು ತೋರಿಸಿ ಕಲಿಸಬೇಕಾದ್ದು, ಯಾರೋ ಮಾಡುವುದಲ್ಲ - ಮನೆ ಮನೆಯಲ್ಲಿ ಆಗಬೇಕಾದ್ದು. ಶಾಸ್ತ್ರಗಳಲ್ಲಿರುವ ಅಂಶಗಳನ್ನು ಮಹಾಭಾರತ ರಾಮಾಯಣದಂತಹ ಇತಿಹಾಸ ಗ್ರಂಥಗಳಲ್ಲಿ ಮತ್ತು ಪುರಾಣಗಳಲ್ಲಿ ಸರಳೀಕರಿಸಲಾಗಿದೆ. ಯಾರೋ ಬರೆದ ಕಥೆಗಳನ್ನು ಓದದೇ, ಬರಿ ಮಕ್ಕಳ ರಾಮಾಯಣ ಓದದೇ ಪರಂಪರೆಗೆ ಅನುಗುಣವಾಗಿ ಮಾಡಿದ ಅನುವಾದವನ್ನೇ ನಾವು ಬಳಸಬೇಕು. ಉದಾಹರಣೆಗೆ ದೇವುಡು ಅವರು ಕನ್ನಡಕ್ಕೆ ಅನುವಾದಿಸಿದ ವ್ಯಾಸ ಭಾರತವನ್ನು ಮಕ್ಕಳಿಕೆ ಓದಿ ಹೇಳಬಹುದು. ಹೀಗಾಗಿ ನಮ್ಮ ಪರಂಪರೆಯ ಅಧ್ಯಯನ ideological ದೃಷ್ಟಿಯಿಂದ ಅಲ್ಲ, ಆಚರಣೆಗಾಗಿ (practical). ಪಾಶ್ಚಾತ್ಯ ಸಾಮಾಜಿಕ ಅಧ್ಯಯನದಂತೆ secular, religious, cultural ಇತ್ಯಾದಿ ವಿಭಾಗಗಳನ್ನು ಕಲ್ಪಿಸಿ ಜೀವನದ ಮೇಲೆ ಆರೋಪಿಸುವ ಕ್ರಮ ನಮ್ಮ ಪರಂಪರೆಯಲ್ಲಿ ಇಲ್ಲ. ನಮ್ಮ ಪರಂಪರೆಯೊಂದಿಗೆ ಗುರುತಿಸಿಕೊಂಡಾಗ ಈ ವ್ಯತ್ಯಾಸಗಳನ್ನು ಗಮನಿಸಿ ಅಸಂಬದ್ಧ ಅರ್ಥಗಳನ್ನು ನಿಗ್ರಹಿಸಬಹುದು.

**ಹವಿಕ ವಾ ಹವ್ಯಕ ವಾ?**

ನಾವು ಹವಿಕರೋ ಅಥವಾ ಹವ್ಯಕರೋ ಎಂಬ ತೀರ್ಮಾನ ಇನ್ನು ಆಗಿಲ್ಲ. ಮೂಲ ಸಹ್ಯಾದ್ರಿ ಖಂಡದಲ್ಲಿಯಾಗಲಿ ಅಥವಾ ಬ್ರಾಹ್ಮಣರ ಉತ್ಪತ್ತಿಯ ಬಗ್ಗೆ ಇರುವ ಬ್ರಾಹ್ಮಣೋತ್ಪತ್ತಿ ಮಾರ್ತಾಂಡದಲ್ಲಿಯಾಗಲಿ ಹವ್ಯಕ ಎಂದಿಲ್ಲ. ಗೆಜೆಟ್ ಗಳಲ್ಲಿ ಹೈಗ, ಹವಿಕ ಎಂದೇ ಇದೆ. ಅಹಿಚ್ಛತ್ರದವರು ಅಹಿಕ ಎಂಬ ಅರ್ಥದಲ್ಲಿ, ಬ್ರಾಹ್ಮಣೋತ್ಪತ್ತಿ ಮಾರ್ತಾಂಡದಲ್ಲಿ ಅಹಿಚ್ಛತ್ರ ಬ್ರಾಹ್ಮಣಾಃ ಎಂದೇ ಇದೆ ಎಂದೂ ನಾವು ಹವಿಕ ಎಂಬುದೇ ಸರಿ

ಎಂದೂ ಘನವಿದ್ವಾಂಸರಾದ ಸೇಡಿಯಾಪು ಕೃಷ್ಣ ಭಟ್ಟರೇ ತಮ್ಮ ಸುಗುಣಮಾಲಾ ಪತ್ರಿಕೆಯ ಲೇಖನದಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ [4]. ಬ್ರಾಹ್ಮಣೋತ್ಪತ್ತಿ ಮಾರ್ತಾಂಡ ಸುಮಾರು ೩೦೦-೪೦೦ ವರ್ಷ ಹಳತು, ಅದನ್ನು ಓದಿ ಅರ್ಥ ಮಾಡಿಕೊಂಡವರು ನಮಗೆ ಗೊತ್ತಿದ್ದವರು ಮೂವರೇ (ಕುಕ್ಕಿಲ ಕೃಷ್ಣ ಭಟ್ಟರು ಒಬ್ಬರು) ಅವರು ಎಲ್ಲರೂ ತಮಗೆ ಹೇಳಿದ್ದಾಗಿ ಸೇಡಿಯಾಪು ಕೃಷ್ಣ ಭಟ್ಟರು ಆ ಲೇಖನದಲ್ಲಿ ಬರೆದಿದ್ದಾರೆ. ಅಹಿಚ್ಛತ್ರ ಇದ್ದಿದ್ದು ಅಹಿಕ ಹವಿಕ ಆಗುವುದಾದರೆ ಹವಿಕ ಇದ್ದಿದ್ದು ಹವ್ಯಕ ಯಾಕಾಗಬಾರದು ಎಂಬ ಪ್ರಶ್ನೆಗೆ, ಆಗುವುದು ಬೇರೆ, ಮಾಡುವುದು ಬೇರೆ ಎನ್ನುವುದೇ ಉತ್ತರ! ಡಾ ಪ್ರಭಾಕರ ಜೋಶಿಯವರು ಈ ವಿಷಯ ತಿಳಿಸಿ ಆಧಾರಕ್ಕಾಗಿ ಸೇಡಿಯಾಪು ಅವರ ಈ ಲೇಖನದ ಪ್ರತಿಯನ್ನು ಉಡುಪಿಯ RRC ನಿರ್ದೇಶಕರಾದ ಅಶೋಕ ಆಳ್ವರ ಮೂಲಕ ಈ ಲೇಖನದ ಅನುಕೂಲಕ್ಕೆ ಕಳಿಸಿದ್ದಾರೆ. ಅವರೆಲ್ಲರಿಗೂ ಧನ್ಯವಾದಗಳು. ನಡಹಳ್ಳಿಯ ವೆಂಕಟೇಶ ಶರ್ಮಾ ಅವರು ಕನ್ನಡದ ಟೀಕೆ ಬರೆದ ಉತ್ತರ ಸಹ್ಯಾದ್ರಿಖಂಡದಲ್ಲಿ ಮಾತ್ರ ಘಟ್ಟದ ಕೆಳಗಿನವರಿಗೆ ಹವ್ಯಕ ಎಂದಿದೆ, ಬೇರೆಲ್ಲೂ ಇಲ್ಲ (೪೬-ಅ ೩೩- ಪ್ರತಿ ಅಂತರ್ಜಾಲದಲ್ಲಿ ಲಭ್ಯ [3]). ಕಾವ್ಯಕಂಠ ಗಣಪತಿ ಶಾಸ್ತ್ರಿಗಳು ಮೊಟ್ಟಮೊದಲು ಹವಿಕ ಶಬ್ಧವನ್ನು ಹವ್ಯಕ ಎಂದು ಬದಲಿಸಿದರು ಎಂದು ಸುಗುಣಮಾಲಾ ಪತ್ರಿಕೆಯಲ್ಲಿ ಗೌರೀಶ ಕಾಯ್ಕಿಣಿಯವರು ಮಾಹಿತಿ ನೀಡಿದ್ದನ್ನು ಸೇಡಿಯಾಪು ಅವರು ಆಕ್ಷೇಪಿಸಲಿಲ್ಲ. ಅಷ್ಟೇ ಅಲ್ಲ ಕೃತಜ್ಞತೆ ಹೇಳಿದ್ದಾರೆ. ನಡಹಳ್ಳಿಯ ಮಹಾಮಹೋಪಾಧ್ಯಾಯ ರಂಗನಾಥ ಶರ್ಮರಿಗೆ ಚಿರಪರಿಚಿತರಾಗಿದ್ದ ಸೇಡಿಯಾಪು ಅವರಿಗೆ ಉತ್ತರ ಸಹ್ಯಾದ್ರಿಖಂಡ ಗ್ರಂಥ ತಿಳಿದಿರಲಿಲ್ಲ ಎಂದು ನಂಬುವುದು ಕಷ್ಟ (ನಡಹಳ್ಳಿಯವರೇ ಉತ್ತರ ಸಹ್ಯಾದ್ರಿಖಂಡದ ಅನುವಾದ ಮಾಡಿದವರು) [3]. ಉತ್ತರ ಸಹ್ಯಾದ್ರಿಖಂಡ ಮೂಲ ಸಹ್ಯಾದ್ರಿ ಖಂಡಕ್ಕೆ ನಂತರದ ಸೇರ್ಪಡೆಯೂ ಹೌದು. ಅದೂ ಅಲ್ಲದೆ ಎಲ್ಲ ಬ್ರಾಹ್ಮಣ ಪಂಗಡದವರೂ ಹವ್ಯ-ಕವ್ಯ ಮಾಡುವಾಗ ನಾವು ಮಾತ್ರ ಹವ್ಯಕರಾಗುವುದು ಹೇಗೆ? ಮೊಟ್ಟಮೊದಲು ಹವಿಕ ಶಬ್ಧವನ್ನು ಹವ್ಯಕ ಎಂದು ಬದಲಿಸಿದರು ಎನ್ನಲಾದ ಕಾವ್ಯಕಂಠ ಗಣಪತಿ ಶಾಸ್ತ್ರಿಗಳು ಗೋಕರ್ಣದಲ್ಲಿ ಬಂದು ನೆಲೆಸಿದ್ದ ಆಂಧ್ರ ಮೂಲದ ಕಾವ್ಯಕಂಠ ವಾಸಿಷ್ಠ ಗಣಪತಿ ಮುನಿಗಳೇ ಆಗಿರಬಹುದು. ಅವರು ಉಮಾಸಹಸ್ರಮ್ ಎಂಬ ಮಹಾಗ್ರಂಥವನ್ನು ಬರೆದವರು - ಗೋಕರ್ಣದ ಮಹರ್ಷಿ ದೈವರಾತರು ಇವರ ಶಿಷ್ಯರು. ಇಲ್ಲಿ ಮಹರ್ಷಿ ದೈವರಾತರು (ಗೋಕರ್ಣದ ಗಣೇಶ ಭಟ್ಟರು) ಮಹರ್ಷಿ ಮಹೇಶಯೋಗಿಯವರೊಡನೆ ಪ್ರವಚನ ನೀಡಲು ಅಮೆರಿಕಾಕ್ಕೆ ಬಂದಿದ್ದರು ಎಂದು ನೆನೆಯಬಹುದು. ಅದು ವಿಚಾರ ಬೇರೆ.

**ಹೆಗಡೆ ವಾ ಪ್ರಭು ?**

ಗ್ರಾಮದ ಒಡೆಯರು ಹೆಗಡೆ ಎಂದು ಉತ್ತರ ಸಹ್ಯಾದ್ರಿಖಂಡದಲ್ಲಿ ಇದೆ ಎಂಬುದೂ ನಿಜವಲ್ಲ. **ಗ್ರಾಮದ ಒಡೆಯ ಪ್ರಭು ಎಂದು ಇದೆಯೇ** ಹೊರತು ಹೆಗಡೆ ಎಂದಿಲ್ಲ. **ಗ್ರಾಮಾಣಾಮಧಿಪತ್ಯಂಚ ಕುರ್ವನ್ ಪ್ರಭುರಿತೀತ: ||೧೭||** ೩೩ನೇ ಅಧ್ಯಾಯ - ಉತ್ತರ ಸಹ್ಯಾದ್ರಿಖಂಡ. ಹೆಗಡೆ ಪದವನ್ನು ಇಲ್ಲಿ ಬಳಸಿಲ್ಲ. ಪ್ರಭು ಎಂಬ ಪ್ರತ್ಯೇಕ ಹವಿಕರ ಅಡ್ಡಹೆಸರು ಉತ್ತರ ಸಹ್ಯಾದ್ರಿಖಂಡದಲ್ಲಿ ಇರುವಾಗ ಪ್ರಭು ಎಂದರೆ ಹೆಗಡೆ ಎಂದು ಹೇಗಾಗುತ್ತದೆ? ಹೇರ್ಗಡೆ ಎಂಬುದು ಕೊಂಕಣ ಬ್ರಾಹ್ಮಣರ ಒಂದು ಪಂಗಡವೆಂದೂ ಅವರು ಮೊದಲು ಬ್ರಾಹ್ಮಣರಲ್ಲ ಎಂದೂ ಇದೆ **(ಕಮುತೀ ನಾಯಕ: ಕೇಣಿ ಪರ್ಬುಹೇರ್ಗಡೆಬಾಳಿಗೆ ||೩೨||** ಅ -೨೬). ಅದೇನೇ ಇದ್ದರೂ ಒಬ್ಬರು ಇನ್ನೊಬ್ಬರ ಒಡೆಯ,ಪ್ರಭು ಎನ್ನುವ feudalism ನಮ್ಮ ಪರಂಪರೆಗೆ ಹೇಳಿಸಿದ್ದಲ್ಲ. ವಿದ್ವಾಂಸರೇ ನಮಗೆ ಹೆಚ್ಚಿನವರು (ಖುಷಿ ಋಣ). ಒಟ್ಟಾರೆ ಹೇಳುವುದಾದರೆ ಉತ್ತರ ಸಹ್ಯಾದ್ರಿಖಂಡದಲ್ಲಿ ಇರುವುದು ಹಿಂದೆಲ್ಲೂ ಇಲ್ಲದ್ದರಿಂದ ಹವ್ಯಕ ಎನ್ನುವುದು ಸಂಸ್ಕೃತೀಕರಣ, ಆಮೇಲೆ ಬಳಕೆಗೆ ತಂದಿದ್ದು ಇರಬಹುದು. ಸರಿಯಾಗಿ ಸಿದ್ಧವಾಗುವವರೆಗೂ ಹವಿಕ ಎಂಬುದೇ ನಮ್ಮ ಸಮುದಾಯದ ಹೆಸರು ಅಹಿಚ್ಛತ್ರ ಬ್ರಾಹ್ಮಣಾಃ ಎಂಬ ಅರ್ಥದಲ್ಲಿ ಎಂದು ಪರಿಗಣಿಸಬೇಕು ಎನ್ನುವುದು ನನ್ನ ಅಭಿಪ್ರಾಯ. ಅದಕ್ಕೆ ವಿದ್ವಾಂಸರ ಅಭಿಪ್ರಾಯ ಮತ್ತು ತೀರ್ಮಾನಗಳ ಬೆಂಬಲ ಇದೆ.

**ಇತರ ಪ್ರದೇಶಗಳಿಗೆ ಹವಿಕರ ವಿಸ್ತರಣ**

ವಿಜಯನಗರದ ಪಥನವಾದ ಬಳಿಕ ಉತ್ತರ ಭಾಗದಲ್ಲಿದ್ದ ಹವಿಕರು ಬೇರೆಡೆಗೆ ಹೋದ ಸಾಧ್ಯತೆ ಇದೆ. ಅಂದರೆ ೧೬-೧೭ ನೇ ಶತಮಾನ. ಇದು ದಕ್ಷಿಣ ಕನ್ನಡಕ್ಕೆ ಹವಿಕರು ಹೋದರು ಎನ್ನುವ ಸಮಯಕ್ಕೆ ಹೋಲುತ್ತದೆ. ತಾಳಗುಂದದ ಹತ್ತಿರ ಅಂದರೆ ಶಿಕಾರಿಪುರ ಆನವಟ್ಟಿ, ಜಡೆಗೆ ಹತ್ತಿರ ಹಿಂದೆ ಹವಿಕರಿದ್ದರು ಎಂದಿದೆ. ಈಗ ಬಯಲು ಸೀಮೆಯಾಗಿರುವ ಇಲ್ಲಿ ಹೆಚ್ಚಿನವರು ಇಲ್ಲ. ಆದರೆ ಕದಂಬರ ಭವ್ಯವಾದ ಕೈಟಭೇಶ್ವರ ದೇವಸ್ಥಾನ ಅನವಟ್ಟಿಯಲ್ಲಿ ಇದೆ (ದೇವಸ್ಥಾನ ಶಾಸನಗಳಿಂದ ತುಂಬಿ ಹೋಗಿದೆ ಅವೇನೆಂದು ಕಂಡುಕೊಳ್ಳಬೇಕು.) (ಬನವಾಸಿಯಲ್ಲಿ ಮಧುಕೇಶ್ವರ). ಅದರಲ್ಲಿ ಒಂದು ಶಾಸನ ಅಹಿಚ್ಛತ್ರ ಬ್ರಾಹ್ಮಣರನ್ನು ಹೊಗಳುತ್ತದೆ ಎಂದೂ ಕೆಳದಿ ಅರಸರು ಕೆಲವು ಹವಿಕರನ್ನು ದ.ಕ ಕ್ಕೆ ಕರೆತಂದರೆಂದು ಹವಿಕರ ಇತಿಹಾಸ ಬಗ್ಗೆ ಪುಸ್ತಕ ಬರೆದ ಶ್ರೀ ಕಲಸಿ ತಿಮ್ಮಪ್ಪನವರು ಉಲ್ಲೇಖಿಸಿದ್ದಾರೆ. ಚಂದ್ರಗುತ್ತಿ ಮತ್ತು ಸೊರಬದ ಮಧ್ಯ ಇರುವ ಜಂಬೇಹಳ್ಳಿಯಿಂದ ದಕ್ಷಿಣಕನ್ನಡಕ್ಕೆ ನೂರಾರು ವರ್ಷಗಳ ಹಿಂದೆ ಹೋದರೆಂದು ಮೂಲ ಹುಡುಕಿ ಬಂದವರಿಗೆ ಊರು ತೋರಿಸಿದ್ದಾಗಿ ನನ್ನ ಅಪ್ಪ

ದೃಢೀಕರಿಸಿದ್ದಾರೆ. ಅಂದರೆ ವಲಸೆ ಹಲವಾರು ಬಾರಿ ಆಗಿರಬಹುದು. ಈ ವಿಷಯ ಏಕೆ ಎಂದರೆ ಭಾಷಾಶಾಸ್ತ್ರದ ಪ್ರಕಾರ ಬೇರೆಯಾದ ಗುಂಪುಗಳಲ್ಲಿ ಮೂಲಭಾಷೆ ಹೆಚ್ಚು ಬದಲಾಗುವುದಿಲ್ಲ ಎಂದಿದೆ ಹಾಗಾಗಿ ನಮ್ಮ ಭಾಷೆಯ ಹಳೆಯ ಸ್ವರೂಪವನ್ನು ಗಮನಿಸಿ ಅದರಿಂದ ಕಲಿಯಲು ಬೇಕಷ್ಟಿದೆ ಎಂಬುದು. ದಕ್ಷಿಣ ಕನ್ನಡದ ಹವಿಕರ ಭಾಷೆ ಅತಿಹಳೆಯ ಶೈಲಿಯಾಗಿ ಕೇಳುವುದೂ ಹೌದು. ನಂತರದ ಹಳೆಯದು ಬಹುಶ್ಯ ಯಲ್ಲಾಪುರದ ಹವಿಕರ ಭಾಷೆ ಇದು ದ.ಕದ ಭಾಷೆಗೆ ಹೆಚ್ಚು ಸಮೀಪ ಇದೆ ಎನ್ನುವುದನ್ನು ನಾನು ಗಮನಿಸಿದ್ದೇನೆ. ಹಳೆಯದು ಅಂದರೆ ಅದರಲ್ಲಿ ಸಂಕೀರ್ಣ ಸಂಧಿ-ಸಮಾಸ ಮಾಡುವ ಕ್ರಮ ಹೊಸ ಶಬ್ಧ ರಚನಾಕ್ರಮ ಇರುತ್ತದೆ ಎಂದರ್ಥ. ಅದನ್ನು ಕಲಿತು ಬೇರೆ ಹವಿಕ ಶೈಲಿಯಲ್ಲಿ ಬಳಸಿದರೆ ಭಾಷೆ ಇನ್ನೂ ಬಲಿಷ್ಠವಾಗುತ್ತದೆ.

ಸಾರಾಂಶ ಇಷ್ಟೇ. ನಮಗೆ ನಮ್ಮದೇ ಆದ ವೈಚಾರಿಕ ಚೌಕಟ್ಟಿದೆ, ಪರಂಪರೆ ಇದೆ, ಜೀವನಕ್ರಮ ಇದೆ. ನಮ್ಮ ಇತಿಹಾಸ ಏನೇ ಇದ್ದರೂ ನಮ್ಮ ಪರಂಪರೆಯಿಂದಾಗಿ ನಾವು ಹವಿಕರು. ನಾವು ಬೇರೆ ಸಮುದಾಯಗಳಿಗಿಂತ ಹೆಚ್ಚಿನವರು ಎನ್ನುವುದಂತೂ ಅಲ್ಲವೇ ಅಲ್ಲ. ಸಮಸ್ಯೆಗಳಿವೆ ಅವನ್ನು ಬಗೆಹರಿಸಲು ನಮ್ಮದೇ ಆದ ಪರಿಕರಗಳಿವೆ. ಬೇರೆ ವ್ಯವಸ್ಥೆಗೆ ಪರಿವರ್ತನೆ ಮಾಡಿಕೊಳ್ಳುವುದು ಬೇಡ ಎಂದು. ಅದರ ಹಿಂದಿರುವ ವಿಷಯಗಳನ್ನು ನಾವು ಅಧ್ಯಯನಮಾಡಿ ನಮ್ಮ ಪರಂಪರೆ ನಾಶವಾಗದಂತೆ ಪ್ರಯತ್ನಿಸಬೇಕು ನಮ್ಮ ದಿನನಿತ್ಯದ ಜೀವನದಲ್ಲಿ ಸಾಧ್ಯವಾದಷ್ಟು ಆಚರಿಸಿ ಉಳಿಸಿಕೊಳ್ಳಬೇಕು ಎನ್ನುವ ಕಳಕಳಿ. ಲೋಕಾಃ ಸಮಸ್ತಾಃ ಸುಖಿನೋ ಭವಂತು.


ಆಕರಗಳು:

1. Oxygen isotope in archaeological bioapatites from India: Implications to climate change and decline of Bronze Age Harappan civilization. http://www.nature.com/articles/srep26555
2. The world economy: The millennial perspective, Angus Madison 2001 and Maddison Project etc http://www.ggdc.net/maddison/Historical_Statistics/horizontal-file_02-2010.xls http://theunbrokenwindow.com/Development/MADDISON%20The%20World%20Economy--A%20Millennial.pdf
3. ಹೊಸಬಾಳೆ ಅನಂತಶರ್ಮರು ಉತ್ತರಸಹ್ಯಾದ್ರಿಖಂಡ ವನ್ನು ಸಂಗ್ರಹಿಸಿ ಸುಮಾರು ೧೯೩೪ ರಲ್ಲಿ ಪ್ರಕಟಿಸಿದರೆಂದೂ ಅದಕ್ಕೆ ನಡಹಳ್ಳಿಯ ವೆಂಕಟೇಶ ಶರ್ಮಾ ಕನ್ನಡದಲ್ಲಿ ಟೀಕೆ ಬರೆದ ಮಾಹಿತಿ ಲಭ್ಯ ಇದೆ. https://upload.wikimedia.org/wikipedia/kn/4/40/UTTARA_SAHYADRI_KHANDA.pdf
4. ಸೇಡಿಯಾಪು ಕೃಷ್ಣ ಭಟ್ಟ ಲೇಖನ: ಸುಗುಣಮಾಲಾ ಪತ್ರಿಕೆ ಪುಟ ೪೮೧, ಡಿಸೇಂಬರ್ ೧೯೫೧. ಡಿಸೇಂಬರ್ ೧೯೫೦ರ ಕಾಯ್ಕಿಣಿಯವರ ಲೇಖನಕ್ಕೆ ಪ್ರತಿಕ್ರಿಯೆಯಾಗಿ." ಅವರ ಲೇಖನದ ಪ್ರತಿಯನ್ನು ಡಾ ಪ್ರಭಾಕರ ಜೋಶಿಯವರು ಉಡುಪಿಯ RRC ನಿರ್ದೇಶಕರಾದ ಅಶೋಕ ಆಳ್ವರ ಮೂಲಕ ಈ ಲೇಖನದ ಅನುಕೂಲಕ್ಕೆ ಕಳಿಸಿದ್ದಾರೆ.


**ಪರಿಶ್ರಮ** :

ಗಾಲ್ಫ್ ಆಟಗಾರ ಟೈಗರ್ ವುಡ್ಸ್‌ನಿಗೆ ಒಮ್ಮೆ ಯಾರೋ ಕೇಳಿದ ರಂತೆ, 'ನಿಮ್ಮ ಯಶಸ್ಸಿನ ಗುಟ್ಟೇನು?'. ಅದಕ್ಕೆ ಆತ ಹೇಳಿದನಂತೆ 'ಕೇವಲ ಮೂರು ಶಬ್ದಗಳು, Practice, Practice & Practice. ಅದನ್ನು ಬಿಟ್ಟು ಬೇರೇನೂ ನನಗೆ ಗೊತ್ತಿಲ್ಲ'. ಹೌದು, ಗಾಲ್ಫ್ ಇರಲಿ, ಕ್ರಿಕೆಟ್ ಇರಲಿ, ಓದು, ಉದ್ಯೋಗ, ಸಂಗೀತ, ನೃತ್ಯ, ಭಕ್ತಿ ಏನೇ ಇರಲಿ ಗೆಲ್ಲಬೇಕೆಂದರೆ ಸತತವಾಗಿ ಪರಿ ಶ್ರಮ ಪಡಬೇಕು. ಸಾಧಕರ ಪಟ್ಟಿಯನ್ನು ನೋಡಿದಾಗ ಕಂಡು ಬರುವ ಹೆಸರುಗಳೆಲ್ಲ ರಾತ್ರಿ ಬೆಳಗಾಗುವುದರೊಳಗೆ ಸಾಧನೆ ಮಾಡಿದವರಲ್ಲ. ಅದೆಷ್ಟೋ ರಾತ್ರಿಗಳನ್ನು ನಿದ್ದೆಯಿಲ್ಲದೆ ಕಳೆದು, ಬೆವರು ಸುರಿಸಿ ದುಡಿದು, ಸವಾಲುಗಳನ್ನು-ಸೋಲುಗಳನ್ನು ಹಿಮ್ಮೆಟ್ಟಿ ಗೆಲವಿನ ನಗೆ ಬೀರಿದವರು. ಒಂದು ಗೆಲವಿಗೆ, ಪದಕಕ್ಕೆ, ದಾಖಲೆಗೆ ತೃಪ್ತರಾಗದೆ ಮತ್ತೊಂದು ಗೆಲವಿಗೆ ಸದಾ ತುಡಿಯುವವರು. ಅಂಥವರು ಮಾತ್ರ ನಿರಂತರವಾಗಿ ಗೆಲ್ಲಲು ಸಾಧ್ಯ. ಪರಿಶ್ರಮ ಪಡದೆ ಏನೆಂದರೆ ಏನೂ ಸಾಧ್ಯವಿಲ್ಲ. ಹಾಗೆಯೇ ಪರಿಶ್ರಮ ಪಡುವವನಿಗೆ ಏನೊಂದೂ ಅಸಾಧ್ಯವಲ್ಲ

# A Response to Some Popular Western Atheists



**Raghavendra Kattinakere,**
**Toronto, Canada**

The second generation Haviks may take note as the work of responding to western intellectuals is, really, in front of them. The prevalent bias in American academia and education system against our traditions and culture is not addressed yet. There is also a danger of north American "intellectuals" co-opting second generation Haviks to fight our own tradition. There are signs of that already with some of our own buying into general propaganda about Indian culture such as on conditions of women, caste, curry, and cow talk or that most of our practices are superstitious.

Even though the atheists here are a bit confused while arguing against our traditions. One of the reasons for that is that what they do not believe is the idea of Christian God! Their whole idea is formed as an opposition to the idea of Christian God. So they first somehow equate our practices and ideas to that of Semitic faiths and then reject them. Many intellectuals from our traditions have already been correcting this error by pointing to our *darshana* traditions such as *sankhya, nyaya, vedanta* etc to show that we are not a faith-based tradition. But, a common claim about our traditions has remained unrefuted. The claim is that many values taught by faith groups and traditions are actually universal values! They argue that values such as telling truth, not stealing or killing etc need not be learnt through "religions" or faith groups. They are just universal values! There is a surprise! **What our tradition found is that these so called universal values are not universal at all but very relative.** This relative value as a whole is called the dharma! Should we tell truth when we know it will cause trouble to good people? Should we allow killing of someone if not doing so causes much more death and violence? These dilemmas are debated and settled in what is called dharma shastra. One that appropriate for an individual is called *swadharma*. This exercise of settling dilemmas is called dharma *jijnasa*. So our traditions emphasize on things that are applicable to all and are not concerned more about dogmas or some faith. We have seen "Havikaru Yaaru" Kannada article examples such as sabha and atithi pooja that our idea of god is more about good than some flying spaghetti monster one could as well call a god or the only god.

Among those variously attacking our traditions three are very popular. They are Richard Dawkins an evolutionary biologist, Sam Harris the author of an article called Killing Buddha, and a psychology professor from Toronto, Jordan Peterson, recently in fame. I will start with Richard Dawkins.

Richard Dawkins seems to be the sincerest in promoting evolutionary biology. Our traditions have no issues with it. We like it. However, as a champion of atheists, Dawkins has produced some damning documentaries on Indian traditions, society, and gods. His understanding of our traditions seems to completely rest on the propaganda of evangelical Christians he so furiously opposes! He blames "polytheism" and caste as a direct consequence of our traditions and that our "theism" is in a way similar to Semitic theism and then rejects them. What is interesting is that for an evolutionary biologist of repute, no standard and rigor of science is necessary while understanding and accusing our traditions! No confirmation is necessary to see if his understanding of our tradition is at least close if not accurate. I can not help but wonder if his standards are the same even for

his science! If not, he needs to retract his claims and make a second attempt with due regard for scientific method even in understanding our traditions. His current understanding of our traditions as seen in his documentaries are simply, either mediocre or completely wrong.

Sam Harris is famous for sort of whitewashing practices in our traditions to make them palatable to "western science" but sans any attribution to our traditions. These practices include japa (TM), dhyana(meditation), and *vipasyana* (mindfulness) (*vipasyana* is part of Havika life style even though it is not explicitly taught to us - not talking/watching while eating and observing food we eat is a form of vipasyana). Among his famous claims is, "The wisdom of Buddha is currently trapped within the religion of Buddhism". He writes in his famous article called Killing Buddha that many ideas and practices should be sanitized and, to use Shri Rajiv Malhotra's word, digested in mainstream western culture and science. Now, this is like saying a tree must be killed because its own fruits are "trapped" in it. Buddhism forms a part of *samkya* school of our traditions and its wisdom could not exist and evolve without that ecosystem. Clearly, western science or western cultural ecosystem is incapable of producing the wisdom of our traditions simply because it has not produced anything like *japa, vipasyana* etc relating to mental well-being, in these many years. The western science as a whole is now grudgingly acknowledging benefits of ancient practices it ridiculed all these years as unscientific! But, without acknowledging founders and practitioners of those same ancient practices. Another Sam's book Waking Up actually makes an infuriating read. In this book his tone about the eastern ideas and Vedanta is condescending to say the least. I do not have a detailed response to all these as yet. In general, saying wisdom of a tradition is trapped in that tradition is absurd. Yet these kinds of arguments fly here in north America because there is no clear countering from our traditions' behalf.

Jordan Peterson's is a more complicated but much more sophisticated case, now viral over the Internet. In a nutshell, for our purposes, he is an apologist for Christian ideas and generally for "western civilization". His attack on our traditions is not direct. In his arguments, there is an underlying assumption that Christian and western ideas are universal. He seems to mention Buddhist ideas but misinterprets them. For example that -- Buddhism agrees with judo Christian idea that life is a suffering. He does not seem to mention vedic ideas. Neither did I see any credits given to Upanishadic ideas his favorite "philosophers" such as Carl Jung or Friedrich Nietzsche were influenced by. There is more research needed on how much of ideas by western "philosophers" are simply a copy or a misunderstanding of vedic darsanas before we can make more claims. More importantly, Jordan Peterson believes in psychoanalysis and has elaborate apologia for it! The psychoanalysis has been used against our traditions at such great length that psychoanalysts have a weird and negative interpretation for most practices in our traditions (details of these can be found in the book called Invading the sacred.) For Peterson, who claims to be a scientist, it is no problem at all that claims made using psychoanalysis are purely speculative and are not verifiable. In short, psychoanalysis is unscientific; its claims can not be verified. Peterson speculates using speculations of others, which is 'not even wrong'. We have to see and be ready to counter as Peterson's ideas become more clear and widespread. But we already have a clue which direction it is headed.

We have to identify more such influential people who criticize our traditions and offer serious counter so that they become conscious and do not resort to propaganda. More importantly, our life and practices are not superficial but are based on ancient India's philosophical traditions and we should not lend credence to anyone who is not well versed in our traditions. For example, to clarify meaning of a samskruta word we should consult traditional scholars who refer to treatises (*bhasya/teekaa*) on *Amarakosha(traditional thesaurus)*, not Monier Williams dictionary; for meaning of words like *karma*, refer traditional scholars on vedanta not someone who did a 2-3 year university degree on it.

# Adventure with My Grandparents



**Mira Halkar, Age 11**

Every year for the past two years, my dad's parents aka my grandparents come here from India. Everything becomes more enjoyable as soon as they come. But, they can't speak English. They can only speak Kannada. I only know how to understand it and not speak it. My grandparents always cook for my family whenever they come. My favorite food my grandmother cooks is mango rasana. By the end of their visit, I get sad that they must leave. But, I know I get to see them again in the next year. I love seeing my mom's parents aka my other grandparents every few months. Both live in separate places. My grandpa lives in Michigan for work reasons. My grandma lives in Boston with my aunt and uncle to help take care of my two-year-old cousin. Every time my mom and I go to Michigan, my grandpa always takes us to our favorite Indian restaurant, India Garden. Every time my mom and I go to Boston, I teach my two-year-old cousin a skill like how to share. Going to see my grandparents is the best thing ever.

***************************************

**ಬದುಕು ಸಮಸ್ಯೆಗಳನ್ನು ಎಸೆದಾಗ**

ಅಗಸನೊಬ್ಬ ಒಂದು ಕತ್ತೆ ಸಾಕಿದ್ದ. ಒಂದು ದಿನ ಕತ್ತೆಯೊಂದಿಗೆ ಊರಿನಿಂದ ಊರಿಗೆ ಹೋಗುತ್ತಿದ್ದಾಗ ಅದು ಅಚಾನಕ್ಕಾಗಿ ಆಳದ ಗುಂಡಿಯೊಂದರೊಳಗೆ ಬಿದ್ದು ಹೋಯಿತು. ಗಾಬರಿಯಾದ ಅಗಸ ತನ್ನ ಕೈಲಾದ ಪ್ರಯತ್ನ ಮಾಡಿ ಕತ್ತೆಯನ್ನು ಮೇಲೆತ್ತಲು ನೋಡಿದ. ಆದರೆ ಅವನಿಂದ ಅದು ಸಾಧ್ಯವಾಗಲಿಲ್ಲ. ಹಸಿವಿಲ್ಲದೆ ಗುಂಡಿಯೊಳಗೆ ಸಾಯುವುದಕ್ಕಿಂದ ಅದನ್ನು ಅಲ್ಲಿಯೇ ಮಣ್ಣು ಮಾಡಿ ಬಿಡೋಣ ಎಂದು ಅಗಸ ಯೋಚಿಸಿದ. ಬುಟ್ಟಿಯಲ್ಲಿ ಮಣ್ಣು ತುಂಬಿ ಗುಂಡಿಗೆ ಎಸೆಯತೊಡಗಿದ. ಒಳಗಿದ್ದ ಕತ್ತೆಯ ಮೈಮೇಲೆಲ್ಲಾ ಮಣ್ಣು ಬಿತ್ತು. ಅದು ಮೈ ಕೊಡವಿ ಎದ್ದು ನಿಂತಿತು. ಹಾಗೆಯೇ ಮೇಲಿನಿಂದ ಮಣ್ಣು ಬಿದ್ದಾಗಲೆಲ್ಲಾ ಮೈ ಕೊಡವಿ, ಮಣ್ಣನ್ನು ಕೆಳಕ್ಕೆ ಸರಿಸಿ ಹಂತ ಹಂತವಾಗಿ ಮೇಲೆ ಬರತೊಡಗಿತು. ಹೆಚ್ಚೆಚ್ಚು ಮಣ್ಣು ಬಿದ್ದಂತೆಯೂ ಅದು ಹೆಚ್ಚೆಚ್ಚು ಮೇಲೆ ಬಂತು. ಸಂಜೆಯಾಗುವುದರೊಳಗೆ ಅದು ಗುಂಡಿಯಿಂದ ಹೊರ ಜಿಗಿಯಿತು.

ಬದುಕು ನಿಮ್ಮ ತಲೆಯ ಮೇಲೆ ಸಮಸ್ಯೆಗಳನ್ನು ಎಸೆದಾಗ ಕುಸಿದು ಹೋಗುತ್ತೀರಾ? ಅಥವಾ ಮೈ ಕೊಡವಿ ಎದ್ದು ನಿಲ್ಲುತ್ತೀರಾ?

# ಸಲಹೆಯ ಕರಾಮತ್ತು



ಲತಾ ಹೆಗಡೆ

ಕಡಲ ತೀರವದು. ಪ್ರಕೃತಿ ಸೌಂದರ್ಯದ ಜೊತೆಗೆ ಬಿಕಿನೀಧಾರಿ ಮಾನವಾಕೃತಿಗಳ ಬಿನ್ನಾಣವನ್ನೂ ಕಳ್ಳ ನೋಟದಿಂದ ಕಣ್ಣು ತುಂಬಿಸಿಕೊಳ್ಳುತ್ತಾ ಉಸುಕಿನ ರಾಶಿಯಲ್ಲಿ ಮಜವಾಗಿ ಆಸೀನನಾಗಿದ್ದೆ. ದೂರದಲ್ಲಿದ್ದ ಆ ಗುಂಪಿನಿಂದ ಬಿಡಿಸಿಕೊಂಡು ಹೊರಬಂದ ಮದನಾಂಗಿಯೊಬ್ಬಳು ನನ್ನೆಡೆಗೇ ಬರತೊಡಗಿದಾಗ ಅದೇನೋ ಪುಳಕ... ಕಣ್ಣುಜ್ಜಿಕೊಂಡು ಬರುತ್ತಿದ್ದವಳನ್ನು ಸರಿಯಾಗಿ ಗಮನಿಸಿದೆ. ಮಾದಕ ನಡುಗೆಯಲ್ಲಿ ನನ್ನನ್ನೇ ತಿನ್ನುವಂತೆ ನೋಡುತ್ತಾ ಸಮೀಪಿಸುತ್ತಿರುವ ಆ ಬಿಕಿನೀಧಾರಿ ಮತ್ಯಾರೂ ಅಲ್ಲ ' ಮಲ್ಲಿಕಾ ಶರಾವತ್ ! '

ವಿದ್ಯುತ್ ಸಂಚಾರ ಮೈಯಲ್ಲಿ... ಗುಂಡಿಗೆ ಯದ್ವಾತದ್ವಾ ಬಡಿದುಕೊಳ್ಳತೊಡಗಿತು. ಸುತ್ತಲೂ ಇರುವ ಸಿಕ್ಸ್ ಪ್ಯಾಕ್ ಸುಂದರಾಂಗರನ್ನು ಬಿಟ್ಟು ನರಪೇತಲ ನಾರಾಯಣನಂತಿರುವ ನನ್ನ ಹತ್ತಿರ ಬರುತ್ತಿದ್ದಾಳೆಂದರೆ ನನ್ನಲ್ಲೇನೋ ವಿಶೇಷತೆ ಇರಲೇಬೇಕು... ಆಕೆಯ ನಳಿದೋಳಿನ ಬಿಸಿಯಪ್ಪುಗೆಯಲ್ಲಿ ಕರಗಿಹೋಗುವ ಮಧುರಕ್ಷಣದ ಕ್ಷಣಗಣನೆಯ ಮಧುರ ಭಾವದಲ್ಲಿದ್ದಾಗ

" ರೀ..., ಏಳ್ರೀ... ಏನೂಂದ್ರೆ ಏಳ್ತೀರೋ ಇಲ್ವೋ...?... ಏಳೀಪ್ಪಾ... "

ಕರ್ಕಶದನಿಗೆ ಬಡಿದೆಬ್ಬಿಸಿದಂತಾಗಿ ಬೆಚ್ಚಿ ಫಕ್ಕನೆ ಕಣ್ಣು ಬಿಟ್ಟಾಗ ಕಂಡದ್ದು ಪಂಡರಾಪುರದ ವಿಠೋಬನ ಶೈಲಿಯಲ್ಲಿ ಸೊಂಟದ ಮೇಲೆ ಕೈ ಇಟ್ಟುಕೊಂಡು ನಿಂತ ಮೊದ್ದು ಅಲ್ಲಲ್ಲ ಮುದ್ದು ಮಡದಿಯ ಬೆಟ್ಟದಂತಹ ಆಕಾರ ! ಥೇಟ್ ಖಳನಾಯಕಿಯಂತೆ ಕಂಡಿದ್ದಳು. ಬಳ್ಳಿಯಂತೆ ಬಳುಕುವ ನಡುವಿನ ಮಲ್ಲಿಕಾ ಶರಾವತ್ ನ ಗುಂಗಿನಲ್ಲಿದ್ದ ನನಗೆ ಸುಂದರ ಕನಸನ್ನು ಭಗ್ನಗೊಳಿಸಿದ ಗುಜ್ಜಾನೆ ಮರಿಯಂತಿದ್ದ ಸುಂದ್ರುವಿನ ಮೇಲೆ ಕೆಟ್ಟ ಕೋಪ ಸಹಜವಾಗಿಯೇ ಉದ್ಭವಿಸಿತ್ತು. ಸಾಲದ್ದಕ್ಕೆ ತಲೆಸ್ನಾನ ಮಾಡಿ ಒದ್ದೆ ತಲೆಗೆ ಹಳದಿ ಬಣ್ಣದ ಟವಲ್ ಬಿಗಿದು ಹಿಂದೆ ಸುತ್ತಿದ್ದರಿಂದ ದೊಡ್ಡ ಕುಂಬಳಕಾಯಿಯ ಮೇಲೆ ಸಣ್ಣ ಮೋಸಂಬಿಯಿಟ್ಟಂತೆ ಕಂಡ ಆ ವಿಚಿತ್ರ ಆಕಾರಕ್ಕೆ ಪರಮಾನಂದದ ಅನುಭವ ! ತಡೆಯಲಾರದೇ ಕಿಸಕ್ಕೆಂದೆ.

ಅವಳೇನೆಂದುಕೊಂಡಳೋ... ಇದ್ದಕ್ಕಿದ್ದಂತೆ ಎದ್ದೋಡಿ ರಾಗದಲ್ಲಿ " ಹ್ಯಾಪಿ ಬರ್ತ್ ಡೇ ಟೂ ಯೂ... " ನುಲಿಯುತ್ತಾ ಹಾಡತೊಡಗಿದಳು.

ಬರೋಬ್ಬರಿ ಐವತ್ತು ಇಂಚಿನ ಸೊಂಟವನ್ನು ಬಳುಕಿಸುವ ವ್ಯರ್ಥ ಪ್ರಯತ್ನ ಮಾಡುತ್ತಾ ಎಂಭತ್ತರ ದಶಕದ ಮಧ್ಯಮವರ್ಗದ ಹೀರೋಯಿನ್ ಗಳ ರೀತಿಯಲ್ಲಿ ಪತಿದೇವರ ಮೇಲೆ ಬಾಗಿ ಶುಭಾಶಯ ಕೋರುವ ರೊಮ್ಯಾಂಟಿಕ್ ಮೂಡಿನಲ್ಲಿದ್ದಳು ಭಾರ್ಯಾಮಣಿ. ಆ ಮೂಡಿನಲ್ಲಿದ್ದಾಗ ಮುಂದೆ ಅವಳೇನು ಮಾಡುತ್ತಾಳೆಂಬ ಅರಿವು, ಅನುಭವ ಎರಡೂ ಇದ್ದ ನಾನು ಆಕೆ ಮೈ ಮೇಲೆ ಬೀಳುವುದೂ ಬೇಡ, ನನ್ನ ಕೃಶಕಾಯ ನರಳುವುದೂ ಬೇಡ ಒಟ್ಟಿನಲ್ಲಿ ಹುಟ್ಟುಹಬ್ಬದ ದಿನದಂದು ಅಪಥ್ಯ ಸೀನೇ ಬೇಡ ಎಂದುಕೊಂಡು ಸಮಯಕ್ಕೆ ಸರಿಯಾಗಿ ಉರುಳುರುಳಿ ಚಂಗನೆದ್ದು ನುಣುಚಿಕೊಂಡು ಬಿಟ್ಟೆ. ' ಧೊಪ್ಪ್! ' ಮಾಂಸದ ಮುದ್ದೆಯಂತೆ ಕುಪ್ಪೆಯಾಗಿ ಬಿದ್ದರೂ ನನ್ನಾಕೆ ಬೇಸರಿಸದೇ ಸೊಂಟ ನೀವುತ್ತಾ ಎದ್ದು ನನ್ನ ಕುತ್ತಿಗೆಯನ್ನು ಬಲಿತ ಹೆಬ್ಬಾವಿನಂತಹ ತೋಳುಗಳಿಂದ ಅಕ್ಷರಶ: ಬಂಧಿಸಿ

" ಏನೂಂದ್ರೆ..., ಇವತ್ತು ನಿಮ್ಮ ಜನ್ಮದಿನಕ್ಕೆ ಸರ್ಪ್ರೈಜ್ ಕಣ್ರೀ... ಹೊಸರುಚಿ ಮಾಡಿದ್ದೀನಿ. ಮುಖ ತೊಳ್ದ್ ಬೇಗನೆ ಬನ್ನಿ. ಮಕ್ಕಳು ಕಾಯುತ್ತಿದ್ದಾರೆ. ಮೊದಲು ನಿಮಗ್ ಕೊಟ್ಟೇ ನಂತರದಲ್ಲಿ ನಾವೆಲ್ಲಾ ತಿನ್ನೋದು... " ಎಂದಳು.

ಮಲ್ಲಿಕಾ ಶರಾವತ್ ನ ಗುಂಗು, ಜನ್ಮದಿನದ ಸಂಭ್ರಮದಲ್ಲಿದ್ದ ನನಗೆ ಆಕಾಶವೇ ನೇರ ತಲೆಯ ಮೇಲೆಯೇ ಬಿದ್ದಂತಾಯಿತು. ಈ ಸಲದ ಪ್ರಯೋಗ ಹೇಗಿರುತ್ತದೋ ಏನೋ... ತಿನ್ನಲು ಭಯ ;

ತಿನ್ನದಿದ್ದರೆ ಉಳಿಗಾಲವಿಲ್ಲ. ಅಡಕತ್ತರಿಯಲ್ಲಿ ಸಿಲುಕಿದ ಅಡಕೆಯಂತಾದ ನನ್ನನ್ನು ಆ ದೇವನೇ ಕಾಪಾಡಬೇಕು… " ಕಾಯೋ ತಂದೆಯೇ, ದೇವಾ ಕರುಣಿಸು… ಪೊರೆಯೋ ಬಂಧುವೇ… " ಆಪತ್ಕಾಲದಲ್ಲಿದ್ದಾಗಲೆಲ್ಲಾ ಈ ಹಾಡು ಹೃದಯಾಂತರಾಳದಿಂದ ತಾನೇತಾನಾಗಿ ಚಿಮ್ಮುತ್ತಿತ್ತು.

ಆರ್ತನಾಗಿ ಬೇಡಿಕೊಳ್ಳುತ್ತ ಸಹಧರ್ಮಿಣಿಯ ಹೊಸರುಚಿಗೆ ಬಲಿಪಶುವಾಗಲು ವಧಾಸ್ಥಾನದಲ್ಲಿದ್ದ ಕುರಿಯಂತೆ ತಲೆತಗ್ಗಿಸಿ ಮೈ ಹಿಡಿಯಾಗಿಸಿಕೊಂಡು ಭಂಡಧೈರ್ಯದಿಂದ ತಟ್ಟೆಯ ಮುಂದೆ ವಿರಾಜಮಾನನಾದದ್ದೇ ತಡ ಮಾಸಲು ಬಣ್ಣದ ಮುದ್ದೆಯಂತಿದ್ದದ್ದು ಧೊಪ್ಪನೆ ತಟ್ಟೆಯಲ್ಲಿ ಬಿದ್ದು ಕಾಂಕ್ರೀಟ್ ನಂತೆ ತಟ್ಟೆಯನ್ನು ಬಿಗಿಯಾಗಿ ಅವುಚಿಹಿಡಿಯಿತು ! ಲಕ್ಷಣವಾಗಿ ವಿಲಕ್ಷಣ ವಾಸನೆ ಮನೆಯೆಲ್ಲಾ ಹರಡಿತ್ತು. ನನ್ನೆರಡು ಸುಪುತ್ರರು ಸ್ವಲ್ಪ ಹೊತ್ತಿನ ಮುಂಚೆ ಮುಖ ತೊಳೆಯಲೂ ಬಿಡದೇ ಅವಸರದಲ್ಲಿ ವಿಶ್ ಮಾಡಿ ' ಹೊರಗೆ ಫ್ರೆಂಡ್ಸ್ ಜೊತೆ ಪಾರ್ಟಿ ಮಾಡ್ತೀವಿ, ನೀನ್ ಉಂಟು ಅಮ್ಮ ಉಂಟು ' ಅಂತ ನನ್ನ ಪರ್ಸಿನಿಂದ ಹಣ ಎಗರಿಸಿ ಅಂತರ್ಧಾನರಾದದ್ದು ಇದೀಗ ಸಕಾರಣವೆನ್ನಿಸಿತ್ತು. ಕಿಲಾಡಿಗಳು ! ನನಗೆಲ್ಲಿದೆ ಆ ಭಾಗ್ಯ ?

ತಟ್ಟೇಲಿ ಹಾಕಿದ್ದರ ನೋಟಮಾತ್ರದಿಂದಲೇ ಹೊಟ್ಟೆ ಕಿವುಚಿದಂತಾಗಿತ್ತು. ' ಕಾಪಾಡಪ್ಪ ತಂದೆ… ' ಪ್ರಾರ್ಥಿಸುತ್ತಾ ಬಾಯಿಗೆ ಹಾಕಿಕೊಂಡೆ ಅಷ್ಟೇ. ಹೊಟ್ಟೇಲಿ ಕಿವುಚಿದ್ದು ರಭಸವಾಗಿ ಬಾಯಿಗೆ ಬಂದಿತ್ತು. ಬಾಯಿಯನ್ನು ಅಮುಕಿ ಹಿಡಿದು ಬೀಳುತ್ತಿದ್ದ ಲುಂಗಿಯನ್ನೂ ಲೆಕ್ಕಿಸದೇ ಶರವೇಗದಲ್ಲಿ ಓಡಿದೆ ಬಚ್ಚಲು ಮನೆಗೆ.

" ಲೇ ಸುಂದ್ರೂ, ಹೊಟ್ಟೆ ಯಾಕೋ ಮುಷ್ಕರ ಹೂಡಿದೆ ಅನ್ಸುತ್ತೆ ಕಣೆ. ಅಮ್ಮ ಯಾವತ್ತೂ ಅಂತಿದ್ಲು ' ಲಂಘಣಂ ಪರಮೌಷಧಿ : ' ಅಂತ. ಹಂಗಾಗಿ ಇವೊತ್ತಿಡೀ ಉಪವಾಸ ಮಾಡ್ ಬಿಡ್ತೀನಿ, ನಾಳೆ ಅನ್ನೋಷ್ಟ್ರಲ್ಲಿ ಸರಿ ಹೋಗುತ್ತೆ. ಸಾರೀ ಚಿನ್ನ, ನೀ ಅಷ್ಟೆಲ್ಲ ಪ್ರೀತಿಯಿಂದ ಮಾಡಿದ್ದು ತಿನ್ನೋಕೇ ಆಗ್ಲಿಲ್ವಲ್ಲೇ… ಅದ್ಸರೀ, ಅದೇನೇ ಅದು ನನ್ನ ಹುಟ್ಟುಹಬ್ಬದ್ ಸಲುವಾಗಿ ನೀ ತಯಾರ್ಸಿದ್ದು ? ಕೇಳಿದ್ರೆ ತಿಂದಷ್ಟೇ ಆನಂದವಾಗುತ್ತೆ… " ಕಣ್ಣನ್ನು ಪಿಳುಕಿಸುತ್ತಾ ಮಳ್ಳನಂತೆ ಪ್ರಶ್ನಿಸಿದೆ.

" ಏನ್ರೀ ನೀವು, ಮೊದ್ಲೇ ಹೇಳ್ಬಾರ್ದಾ ಹೊಟ್ಟೆ ಸರೀಗಿಲ್ಲ ಅಂತ? ಅದೆಷ್ಟು ಕಷ್ಟ ಪಟ್ಟು ' ಎಮ್ ಬಿ ಈ ' ಹಲ್ವಾ ತಯಾರಿಸಿದ್ದೆ ಗೊತ್ತ ? "

" ಅಲ್ವೇ ಸುಂದ್ರು, ಎಮ್ ಬಿ ಎ ಕೋರ್ಸು ಗೊತ್ತು… ಅದೇನೇ ಅದು ಎಮ್ ಬಿ ಈ ಹಲ್ವಾ? ಸ್ವಲ್ಪ ಬಿಡಿಸಿ ಹೇಳ್ಬಾರ್ದೇ ? "

ಹೇಗಿದ್ರೂ ಉಪವಾಸ ಘೋಷಿಸಿದ್ದೆನಲ್ಲ ಸಾವಿರ ಆನೆ ಬಲ ಬಂದಿತ್ತು. ಒಳಗೊಳಗೇ ಸಂತಸಪಡುತ್ತಾ ತೋರಿಕೆಯ ಕುತೂಹಲ ಪ್ರದರ್ಶಿಸಿದ್ದೆ.

" ಅದೇರೀ…, ಎಮ್ ಅಂದ್ರೆ ಮೂಲಂಗಿ, ಬಿ ಅಂದ್ರೆ ಬದನೇಕಾಯಿ, ಈ ಅಂದ್ರೆ ಈರುಳ್ಳಿ. ಈ ಹಲ್ವಾ ನಾನೇ ಕಂಡುಹಿಡಿದದ್ದು ನಿಮ್ಮ ಸಲುವಾಗಿ… " ತನ್ನ ಸಂಶೋಧನೆಗೆ ತಾನೇ ಹೆಮ್ಮೆ ಪಡುತ್ತಾ ವಿವರಿಸುತ್ತಿದ್ದಳು. ಈ ಕಾಂಬಿನೇಶನ್ ನಲ್ಲೂ ಹಲ್ವಾ ತಯಾರಿಸೋಕೆ ಸಾಧ್ಯವೇ ? ಸಾಧ್ಯವಾಗಿಸಿದ್ದಾಳಲ್ಲ ನನ್ನ ಸೋಕಾಲ್ಡ್ ಅರ್ಧಾಂಗಿ ! ಅವಳ ದಿವ್ಯ ಪ್ರತಿಭೆಗೆ ಬೆಚ್ಚಿ ಮೂಕನಾಗಿಬಿಟ್ಟೆ.

" ಹೋಗ್ಲಿ ಬಿಡಿ, ಹೊಟ್ಟೆ ಸರೀಗಿಲ್ಲ ಅಂತೀರಿ… ಹುಲ್ಲಿನ ಕಷಾಯ ಮಾಡಿ ಕೊಡ್ತೀನಿ, ಎಲ್ಲ ಸರಿಹೋಗುತ್ತೆ… " ಏದುಸಿರು ಬಿಡುತ್ತಲೇ ಹಿತ್ತಲಿಗೆ ಹೊರಟವಳನ್ನು ತಡೆದು " ನೀನು ಅದೇನೇನೋ ಹಾಳುಮೂಳು ಮಾಡಿ ತಿನ್ನೋದ್ರಿಂದ್ಲೇ ಹೀಗ್ ಆಗಿರೋದು… " ಸಿಡಾರನೇ ಸಿಡುಕಿ ಸುಂದರ ಕನಸನ್ನು ಭಗ್ನಗೊಳಿಸಿದ್ದರ ಸೇಡು ತೀರಿಸಿಕೊಂಡೆ.

ಥಟ್ಟನೆ ಗರಬಡಿದವಳಂತೆ ನಿಂತವಳು " ಏನಂದ್ರೀ… ಹಾಳುಮೂಳು ಮಾಡಿ ತಿನ್ನಿಸ್ತೀನಾ ನಾನು ? ಪ್ರೀತಿಯಿಂದ ಕಷ್ಟಪಟ್ ಮಾಡಿದ್ದಕ್ಕೆ ತಕ್ಕ ಪ್ರತಿಫಲಾನೇ ಕೊಟ್ರಿ. ನಾ… " ಇನ್ನೂ ಅದೇನೇನ್ ಪ್ರಲಾಪಿಸ್ತಿದ್ಲೋ ಏನೋ ಕಣ್ಣೆಂಬ ತೂಬಿನಿಂದ ಗಂಗೆ ರಭಸವಾಗಿ ಪ್ರವಹಿಸಿ ಕೊರಳ ಸೆರೆ ಉಬ್ಬಿ ಮಾತಾಡಲಾಗದೇ ಬಿಕ್ಕತೊಡಗಿದಳು. ಮದುವೆಯಾಗಿ ತವರುಮನೆಯಿಂದ ಶಾಶ್ವತವಾಗಿ ಹೊರಬರುವಾಗಲೂ ಕೂಡ ಇಷ್ಟು ದು:ಖಿಸಿದ್ದಳೋ ಇಲ್ಲವೋ… ಕನಿಕರದಿಂದ " ಸಾರಿ ಕಣೇ ಸಂಕಟಕ್ಕೆ ಏನೋ ಹೇಳ್ಬಿಟ್ಟೆ. ನೀನೆಂತಹ ಪಾಕ ಪ್ರವೀಣೆ ಅನ್ನೋದು ನಂಗ್ ಚೆನ್ನಾಗ್ಗೊತ್ತು. ನೀನೇಕೆ ಟಿವಿ ಚಾನೆಲ್ನಲ್ಲಿ ನಿನ್ ಅದ್ಭುತ ಕಲೇನ ಪ್ರದರ್ಶಿಸಬಾರ್ದು ? ಬರೀ ನಾಲ್ಕು ಗೋಡೆಗೆ ನಿನ್ ಪ್ರತಿಭೆ ಸೀಮಿತವಾಗಿರ್ಬಾರ್ದು ಕಣೆ… " ಸಲಹೆ ಕೊಡೋಕ್ ಪುರ್ಸೊತ್ತಿಲ್ಲ ಕಣ್ಣೀರಧಾರೆ ಮಂಗಮಾಯ!

ಸಲಹೆ ಪಡೆದ ಅವಳು ಸುಮ್ಮನಿರೋಕೆ ಸಾಧ್ಯವೇ ?ಚಾನಲ್ ನವರಿಗೆ ಪತ್ರಬರೆದು ಕಾರ್ಯೋನ್ಮುಖಳಾಗಿಬಿಟ್ಟಳು. ಅವರಿಂದ ಎರಡು ಅಡುಗೆ ಮಾಡಿ ತೋರಿಸೆಂಬ ಆಹ್ವಾನವೂ ಸಿಕ್ಕಿತು. ಇವಳಿಗೋ ಉತ್ಸಾಹ, ಉದ್ವೇಗ, ಉನ್ಮಾದ. ನನಗೋ ಕೆಟ್ಟ ಆತಂಕ.

" ಸುಂದ್ರೂ, ಎಂಕರಿಣಿ ಕೇಳೋ ಪ್ರಶ್ನೆಗಳಿಗೆಲ್ಲ ಸಮಂಜಸವಾಗಿ ಉತ್ತರಿಸು. ಅವರ ಕಾರ್ಯಕ್ರಮ ನಡೆಯೋವಾಗ ' ಉಪ್ಪು ಎಷ್ಟ್ ಹಾಕ್ಬೇಕು ; ಖಾರ ಎಷ್ಟು, ಸಿಹಿ ಎಷ್ಟು ಬೇಕು ' ಅನ್ನೋ ಅಸಂಬದ್ಧ ಪ್ರಶ್ನೆಗಳಿಗೆ ' ರಕ್ತದೊತ್ತಡ ಏರಿ ಲಕ್ವ ಹೊಡೀಬೇಕೆಂದಿದ್ರೆ ಉಪ್ಪುಜಾಸ್ತಿ ; ಹೊಟ್ಟೆ ಉರಿಯಿಂದ ಸಾಯ್ಬೇಕು ಅಂತಾದ್ರೆ ಖಾರ ; ಸಕ್ಕರೆ ಕಾಯಿಲೆ ಹೆಚ್ ಮಾಡಿಕೊಂಡು ಶಿವನ ಪಾದ ಸೇರೋ ಆಸೆ ಇದ್ರೆ ಸಿಹಿ ಹೆಚ್ಚೆಚ್ಚು ಹಾಕಿ ' ಅಂತ ಮನೇಲಿ ಹೇಳೋ ಹಾಗೆ ವ್ಯಂಗ್ಯ ಆಡ್ಬೇಡ. ' ಅವರವರ ರುಚಿಗೆ ತಕ್ಕಷ್ಟು ' ಅಂತ ನಾಜೂಕಾಗಿ ಹೇಳು. ಅಳತೆ ಸರಿಯಾಗಿ ಹೇಳಿ ನಿನ್ ಜಾಣತನ ಪ್ರದರ್ಶಿಸು " ಪುಕ್ಕಟ್ಟೆ ಸಲಹೆ ದುಬಾರಿಯಾಗಲಿದೆ ಎಂದೆನ್ನಿಸಿರಲಿಲ್ಲ ಆಗ.

ಪ್ರತೀ ದಿನವೂ ಅವಳು ಮಾಡಿ ತೋರಿಸುವ ರೆಸಿಪಿಗಳದ್ದೇ ತಯಾರಿಕೆ. ನೆರೆಹೊರೆಯವರು, ನೆಂಟರಿಷ್ಟರು, ಸ್ನೇಹಿತರನ್ನು ಆಹ್ವಾನಿಸಿ ಅವುಗಳನ್ನು ತಿನ್ನಿಸಿ ಅಭಿಪ್ರಾಯ ಕೇಳುವುದೇ ದಿನಚರಿಯಾಗಿತ್ತು. ನನಗೋ ದಿನಂಪ್ರತಿ ಅದನ್ನೇ ತಿಂದೂ ತಿಂದು ಅವುಗಳ ಹೆಸರು ಮಾತ್ರದಿಂದಲೇ ವಾಕರಿಸುವಂತಾಗಿತ್ತು ! ಸಾಲದ್ದಕ್ಕೆ ನನ್ನಿಂದ ಭಾರೀ ಮೊತ್ತದ ಹಣ ಪೀಕಿದ್ದಳು. ಕಾರಣ ಕೇಳಿದ್ದಕ್ಕೆ ನಿಗೂಢ ನಗೆಯೇ ಉತ್ತರವಾಗಿತ್ತು. ಅಂದು ಶೂಟಿಂಗ್ ದಿನ. ಇವಳೊಟ್ಟಿಗೆ ಹೋಗಲೆಂದು ರಜೆ ಹಾಕಿದ್ದೆ. ' ಮ್ಯಾಗಿ ಮಾಡ್ಕೊಂಡು ತಿನ್ನಿ, ಬೇಗ ಬಂದ್ ಬಿಡ್ತೇನೆ ' ಅಂತ ಜಂಭದ ಚೀಲ ಭುಜಕ್ಕೇರಿಸಿ ಹೋದವಳು ಹೊತ್ತೇರಿದರೂ ಬಂದಿರಲಿಲ್ಲ. ಯಾಕಿನ್ನೂ ಬಂದಿಲ್ಲ ಅನ್ನೋ ಆತಂಕದಲ್ಲಿರುವಾಗಲೇ ಕಾಲಿಂಗ್ ಬೆಲ್ಲಿನ ಶಬ್ದ. ಅವಸರಿಸಿ ಬಾಗಿಲು ತೆರೆದಾಗ ಮುಂದೆ ನಿಂತ ಆಕೃತಿಯ ನೋಡಿ ದಂಗಾಗಿ ಹೋದೆ. ಬದಲಾದ ವೇಷದಲ್ಲಿ ಜಂಭದ ನಗೆ ಸೂಸುತ್ತಾ ನಿಂತ ಸುಂದ್ರು ಕಪ್ಪು ಬಣ್ಣದ ಸೀರೆ ತೊಟ್ಟಿದ್ದಳು. ಹೊಳೆಯುವ ಝರಿ - ಕುಂದನ್ಗಳಿಂದ ಸೀರೆ, ರವಿಕೆ ಮಿರಮಿರನೆ ಮಿಂಚುತ್ತಿತ್ತು. ಆ ಬ್ಲೌಸೋ... ಎಲ್ಲೆಲ್ಲೋ ಲೇಸುಗಳು, ಜೋತಾಡುವ ಕಸೆಗಳಿಂದ ವಿಚಿತ್ರ ವಿನ್ಯಾಸದಲ್ಲಿ ನನ್ನವಳ ಮೈಯನ್ನು ಬಿಗಿದಪ್ಪಿತ್ತು. ಕೂದಲನ್ನು ಅದೇನು ಮಾಡಿಸಿದ್ದಳೋ, ಎರಡು ರೂಪಾಯಿಯ ಒಣಗಿದ ಕೊತ್ತಂಬರಿ ಸೊಪ್ಪಿನಂತಿದ್ದದ್ದು ಇಪ್ಪತ್ತು ರೂಪಾಯಿಯ ಸೂಡಿನಂತೆ ಸೊಂಪಾಗಿತ್ತು. ಸೀರೆಗೆ ತಕ್ಕ ಮ್ಯಾಚಿಂಗ್ ಸೆಟ್ ಗಳು ; ಉಗುರು - ತುಟಿ - ಕಣ್ಣಿನ ಮೇಲೂ ಕಪ್ಪೋ ಕಪ್ಪು ! ಮ್ಯಾಚಿಂಗ್ ಹುಚ್ಚಿನಲ್ಲಿ ಕಪ್ಪಿಟ್ಟು ಹೋಗಿದ್ದಳು.

" ಇದೇನೇ ನಿನ್ ಅವತಾರ... ಕಪ್ಪು ಬೂಬು ಆಗಿದ್ಯಲ್ಲೇ. ಅಷ್ಟಕ್ಕೂ ನೀನು ಅಡುಗೆ ಕಾರ್ಯಕ್ರಮಕ್ಕೆ ಹೋಗ್ತಿರೋದು ಫ್ಯಾಷನ್ ಪರೇಡ್ ಗೆ ಅಲ್ಲ ಅನ್ನೋದು ಗೊತ್ತಿದೆ ತಾನೇ ? " ವ್ಯಂಗ್ಯವಾಡಿದೆ. ಹಣ ಪೀಕಿದ್ದರ ರಹಸ್ಯ ಅನಾವರಣವಾಗಿತ್ತು.

" ಅಯ್ಯೋ... ಸುಮ್ನಿರಿ ಅಂದ್ರೇ. ಲಕ್ಷಗಟ್ಟಲೆ ಜನ ವೀಕ್ಷಿಸೋ ಕಾರ್ಯಕ್ರಮ. ಮನೇಲಿದ್ದಂತೆ ಎಣ್ಣೆ ಮುಖ, ಮಾಸಲು ನೈಟೀಲಿ ಅಡುಗೆ ತೋರಿಸೋಕ್ ಆಗುತ್ಯೇ ? ಹೇಗ್ಹೇಗೋ ಹೋಗಿ ನಿಮ್ ಮರ್ಯಾದೆಗೆ ಕುಂದು ತರ್ಲೇನೇ ? " ಉಳಿದ ವರಸೆಗೆ ಮೂಕನಾಗಿ ಆಟೋ ತರುವ ಸಬೂಬು ಹೇಳಿ ಜಾಗ ಖಾಲಿ ಮಾಡಿದೆ. ಸಾಮಾನು ಹೊತ್ತು ಸ್ಟುಡಿಯೋ ತಲುಪಿದ್ದಾಯ್ತು. ಆಡಂಬರದಿಂದ ಕೈ ಬೀಸುತ್ತಾ ನಡೆದ ಇವಳ ಆರ್ಭಟಕ್ಕೆ ತದ್ವಿರುದ್ಧವಾಗಿ ಸಾಮಾನು ಹೊತ್ತಿದ್ದ ಸಾದಾ ಉಡುಪಿನ ನನ್ನನ್ನು ಏನೆಂದು ತಿಳಿದರೋ ಕವಡೆ ಕಾಸಿನ ಕಿಮ್ಮತ್ತೂ ಕೊಡಲಿಲ್ಲ. ಅಂತೂ ಇಂತೂ ಇವಳ ಕಾರ್ಯಕ್ರಮ ಕಿರುತೆರೆಯಲ್ಲಿ ಪ್ರಸರಣಗೊಂಡಿತ್ತು. ವೀಕ್ಷಿಸಿದವರಿಂದ ಇವಳಿಗೆ ಅಭಿನಂದನೆಯ ಸುರಿಮಳೆ. ಹೆಚ್ಚಿನವರು ಇವಳ ವೇಷಭೂಷಣ ಹೊಗಳುತ್ತಿದ್ದರು. ಮುಂದಿನದ್ದನ್ನು ಊಹಿಸಿಕೊಳ್ಳಲೂ ದಿಗಿಲಾಗುತ್ತಿತ್ತು. ಈಗಾಗಲೇ ಹತ್ತುಸಾವಿರ ಕೈ ಬಿಟ್ಟಿತ್ತು.ಕಾಣದ ದೇವರಲ್ಲಿ ಹಾಗಾಗದಿರಲೆಂದು ಬೇಡಿಕೊಳ್ಳುತ್ತಿರುವಾಗಲೇ ನನ್ನಾಕೆಯ ಸವಾರಿ ಚಿತ್ತೈಸಿತ್ತು.

" ಏನೂಂದ್ರೆ..., ಆ ಇನ್ನೊಂದು ಚಾನಲ್ ಗೂ ನನ್ನ ಬಯೋಡಾಟ, ರೆಸಿಪಿಗಳ ವಿವರ ಪೋಸ್ಟ್ ಮಾಡಿದ್ದೀನಿ ಕಣ್ರೀ... " ಪ್ರವರ ಸಾಗಿತ್ತು. ಇದೆಲ್ಲಾ ಬೇಕಿತ್ತೇ ? ಆಕೆ ತಯಾರಿಸಿದ್ದ ' ಎಂ ಬಿ ಈ ' ಹಲ್ವಾ ಕಷ್ಟವೋ ನಷ್ಟವೋ ತಿಂದು ವಾಂತಿ ಮಾಡ್ಕೊಂಡಿದ್ರೆ ಒಳಿತಿತ್ತು. ಅವಳನ್ನಳಿಸಿದ್ದಕ್ಕೆ ಮುಖಸ್ತುತಿ ಮಾಡುತ್ತಾ ರಮಿಸಿದ್ದರೂ ಸಾಕಿತ್ತು. ಅಧಿಕಪ್ರಸಂಗಿಯಂತೆ ಸಲಹೆ ಕೊಟ್ಟಿದ್ದೇಕೆ ? ಹಳಹಳಿಸುತ್ತಾ ಅವ್ಯಕ್ತ ಹೆದರಿಕೆಯಿಂದ ಹೊಡೆದುಕೊಳ್ಳುತ್ತಿದ್ದ ಮುಷ್ಟಿಗಾತ್ರದ ಹೃದಯ ಹಾಗೂ ಜೇಬಿನಲ್ಲಿ ಅವಿತು ಕುಳಿತ ಪರ್ಸಿಗೂ " ಆಲ್ ಈಸ್ ವೆಲ್... ಆಲ್ ಈಸ್ ವೆಲ್... " ಎಂದು ಸಂತೈಸುವ ವ್ಯರ್ಥ ಪ್ರಯತ್ನ ನಡೆಸಿದೆ ನಿತ್ರಾಣನಾಗಿ.

# ಎಮ್ಮ ಮನೆಯಂಗಳದಿ...



**ಶಂಕರ ಹೆಗಡೆ**
**ನೇಪರವಿಲ್, ಇಲಿನೊಯ್ಸ್**

*ಎಮ್ಮ ಮನೆಯಂಗಳದಿ ಮೊಲ ಹೆತ್ತ ಕಥೆಯೊಂದ*
*ನಿಮ್ಮ ಸಂತಸಕೆಂದು ಬರೆದಿರುವೆನು*
*ನೋಡಿರೀ ಫೋಟವನು, ಎನ್ನ ಕೈ ಚಳಕವನು*
*ನಿಮ್ಮ ಮನವನು ತುಂಬಲೊಪ್ಪಿಸುವೆನು*

ಕಳೆದ ವರ್ಷ ಜೂನ್ ತಿಂಗಳ ಒಂದು ದಿನ. ಮಧ್ಯಾನ್ಹ ಸುಮಾರು ಏಳು ಗಂಟೆಯ ಸಮಯ. ಮನೆಯ ಮುಂದಿನ ಯಾರ್ಡಿನಲ್ಲಿ ನಾಲ್ಕು ಮೊಲಗಳು! ಒಂದು ಮೊಲ ಮಧ್ಯದಲ್ಲಿ ಮುದುಗಿ ಮಲಗಿದರೆ ಉಳಿದ ಮೂರು ಮೊಲಗಳು ಮೂರು ದಿಕ್ಕುಗಳಲ್ಲಿ ಮಲಗಿದ ಮೊಲವನ್ನೇ ಏಕದೃಷ್ಟಿಯಿಂದ ನೋಡುತ್ತ ಕುಳಿತಿವೆ. ಒಂದೆರಡು ಮೊಲಗಳು ಯಾರ್ಡಿನಲ್ಲಿ ಆಗಾಗ ಓಡಾಡುವದು ಸಾಮಾನ್ಯ. ನಾಲ್ಕು ಮೊಲಗಳು ಹೀಗೆ ತೆಪ್ಪಗೆ ಕುಳಿತಿರುವದನ್ನು ಎಂದೂ ಕಂಡಿರಲಿಲ್ಲ. ನಾನು ಚಪ್ಪಾಳೆ ತಟ್ಟಿ, ಹಾ-ಹೂ ಎಂದು ಗದ್ದರಿಸಿದರೂ ಅಲುಗದೆ ಕುಳಿತಿವೆ. ಏನೋ ವಿಚಿತ್ರ ನಡೆಯುತ್ತಿದೆ ಅಂದುಕೊಂಡೆ.



ನಮ್ಮ ಯಾರ್ಡಿನಲ್ಲಿ ಮೊಲಗಳು ಕಾಣುವದು ವಿಶೇಷವೇನಲ್ಲ. ಚಳಿಗಾಲ ಮುಗಿದು ವಸಂತ ಬಂತೆಂದರೆ ಮನೆಯ ಹಿಂದಿನ ಯಾರ್ಡಿನಲ್ಲಿ ಮೊಲಗಳು ಓಡಾಡುತ್ತಿರುವದು ನಿತ್ಯದ ನೋಟ. ಮೊಲಗಳ ಹಾವಳಿಯೂ ಸಾಕಷ್ಟಿದೆ. ಮೇ ತಿಂಗಳಲ್ಲಿ ನಾನು ಮನೆಯ ಹಿಂದುಗಡೆ ಚಿಕ್ಕ ಗಾರ್ಡನ್ನಿನಲ್ಲಿ ಅವರೆ, ಟೊಮೇಟೋ, ಡೊಣ್ಣೆ ಮೆಣಸು ಇತ್ಯಾದಿ ಚಿಕ್ಕ-ಪುಟ್ಟ ತರಕಾರಿ ಗಿಡಗಳನ್ನು ಹಾಕುತ್ತೇನೆ. ಮನೆಯ ಮುಂದೆ ವಾರ್ಷಿಕ ಬೆಳೆಯ ಹೂಗಿಡಗಳನ್ನು ಬೆಳೆಸುತ್ತೇನೆ. ಗಿಡಗಳು ಇನ್ನೂ ಎಳೆಯದಿದ್ದಾಗ, ಮೊಲಗಳು ಬಂದು ಎಲೆಗಳನ್ನೆಲ್ಲ ತಿಂದು ಹಾಕಿಬಿಡುತ್ತಿದ್ದವು. ಅವುಗಳನ್ನು ಗಿಡಗಳಿಂದ ದೂರ ಇಡಲು ಮೊಲ, ಚಿಗರೆಗಳಿಗೆ ಹೇವರಿಕೆಯಾಗುವಂತಹ ಕೆಲವು ರಾಸಾಯನಿಕ ಸೀರ್ಪನಿಗಳನ್ನು ತಂದು ಒಂದೆರಡು ಸಲ ಗಿಡಗಳ ಸುತ್ತ ಸಿಂಪಡಿಸಿದೆ. ಕೆಲಮಟ್ಟಿಗೆ ಪರಿಣಾಮಯಾಯಿತು. ಆದರೆ ಮೊಲಗಳಿಗೆ ತೆಳ್ಳಗಿನ ಮೃದು ಅವರೆ ಎಲೆಗಳ ಆಕರ್ಷಣೆ ಹೆಚ್ಚೆಂದು ಕಾಣುತ್ತಗೆ. ನೆಟ್ಟ ಮೂರು-ನಾಲ್ಕು ದಿನಗಳಲ್ಲಿಯೇ ಒಂದು ರಾತ್ರಿ ಎಲ್ಲ ಎಲೆಗಳು ಮಾಯವಾಗಿದ್ದವು. ಹಾಗಾಗಿ ಬೇಲಿ ಕಟ್ಟಿಕೊಂಡು ಇನ್ನೊಮ್ಮೆ ಗಿಡಗಳನ್ನು ಹಾಕಬೇಕಾಯಿತು.



(ಮೂರು ಮೊಲಗಳು ಸುತ್ತ ಕುಳಿತು ಹೆರುವ ಮೊಲವನ್ನು ರಕ್ಷಿಸುತ್ತಿರುವದು

ಹಿಂದೆಂದೂ ನೋಡದ ಈ ಅಸಾಮಾನ್ಯ ದೃಶ್ಯ ನೋಡಿ ನಮ್ಮ ಅಂಗಳದಲ್ಲಿ ಇಂದೊಂದು ಹೆರಿಗೆಯಾಗುತ್ತಿದೆ ಎಂದು ಊಹಿಸುವದು ಕಷ್ಟವಾಗಲಿಲ್ಲ. ಹೊಸ ಜೀವವೊಂದು ಜಗತ್ತಿಗೆ ಬರುತ್ತಿರುವದು ಯಾವಾಗಲೂ ಮನಸ್ಸಿನಲ್ಲಿ ಪುಳಕ ತರಿಸುವಂತಹ ಘಟನೆ. ನಾನು ಚಿಕ್ಕವನಿದ್ದಾಗ ಪ್ರಾಣಿಗಳ ಹೆರಿಗೆಯ ದೃಶ್ಯಗಳನ್ನು ನೋಡಿದ ನೆನಪಾಯಿತು. ಹಳ್ಳಿಯ ನಮ್ಮ ಮನೆಯಲ್ಲಿ ಹಾಲು ಮತ್ತು ಗೊಬ್ಬರಕ್ಕಾಗಿ ಆಕಳು, ಎಮ್ಮೆಗಳನ್ನು ಸಾಕುತ್ತಾರೆ. ಆಗೊಮ್ಮೆ, ಈಗೊಮ್ಮೆ ಮನೆಯ ಎಮ್ಮೆ, ಅಥವಾ ಆಕಳು ಗರ್ಭಿಣಿಯಾಗಿ ನಮ್ಮ ಕೊಟ್ಟಿಗೆಯಲ್ಲಿ ಕರುವಿಗೆ ಜನ್ಮ ಕೊಡುತ್ತಿದ್ದವು. ಮಕ್ಕಳಾದ ನಮಗೆಲ್ಲ ಅದು ಅತ್ಯಂತ ಸಂತೋಷದ, ಅಷ್ಟೇ ಆಶ್ಚರ್ಯಕರ ಸಂಗತಿ. ಚಿಕ್ಕ ಕರುಗಳೊಂದಿಗೆ ಮುದ್ದಾಡಲು ಎದುರು ನೋಡುತ್ತಿದ್ದೆವು. ಅದೂ ಅಲ್ಲದೆ ನಮ್ಮ ಮನೆಯ ಸುತ್ತ-ಮುತ್ತ ಹಲವು ಬೀದಿ ನಾಯಿಗಳಿದ್ದವು. ವರ್ಷದಲ್ಲಿ ಒಂದೆರಡು ಸಲ ನಾಯಿಯೊಂದು ಮನೆಯ ಹಿಂದಿನ ಕಟ್ಟಿಗೆ ಅಥವಾ ಒಣ ಹುಲ್ಲು ಶೇಖರಿಸುವ ಗುಡಿಸಲ ಮೂಲೆಯಲ್ಲಿ ಮರಿಗಳನ್ನು ಹೆರುವ ದೃಶ್ಯವನ್ನು ನೋಡಿದ ನೆನಪೂ ಇದೆ. ಆಮೇಲೆ ನಾಲ್ಕಾರು ಪುಟ್ಟ ನಾಯಿಮರಿಗಳು ಮನೆಯ ಮುಂದಿನ ಅಂಗಳದಲ್ಲಿ ಆಡುತ್ತಿರಿವದನ್ನು ನೆನೆಸಿಕೊಂಡರೆ ಈಗಲೂ ಹೃದಯದಲ್ಲಿ ಒಂದು ತರದ ನವಿರು ಭಾವನೆ ಮೂಡುತ್ತದೆ.

ಮೊಲಗಳ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಅಂತರ್ಜಾಲದಲ್ಲಿ ಹುಡುಕಹತ್ತಿದೆ. ದೊರೆತ ಬಹಳಷ್ಟು ಚಿಕ್ಕಪುಟ್ಟ ಬರಹಗಳು ಸಾಕುಮೊಲಗಳನ್ನು ಕುರಿತೇ ಇದ್ದವು. ನಾನೆಂದೂ ಮೊಲವನ್ನು ಸಾಕುಪ್ರಾಣಿಯಾಗಿ ಇಟ್ಟುಕೊಂಡಿಲ್ಲದಿದ್ದರೂ ಅಂತರ್ಜಾಲದಲ್ಲಿರುವ ಈ ಬರಹಗಳ ಸಂಖ್ಯೆ ನೋಡಿ, ಮೊಲಗಳು ಜನಪ್ರಿಯ ಸಾಕುಪ್ರಾಣಿಗಳಲ್ಲಿ ಒಂದೆಂಬುದು ಅರಿವಾಯಿತು. ನಿಸರ್ಗ ಸಹಜ ಅಥವಾ ಕಾಡು ಮೊಲಗಳ ಬಗ್ಗೆ ಒಂದೋ ಎರಡೋ ಚಿಕ್ಕ ಲೇಖನಗಳು ಮಾತ್ರ ದೊರೆತವು. ಕಾಡು ಮೊಲಗಳಿಗೂ, ಸಾಕು ಮೊಲಗಳಿಗೂ ಸಾಕಷ್ಟು ವ್ಯತ್ಯಾಸಗಳಿವೆಯೆಂದು ತಿಳಿದುಕೊಂಡೆ. ಉಳಿದ ಕೆಲವು ಪ್ರಾಣಿಗಳಂತೆ, ಮೊಲಗಳು ಜಗತ್ತಿನ ಯಾವುದೇ ವಿಶಿಷ್ಟ ಪ್ರದೇಶಗಳಿಗೆ ಸೀಮಿತವಾಗಿಲ್ಲ. ಬೇರೆ-ಬೇರೆ ಪ್ರದೇಶಗಳಲ್ಲಿ ವಾಸಿಸುವ ಮೊಲಗಳ ಜಾತಿಯಲ್ಲಿ ಸ್ವಲ್ಪ ಭಿನ್ನತೆಗಳಿರುತ್ತವೆ. ಕಾಡು ಮೊಲಗಳು ವಾಸಿಸುವದು ಹೆಚ್ಚಾಗಿ ಗಿಡ-ಗಂಟಿಗಳಿಂದ ತುಂಬಿದ ಬಯಲುಗಳಲ್ಲಿ. ಅರಣ್ಯಗಳಲ್ಲಿ ಎಂದೂ ವಾಸ ಮಾಡುವಿದಿಲ್ಲ.

ಮೊಲಗಳ ಸಂತಾನೋತ್ಪತ್ತಿ ಪ್ರಕ್ರಿಯೆಯ ಬಗ್ಗೆ ಸ್ವಲ್ಪ ಓದಿದೆ. ಮೊಲದ ಗರ್ಭಾವಧಿ ೨೮ ರಿಂದ ೩೧ ದಿನಗಳು ಮಾತ್ರ. ಹೆರಿಗೆಯಾದ ೫-೬ ದಿನಗಳಲ್ಲಿಯೇ ಮತ್ತೆ ಗರ್ಭಿಣಿಯಾಗಬಹುದು. ಪ್ರತಿ ಹೆರಿಗೆಯಲ್ಲಿ ಸರಾಸರಿ ೪-೫ ಮರಿಗಳನ್ನು ಹೆರುವದು ಸಾಮಾನ್ಯ. ವರ್ಷದಲ್ಲಿ ಮೂರು-ನಾಲ್ಕು ಸಲ ಗರ್ಭತಳೆಯಬಹುದು. ಕಾಡು ಮೊಲಗಳ ಆಯುಷ್ಯ ಹೆಚ್ಚೆಂದರೆ ೩-೪ ವರ್ಷಗಳು.

ಹೆರಿಗೆಯ ದಿನ ಹತ್ತಿರವಾದಂತೆ ಕಾಡು ಮೊಲಗಳು ಹೆರಿಗೆಗೆ ಸುರಕ್ಷಿತ ಸ್ಥಳವೊಂದನ್ನು ಹುಡುಕಿಕೊಳ್ಳುತ್ತವೆ. ನೆಲದಲ್ಲಿ ತಗ್ಗು ತೋಡಿ, ಅದನ್ನು ಹುಲ್ಲಿನಿಂದ ತುಂಬಿ ಬಿಲವನ್ನು ಸಿದ್ಧಮಾಡಿಕೊಳ್ಳುತ್ತದೆ. ಕೆಲ ದಿನಗಳ ಹಿಂದೆ, ನಾನು ಮನೆ ಮುಂದಿನ ಯಾರ್ಡಿನ ಮಧ್ಯದಲ್ಲಿ ಚಿಕ್ಕ ಹೊಂಡವೊಂದನ್ನು ನೋಡಿದ್ದರೂ ಹೆಚ್ಚಿನ ಲಕ್ಷ್ಯ ಕೊಟ್ಟಿರಲಿಲ್ಲ. ಈಗ ಅದರ ರಹಸ್ಯ ಗೊತ್ತಾಗುತ್ತಿದೆ. ಗರ್ಭಿಣಿ ಮೊಲ, ದಿನ ತುಂಬಿದಾಗ ಬಿಲದ ಮೇಲೆ ಕುಳಿತು ಮರಿಗಳಿಗೆ ಜನನ ಕೊಡುತ್ತದೆ. ಹೆರಿಗೆಯಾಗಿ ಸ್ವಲ್ಪ ಹೊತ್ತಿನಲ್ಲೆ ತನ್ನ ಮೈಯ ಕೂದಲುಗಳನ್ನು ಕಿತ್ತು ಬಿಲವನ್ನು ಮುಚ್ಚಿ ಹೊರಟು ಹೋಗುತ್ತದೆ. ಮೊಲದ ಹಾಲು ತುಂಬ ಪುಷ್ಟಿಕರ. ಹಾಗಾಗಿ ಮರಿಗಳಿಗೆ ದಿನಕ್ಕೆ ಒಂದೆರಡು ಸಲ ಹಾಲುಣಿಸಿದರೆ ಸಾಕು. ಪ್ರತಿದಿನ ಸಂಜೆಯೋ, ನಸುಕಿನಲ್ಲಿಯೋ ಕೆಲ ನಿಮಿಶಗಳ ಮಟ್ಟಿಗೆ ಬಂದು ಮಕ್ಕಳಿಗೆ ಹಾಲು ಕುಡಿಸುತ್ತದೆ.

ಅಂತರ್ಜಾಲದಲ್ಲಿ ಓದಿದ ಪ್ರಕಾರ, ಗಂಡು ಮೊಲ ಹೆಣ್ಣಿಗೆ ಹೆರಿಗೆಯಲ್ಲಿ ಸಾಮಾನ್ಯವಾಗಿ ಸಹಾಯ ಮಾಡುವದಿಲ್ಲ. ಒಮ್ಮೆ ಸಂಯೋಗ ಆದ ಬಳಿಕ ಗಂಡಿಗೆ ಸಂಯೋಗಿಸಿದ ಹೆಣ್ಣು ಮೊಲದ ನೆನಪಾದರೂ ಇರುತ್ತದೆಯೋ ಗೊತ್ತಿಲ್ಲ. ಆ ದಿನ ನಮ್ಮ ಯಾರ್ಡಿನಲ್ಲಿ ಕಾಯಲು ಕುಳಿತ ಮೊಲಗಳು ಗಂಡೋ, ಹೆಣ್ಣೋ ಎಂದು ಹೇಳುವದು ಕಷ್ಟ.

ಈ ಅನಿರೀಕ್ಷಿತ ದೃಶ್ಯವನ್ನು ನೋಡಿದ ತಕ್ಷಣ ನಾನು ನನ್ನ ಫೋನಿನಿಂದ ಸ್ವಲ್ಪ ದೂರ ನಿಂತು ಕೆಲವು ಫೋಟೋಗಳನ್ನು ಕಿಕ್ಕಿಸಿದೆ. ಆದರೂ ಮೊಲಗಳು ಕದಲಲಿಲ್ಲ. ಸ್ವಲ್ಪ ಹೊತ್ತು ಮನೆಯ ಒಳಗೇ ನಿಂತು ಆಗಾಗ ನೋಡುತ್ತಿದ್ದೆ. ಸುಮಾರು ಒಂದು ತಾಸಿನ ನಂತರ ನೋಡಿದಾಗ ಎಲ್ಲ ಮೊಲಗಳೂ ಹೊರಟು ಹೋಗಿದ್ದವು. ಬಿಲವು ಮೊಲದ ಕೂದಲು ರಾಶಿಯಿಂದ ಮುಚ್ಚಿದ್ದಿತು. (ಫೋಟೊ ೩ ನೋಡಿ). ನಾನು ಕುತೂಹಲ ತಡೆಯಲಾರದೆ, ಮುಚ್ಚಲ ತೆಗೆದು ಒಳಗೆ ನೋಡಿದರೆ ನಾಲ್ಕೋ, ಐದೋ ಪುಟ್ಟ ಮರಿಗಳು ಸತ್ತಂತೆ ಮಲಗಿದ್ದವು. ಮರಿಗಳ ಮೈಮೇಲೆ ಕೂದಲುಗಳಿರಲಿಲ್ಲ. ಕಣ್ಣುಗಳು ಮುಚ್ಚಿದ್ದವು. ಇವು ಜೀವಂತ ಮರಿಗಳೇ ಎಂಬ ಸಂಶಯ ಕೂಡ ಮನಸ್ಸಿನಲ್ಲಿ ಸುಳಿಯಿತು. ಆದರೆ ಮುಟ್ಟಿ ನೋಡುವ ಧೈರ್ಯ ಮಾಡಲಿಲ್ಲ. ಹಾಗೆಯೇ ಮುಚ್ಚಿಟ್ಟು ಬಂದೆ. ನಮ್ಮ ಯಾರ್ಡಿನ

ಹುಲ್ಲು ಕತ್ತರಿಸುವ ಕೆಲಸದವನಿಗೆ, ಆ ಭಾಗದಲ್ಲಿ ಸ್ವಲ್ಪ ಜಾಗ್ರತೆಯಾಗಿರಲು ಹೇಳಿದೆ.

ಆ ಮೇಲೆಯೂ ಕೆಲವು ದಿನಗಳ ತನಕ ಆಗಾಗ ಬಿಲದ ಮುಚ್ಚಲು ತೆಗೆದು ನೋಡುತ್ತಿದ್ದೆ. ಅಷ್ಟೇನೂ ಸೂಕ್ಷ್ಮವಲ್ಲದ ನನ್ನ ಕಣ್ಣಿಗೆ, ಮರಿಗಳ ಆಕಾರ, ಗಾತ್ರಗಳಲ್ಲಿ ಹೆಚ್ಚಿನ ವ್ಯತ್ಯಾಸವೇನೂ ಕಾಣಲಿಲ್ಲ. ತಾಯಿ ಮೊಲ ಬಂದು ಮರಿಗಳಿಗೆ ಹಾಲುಣಿಸುವದನ್ನೂ ಎಂದೂ ಕಾಣಲಿಲ್ಲ. ಬಹುಶಃ ನಸುಕಿನಲ್ಲೋ, ಸಂಜೆ ಹೊತ್ತೋ ಬರುತ್ತಿತ್ತೇನೋ. ಏನು ಮಾಡಬೇಕೆಂಬ ಗೊಂದಲದಲ್ಲಿಯೇ ಸ್ವಲ್ಪ ದಿನಗಳನ್ನು ಕಳೆದೆ.

ಸುಮಾರು ಹದಿನೈದು ದಿನಗಳ ನಂತರ ನೋಡಿದಾಗ ನನಗೆ ಆಶ್ಚರ್ಯ ಕಾದಿತ್ತು. ಬಿಲ ಖಾಲಿಯಾಗಿದ್ದಿತು. ಮರಿಗಳು ಬೆಳೆದು ಗೂಡು ಬಿಟ್ಟಿದ್ದವು! ಆ ಪುಟ್ಟ ಮೊಲಗಳ ನವ ಬಾಳಿನ ಹೊಸ ದಿನಗಳು ಶುರುವಾಗಿದ್ದು ನಮ್ಮ ಮನೆಯಂಗಳದಲ್ಲಿ ಅಲ್ಲವೇ?

ಇನ್ನು ಒಂದೆರಡು ತಿಂಗಳುಗಳಲ್ಲಿ ಈ ಮರಿಗಳು ದೊಡ್ಡದಾಗಿ ಮನೆಯ ಹಿಂದಿನ ಯಾರ್ಡಿನಲ್ಲಿಯೇ ಸುತ್ತಾಡುತ್ತಿರಬಹುದು. ಯೋಚಿಸುತ್ತಿದ್ದಂತೆ ಕಿರುನಗೆಯೊಂದು ಅರಿವಿಲ್ಲದೆಯೇ ಮೂಡಿರುತ್ತದೆ ನನ್ನ ಮುಖದಲ್ಲಿ.

****************************************



# ಈ ನಾನು ಆ ನೀನು ಒಂದೇ ತಾನಿನ ತಾನು



**ಪ್ರದೀಪ್ ಭಟ್**
**ಗ್ರೇಟರ್ ಟ್ವಿನ್ ಸಿಟಿಸ್, ಮಿನ್ನೆಸೋಟ**

ನಾವು ಯಾರು? ನಾವಿಲ್ಲೇಕಿದ್ದಿವೆ? ನಮ್ಮಿರುವಿಕೆಗೆ ಏನು ಅರ್ಥ? ಅನಾದಿ ಕಾಲದಿಂದಲೂ ಮಾನವನು ಅನ್ವೇಷಿಸುತ್ತಿರುವ ವಿಷಯಗಳಿವು. ಈ ಎಲ್ಲ ಪ್ರಶ್ನೆಗಳಿಗೆ ವೇದಾಂತವು ಸೂಚ್ಯವಾಗಿ ಕೊಡುವ ಉತ್ತರವೆಂದರೆ, "ತತ್ ತ್ವಂ ಅಸಿ," ಅರ್ಥಾತ್ "ಅದು ನೀನೇ (Thou art That)." ಮೇಲ್ನೋಟಕ್ಕೂ ಮತ್ತು ವಾಸ್ತವದಲ್ಲೂ ಈ ಉತ್ತರವನ್ನು ಅರ್ಥಮಾಡಿಕೊಳ್ಳುವುದು ಕಷ್ಟವಾದ ಕೆಲಸ. "ಇದು ಕಬ್ಬಿಣದ ಕಡಲೆ," ಅಥವಾ "ಈ ವೇದಾಂತ ಗೀದಾಂತವೆಲ್ಲ ಸಾಮಾನ್ಯರಿಗೆ ಹೇಳಿದ್ದಲ್ಲ," ಎಂದು ಮೂಗು ಮುರಿಯುವವರೇ ಹೆಚ್ಚು. ಇದು ಸಹಜ ತಾನೇ? ವಿಷಯ ಇಷ್ಟು ಸಂಕೀರ್ಣವಾದುದರಿಂದಲೇ ಇದು ಅನಾದಿ ಕಾಲದಿಂದಲೂ ನಡೆದು ಬಂದ ಸಂಶೋಧನೆ ಮತ್ತು ಅನಂತವಾಗಿ ಮುಂದುವರಿಯುವಂತ ಅನ್ವೇಷಣೆ. ಪ್ರತಿಯೊಬ್ಬ ವ್ಯಕ್ತಿಯೂ ತನ್ನಲ್ಲಿ ತಾನು ಈ ಮಹಾವಾಕ್ಯದ ಅರ್ಥವನ್ನು ಕಂಡುಕೊಳ್ಳಬೇಕು ಎಂಬುದು ಅರಿತವರ ಅಂಬೋಣ. ಈ ನಿಟ್ಟಿನಲ್ಲಿ ನನಗೆ ಕಂಡುಬಂದ ಎರಡು ನಿದರ್ಶನಗಳನ್ನು ಈ ಲೇಖನದ ಮೂಲಕ ನಿಮ್ಮಲ್ಲಿ ಹಂಚಿಕೊಳ್ಳಬೇಕೆಂಬುದು ನನ್ನ ಉದ್ದೇಶ.

ಮೊದಲನೆಯದು ರಮಣ ಮಹರ್ಷಿಗಳಿಂದ ಉಲ್ಲೇಖಿಸಲ್ಪಟ್ಟ, ಉಪನಿಷತ್ತಿನಲ್ಲಿರುವ ಗುರು ಶಿಷ್ಯರಾದ ಋಭು ನಿದಾಘರ ವೃತ್ತಾಂತ: ಋಭುವಿನಿಂದ ಪರಮ ಸತ್ಯದ ಬಗ್ಗೆ ಕಲಿತಿದ್ದರೂ ನಿದಾಘ ತಿರುಗಿ ತನ್ನೂರಿಗೆ ತೆರಳಿ ಯಜ್ಞ ಯಾಗಾದಿ ಆಚರಣೆಗಳಲ್ಲಿ ತೊಡಗಿದ್ದ. ತನ್ನ ಶಿಷ್ಯನ ಬಗ್ಗೆ ಮಮತೆ ತಳೆದಿದ್ದ ಋಭು ಆಗಾಗ ನಿದಾಘನಿರುವ ಸ್ಥಳಕ್ಕೆ ಬಂದು ಅವನು ತನ್ನನ್ನು ಆತ್ಮಾನ್ವೇಷಣೆಗೆ ತೊಡಗಿಸಿಕೊಂಡಿದ್ದಾನೋ ಅಥವಾ ಇಲ್ಲವೋ ಎಂದು ಪರೀಕ್ಷಿಸುತ್ತಿದ್ದ. ಹೀಗೆ ಬರುವಾಗ ಒಮ್ಮೊಮ್ಮೆ ಮಾರುವೇಷ ತಳೆದು ನಿದಾಘನಿಗೆ ತಿಳಿಯದಂತೆ ಅವನನ್ನು ವೀಕ್ಷಿಸುತ್ತಿದ್ದ.

ಹೀಗೊಮ್ಮೆ ಋಭು ತನ್ನ ಶಿಷ್ಯನಿರುವ ಊರಿಗೆ ಬಂದಾಗ, ನಿದಾಘ ಅಲ್ಲಿ ನಡೆಯುತ್ತಿದ್ದ ರಾಜನ ಮೆರವಣಿಗೆಯನ್ನು ಕುತೂಹಲದಿಂದ ನೋಡುತ್ತಿದ್ದ. ಪಟ್ಟಣವಾಸಿಯಾದ ನಿದಾಘನಿಗೆ ಅರಿವಿಲ್ಲದೇ ಹಳ್ಳಿಗನ ವೇಷದಲ್ಲಿ ಬಂದ ಋಭುವು ತನ್ನ ಶಿಷ್ಯನ ಬಳಿ ಅಲ್ಲಿ ನಡೆಯುತ್ತಿದ್ದ ಗದ್ದಲದ ಬಗ್ಗೆ ಕೇಳಿದ. ನಿದಾಘನಿಂದ ಅಲ್ಲಿ ಬಂದಿರುವ ರಾಜನ ಸುದ್ದಿಯನ್ನು ಕೇಳಿ ಗ್ರಾಮಸ್ಥನ ಸೋಗಿನಲ್ಲಿದ್ದ ಋಭುವು ಉದ್ಗರಿಸಿದ: "ರಾಜನೇ? ಅವನು ಮೆರವಣಿಗೆಯಲ್ಲಿ ಬಂದಿರುವನೇ? ಅವನೆಲ್ಲಿ ಕಾಣಿಸುತ್ತಿದ್ದಾನೆ?" ಎದುರಿನಲ್ಲಿರುವ ವೈಭವದ ಮೆರವಣಿಗೆಯಲ್ಲಿ ರಾಜನನ್ನು ಗುರುತಿಸದಿರುವ ಹಳ್ಳಿಗನನ್ನು ಕಂಡು ತಾತ್ಸಾರದಿಂದ ನಿದಾಘನು, "ನೋಡಲ್ಲಿ, ಆನೆಯ ಮೇಲಿನ ಅಂಬಾರಿಯೊಳಗೆ ರಾಜನಿರುವನು," ಎಂದ. ಆಗ ಋಭುವು, "ಎದುರಿನ ಗುಂಪಿನಲ್ಲಿ ಎರಡು ಆಕಾರಗಳೇನೋ ಕಾಣಿಸುತ್ತಿವೆ. ಅವುಗಳಲ್ಲಿ ಯಾರು ರಾಜ? ಯಾವುದು ಆನೆ?" ಎಂದು ಕೇಳಿದ. ಈ ಪ್ರಶ್ನೆಗಳನ್ನು ಕೇಳಿ ರೇಗಿದ ನಿದಾಘನು ಕೋಪದಿಂದ, "ಇಬ್ಬರನ್ನು ಕಾಣುತ್ತೀ ಎನ್ನುವೆ, ಆದರೆ ಅವರಲ್ಲಿ ಯಾರು ರಾಜ, ಯಾವುದು ಆನೆ ಎಂದರಿವೆ ಎನ್ನುತ್ತಿರುವೆ. ನಿನ್ನಂತವನ ಬಳಿ ಮಾತಾಡಿ ಏನು ಪ್ರಯೋಜನ? ನೋಡು, ಕೆಳಗಿರುವುದು ಆನೆ, ಅದರ ಮೇಲಿರುವವನು ರಾಜ," ಎಂದು ಹೇಳಿದ. ಇದನ್ನು ಆಲಿಸಿ ಸಾಧಾರಣ ವ್ಯಕ್ತಿಯ ವೇಷದಲ್ಲಿದ್ದ ಋಭುವು, "ಅಯ್ಯಾ ಕೋಪಿಸಿಕೊಳ್ಳಬೇಡ. ಮೇಲೆ ಅಂದರೆ ಎಲ್ಲಿ? ಮತ್ತೆ ಕೆಳಗೆ ಅಂದರೆ ಎಲ್ಲಿ?" ಎಂದು ಕೇಳುತ್ತಿದ್ದಂತೆಯೇ ನಿದಾಘನು ತಾಳ್ಮೆ ಕಳೆದುಕೊಂಡು, "ನಿನ್ನಂತವನಿಗೆ ಮಾತಿನಲ್ಲಿ ಹೇಳಿದರೆ ತಿಳಿಯದು. ಕೃತಿಯಿಂದಲೇ ತೋರಿಸಬೇಕು. ಎಲ್ಲಿ, ಬಗ್ಗು ನೀನು," ಎಂದು ಹೇಳಿ ಬಗ್ಗಿ ಕುಳಿತ ಋಭುವಿನ ಹೆಗಲೇರಿ, "ಈಗ ತಿಳಿದುಕೋ, ಕೆಳಗಿರುವ ನೀನು ಆನೆ ಮತ್ತು ಮೇಲಿರುವ ನಾನು ರಾಜ. ಅರ್ಥವಾಯಿತೇ?" ಇದನ್ನು ಕೇಳಿ ಋಭುವು ಸಮಾಧಾನದಿಂದ, "ಸ್ವಲ್ಪ ತಾಳ್ಮೆಯಿರಲಪ್ಪ. ರಾಜ, ಆನೆ, ಮೇಲೆ, ಮತ್ತು ಕೆಳಗೆ—ಇವೆಲ್ಲ ತಿಳಿಯಿತು. ಆದರೆ ನೀನು ಅಂದರೆ ಯಾರು? ಮತ್ತು ನಾನು ಅಂದರೆ ಯಾರು?" ಹೀಗೆ ತನ್ನಿಂದ

ಹೊರತುಪಡಿಸಿ "ನೀನು" ಎಂಬುದನ್ನು ಗುರುತಿಸುವ ಮಹಾಪ್ರಶ್ನೆ ಎದುರಾದ ಕೂಡಲೇ, ನಿದಾಘನಿಗೆ ನಿಜದ ಅರಿವಾಯಿತು... ತಾನು ಯಾರ ಮೇಲೆ ಕುಳಿತಿರುವೆನೋ ಆ ವ್ಯಕ್ತಿ ಸಾಮಾನ್ಯನಲ್ಲ, ಬದಲಾಗಿ ತನ್ನನ್ನು ತಿದ್ದಲು ಬಂದಿರುವ ತನ್ನ ಗುರುವೇ ಎಂಬುದನ್ನು ಅರಿತು ನಿದಾಘನು ಋಭುವಿಗೆ ಸಾಷ್ಟಾಂಗವೆರಗಿದ.

ನಾನು ನಿಮಗೆ ಕೊಡಲಿರುವ ಎರಡನೆಯ ನಿದರ್ಶನವು ಸ್ವಾಮಿ ಶಿವಾನಂದರಿಂದ ನೀಡಲ್ಪಟ್ಟಿದೆ. ಅದೇನೆಂದರೆ, ಜನವರಿ ತಿಂಗಳಲ್ಲಿ ನಾನು ದೇವದತ್ತ ಎಂಬುವವನನ್ನು ದೆಹಲಿಯಲ್ಲಿ ಭೇಟಿಯಾಗುತ್ತೇನೆಂದಿಟ್ಟುಕೊಳ್ಳಿ. ಆಗ ನಾನು ಅವನನ್ನು ಕಂಡು, "ಇವನು ದೇವದತ್ತ," ಎಂದು ಗುರುತು ಹಿಡಿಯುತ್ತೇನೆ. ಆಮೇಲೆ, ಎರಡು ತಿಂಗಳ ನಂತರ, ಎಪ್ರಿಲ್ನಲ್ಲಿ ಅದೇ ವ್ಯಕ್ತಿಯು ನನಗೆ ಆಗ್ರಾದಲ್ಲಿ ಕಾಣಿಸುತ್ತಾನೆಂದಿಟ್ಟುಕೊಳ್ಳಿ. ಆಗಲೂ, ಅವನನ್ನು ಕಂಡ ನಾನು, "ಇವನು ದೇವದತ್ತ," ಎಂದೇ ಗುರುತು ಹಿಡಿಯುತ್ತೇನೆ. ಜನವರಿಯಲ್ಲಿನ ದೆಹಲಿಯ ದೇವದತ್ತ ಮತ್ತು ಎಪ್ರಿಲ್ ತಿಂಗಳಲ್ಲಿನ ಆಗ್ರಾದಲ್ಲಿ ಕಂಡ ದೇವದತ್ತ ಇಬ್ಬರೂ ಒಂದೇ. ಜನವರಿ, ಎಪ್ರಿಲ್, ದೆಹಲಿ, ಮತ್ತು ಆಗ್ರಾ—ಕಾಲ ಮತ್ತು ದೇಶಗಳು ಬೇರೆ ಬೇರೆ ಮತ್ತು ತಾತ್ಕಾಲಿಕ. ಅವುಗಳಲ್ಲಿ ಕಂಡುಬರುವ ವ್ಯಕ್ತಿ ಬೇರೆ ಬೇರೆಯಲ್ಲ, ಒಂದೇ. "ತತ್ವಮಸಿ," ಈ ಮಹಾವಾಕ್ಯದ ವಾಚ್ಯಾರ್ಥವು ಇದೇ—ಆತ್ಮ (ತತ್) ಮತ್ತು ದೇಹ (ತ್ವಂ), ಈಶ್ವರ (ತತ್) ಮತ್ತು ಜೀವ (ತ್ವಂ) ಬೇರೆ ಬೇರೆಯಲ್ಲ. ಒಂದೇ. "ತತ್ ತ್ವಂ ಅಸಿ." ಕಾಲ (time) ಮತ್ತು ದೇಶಗಳಿಗೆ (space) ತಕ್ಕಂತೆ ಅವು ಬೇರೆಯಾಗಿ ಕಾಣಬಹುದಷ್ಟೇ, ಆದರೆ ವಾಸ್ತವದಲ್ಲಿ ಅವು ಬೇರಲ್ಲ. ಹೇಗೆ ದೆಹಲಿ, ಆಗ್ರಾ, ಜನವರಿ, ಮತ್ತು ಎಪ್ರಿಲ್ಗಳನ್ನು ಉಪೇಕ್ಷಿಸಿ ನಾವು ಕೇವಲ ದೇವದತ್ತನನ್ನು ಗುರುತಿಸುವೆವೋ, ಅದೇ ರೀತಿಯಲ್ಲಿ ನಾವು ತತ್ ಮತ್ತು ತ್ವಂ ಗಳ ನಡುವಿನ 'ಕಾಲ್ಪನಿಕ' ಭೇಧವನ್ನು ಉಪೇಕ್ಷಿಸಿ, ಅವೆರಡೂ ಒಂದೇ ಎಂಬುದನ್ನು ಕಾಣಬೇಕು. ಹೀಗೆ ಕಂಡಲ್ಲಿ ನಮ್ಮ ಮೂಲ ಅನ್ವೇಷಣೆ ಕೊನೆಗೊಳ್ಳುವುದು ಮತ್ತು ನಾವು ಪ್ರಪಂಚದ ದೈನಂದಿನ ತೊಳಲಾಟದಿಂದ ಮುಕ್ತರಾಗುತ್ತೇವೆ ಎಂಬುದು ವೇದಾಂತಿಗಳ ಪ್ರತಿಪಾದನೆ.

ಸ್ವಾಮಿ ಶಿವಾನಂದರು ಕೊಟ್ಟ ಈ ನಿದರ್ಶನವನ್ನು ಡಾ. ಯು. ಚಂದ್ರಶೇಖರಯ್ಯನವರು ತಮ್ಮ ಡಾಕ್ಟರೇಟ್ ಪ್ರಭಂದದಲ್ಲಿ ವೇದಾಂತದಲ್ಲಿರುವ ಈ ಮಹಾವಾಕ್ಯಕ್ಕೂ ಮತ್ತು ಆಧುನಿಕ ಭೌತಶಾಸ್ತ್ರಕ್ಕೂ ಇರುವ ಸಮಾನತೆಯನ್ನು ವಿವರಿಸಲು ಉಲ್ಲೇಖಿಸಿದ್ದಾರೆ. ಹೆಚ್ಚಿನ ವಿವರಕ್ಕೆ ಪುಸ್ತಕ ರೂಪದಲ್ಲಿ ಪ್ರಕಟಿಸಲ್ಪಟ್ಟ ಡಾ. ಚಂದ್ರಶೇಖರಯ್ಯನವರ ಡಾಕ್ಟರೇಟ್ ಪ್ರಭಂದವನ್ನು ನೋಡಿ ("Vedanta and Modern Physics," ಲೋಕಶಿಕ್ಷಣ ಟ್ರಸ್ಟ್, ಬೆಂಗಳೂರು).

ವೇದಾಂತದಲ್ಲಿರುವ ಈ ಮಹಾವಾಕ್ಯ ಮತ್ತು ಇದರಂತಿರುವ ಉಳಿದ ವಾಕ್ಯಗಳ ಅರ್ಥ ಕಂಡುಕೊಳ್ಳುವುದರಲ್ಲಿ ವಿಶೇಷ ಪ್ರಯತ್ನ ಮಾಡಬೇಕಂತಿಲ್ಲ. ಶ್ರೀ. ರಮೇಶ್ ಬಾಲ್ಸೇಕರ್ ಹೇಳಿದಂತೆ ದಿನಾಂತ್ಯದಲ್ಲಿ, ಬೇಕಿದ್ದರೆ ಕಾಫಿ ಅಥವಾ ಟೀ ಹೀರುತ್ತಾ, ಆ ದಿನದಲ್ಲಿ ನಡೆದ ಘಟನೆಗಳನ್ನು ಅವಲೋಕಿಸುತ್ತ ಅವುಗಳಲ್ಲಿ "ನಾನು" ಎಲ್ಲಿದ್ದೇನೆ ಎಂಬುದನ್ನು ಹಂತ ಹಂತವಾಗಿ ದಿನ ದಿನಕ್ಕೂ ಅರಸುತ್ತ ಹೋದರೆ ಸಾಕು... ಹಿಡಿಸಿದ್ದಲ್ಲಿ, ಇಂತಹ ಪ್ರಯತ್ನದಲ್ಲಿ ಈಗೊಮ್ಮೆ ಆಗೊಮ್ಮೆ ಈ ಅಂಕಣವನ್ನೇ ಮೆಲಕು ಹಾಕಿ!

ಗುರು ಶಿಷ್ಯರ ನಡುವಿನ ಪ್ರಶ್ನೋತ್ತರಗಳಿಂದ ಕೂಡಿದ ಸಂವಾದಗಳಾದ ಉಪನಿಷತ್ತುಗಳು, ವೇದಾಂತದಲ್ಲಿನ ತತ್ವಗಳನ್ನು ಸರಳವಾಗಿ ತಮ್ಮ ಹಾಡುಗಳ ಮೂಲಕ ನಿದರ್ಶಿಸಿರುವ ಬೇಂದ್ರೆಯಾದಿ ಕವಿಗಳು (ಬೇಂದ್ರೆಯವರ ಕವನವೊಂದರ ಸಾಲೇ ಈ ಲೇಖನದ ಶೀರ್ಷಿಕೆ), ಹಾಗೂ ನನ್ನ ತಂದೆಯವರ ಹೊತ್ತಿಗೆ ("ನಿಮ್ಮನ್ನು ಅರಿತು ನೀವಾಗಿ ಇರಿ," ಪ್ರ. ರಾ. ಭಟ್, ಏನ್. ಆರ್.ಎಮ್.ಎಚ್. ಪ್ರಕಾಶನ, ಕೋಟೇಶ್ವರ) ನನ್ನೀ ಲೇಖನಕ್ಕೆ ಪ್ರೇರಣೆಯಾಗಿವೆ.

# ಪ್ರತಿನಿಧಿತ್ವ



**ಬ್ರಹ್ಮಣಸ್ಪತಿ ಗಣಪತಿ ಶಾಸ್ತ್ರಿ**
**ಲಿಂಕನ್‌ವುಡ್, ಇಲಿನೊಯ್ಸ್**

ಅದೊಂದು ಗಡಿಬಿಡಿಯ ಸೋಮವಾರದ ಬೆಳಿಗ್ಗೆ. ಹಿಂದಿನ ದಿನ ರಜಾ ದಿನವಾದರೂ ಹೆಚ್ಚು ಹೊತ್ತು ರಿಸರ್ಚ್ ಕೆಲಸ ಮಾಡಿ ನಿದ್ದೆ ಕೆಡಿಸಿಕೊಂಡಿದ್ದ ಪ್ರಮೋದ್ ಕಾಫಿ ಇಲ್ಲದೆ ಕೆಲಸ ಆರಂಭಿಸಲು ಸಾಧ್ಯವಿಲ್ಲವೆಂದು ಕಾಫಿ ಮಗ್ ಹಿಡಿದು ಕಿಚನ್ ಕಡೆ ಕಾಫಿಗಾಗಿ ನಡೆದರು. ಅಮೆರಿಕಾದಲ್ಲಿನ ಅಗ್ರ ಪಂಕ್ತಿಯ ಉನ್ನತ ಸಂಶೋಧನಾ ಕೇಂದ್ರವದು. ಅಚ್ಚುಕಟ್ಟಾಗಿ ಇರುತ್ತಿದ್ದ ಅಲ್ಲಿಯ ಬ್ರೇಕ್ ರೂಮ್ ಬೆಂಚುಗಳು, ಆ ಸೋಮವಾರದ ಬೆಳಿಗ್ಗೆ ಅದಾಗಲೇ ಸುರಿಸಿದ ಕಾಫಿ ಕಲೆಗಳಿಂದ ಅಲಂಕೃತವಾಗಿದ್ದವು. ಪ್ರಮೋದ್ ಕಾಫಿ ತುಂಬಿಸಿಕೊಂಡು ತಿರುಗುತ್ತಿಂದಂತೆ ಅವನೊಟ್ಟಿಗೆ ಕೆಲಸ ಮಾಡುತ್ತಿದ್ದ ಸ್ಥಳೀಯ ಸಂಶೋಧಕ ಕ್ರಿಸ್ ಎದುರಾದ. ಕುಶಲೋಪರಿ ವಿಚಾರಿಸಿದರೂ ಸರಿಯಾಗಿ ಪ್ರತಿಸ್ಪಂದಿಸದೆ ಗೊಣಗುತ್ತ ಕ್ರಿಸ್ ತನ್ನ ಮಗ್ ಅಲ್ಲಿ ಕಾಫಿ ತುಂಬಿಸಿಕೊಳ್ಳತೊಡಗಿದ. ಅಲ್ಲಿದ್ದ ಕಾಫಿ ಕಲೆಗಳಿಗೆ ಪ್ರಮೋದ್ ಕಾರಣನೆಂದು ಎಣಿಸಿ, ತನಗಿದ್ದ ಹತಾಶೆಯನ್ನು ಅವನ ಮೇಲೆ ತಿರುಗಿಸಲಾರಂಭಿಸಿದ. "ತಾವು ಮಾಡಿದ ಕಾಫಿ ಕಲೆಗಳನ್ನು ಸ್ವಚ್ಛ ಮಾಡಲಾರದಂತಹ ಮಹಾಶಯರೆಲ್ಲ ಬಂದು ಇಂಥ ಸಂಸ್ಥೆಯಲ್ಲಿ ಸೇರಿ ಕೊಂಡಿದ್ದಾರೆ" ಎಂದು ಪ್ರಮೋದನನ್ನು ನೋಡಿ ಕೊಂಕು ನುಡಿದ. ಇನ್ನೂ ಮುಂದುವರೆದು "ನಮ್ಮ ದೇಶ ಬೇರೆ ಇಂತಹ ಪ್ರಚಂಡರಿಗೆ ಶಿಷ್ಯವೇತನ ನೀಡಿ ಕರೆಸಿಕೊಂಡು ದೇಶದ ಸಂಪನ್ಮೂಲವನ್ನು ಹಾಳು ಗೆಡವುತ್ತಿದೆ" ಎನ್ನುತ್ತ ಕಾಫಿ ಸುರಿದುಕೊಳ್ಳುತ್ತಿದ್ದ. ಸಿಟ್ಟಿನ ಭರದಲ್ಲಿ ಕಾಫಿ ಬಗ್ಗಿಸುವಾಗ ತಾನು ಚೆಲ್ಲಿದ ಕಾಫಿ ಕ್ರಿಸ್ ನ ಗಮನಕ್ಕೆ ಬರಲೇ ಇಲ್ಲ. ತನ್ನ ಸಂಶೋಧನೆಯ ಕುರಿತಾದ ಗುಂಗಿನಲ್ಲಿದ್ದ ಪ್ರಮೋದ್, ಕ್ರಿಸ್ ನ ಕೊಂಕಿನಿಂದ ವಿಚಲಿತನಾದ. ತನ್ನ ಸಣ್ಣ ಹಾಗೂ ವಿನಮ್ರತ ಧ್ವನಿಯಲ್ಲಿ ತಡವರಿಸುತ್ತ ಕಾಫಿ ಕಲೆಗಳಿಗೆ ಅವನು ಕಾರಣನಲ್ಲವೆಂದ. ಪ್ರಮೋದನ ವಿನಮ್ರತೆ ಕ್ರಿಸ್ ಗೆ ಮುದ ನೀಡಿತು ಮತ್ತು ಅವನಿಗಿದ್ದ ಹತಾಶೆಯನ್ನು ತೀರಿಸಿಕೊಳ್ಳುವ ದಾರಿಯಾಯಿತು. "ಇದನ್ನೆಲ್ಲಾ ನಾನು ಸಾಕಷ್ಟು ಈ ಹಿಂದೆ ಕೇಳಿದ್ದೇನೆ. ಭಾರತೀಯರು ಮತ್ತೆಲ್ಲಾ ಸಂಸ್ಥೆಗಳನ್ನು ಹಾಳುಗೆಡವಿದ್ದಾಯಿತು, ಈಗ ಇಲ್ಲಿಯೂ ಬಂದು ವ್ಯಾಪಿಸಿದ್ದಾರೆ"......... ಕ್ರಿಸ್‌ನ ಶಬ್ದ ಪ್ರಯೋಗಗಳು ಮುಂದುವರಿದಿದ್ದವು ಹಾಗೂ ಸೌಜನ್ಯತೆಯನ್ನು ಮೀರಿದ್ದವು. ಪ್ರಮೋದನ ಚರ್ಮದ ಬಣ್ಣ ಕ್ರಿಸ್ ಅನ್ನು ಪೂರ್ವಗ್ರಹಕ್ಕೆ ಒಳ ಮಾಡಿತ್ತು ಅನ್ನುವುದಂತೂ ನಿಶ್ಚಿತವಾಗಿತ್ತು.

ಭಾರತೀಯರು ಸಂಸ್ಕೃತಿ ಇಲ್ಲದ ಅಜ್ಞಾನಿಗಳೆಂಬುದು ಕ್ರಿಸ್‌ನ ಮಾತಿನ ಪರಿಯಾಗಿತ್ತು. ಕ್ರಿಸ್ ಜೊತೆಗಿನ ಈ ಅನುಭವವು ಅವನಿಗಲ್ಲದೇ, ಉಳಿದ ಭಾರತೀಯ ಸ್ನೇಹಿತರಿಗೂ ಆಗಿತ್ತು. ಹಾಗಾಗಿ ಅವನಿಗೆ ಸ್ವಲ್ಪ ಭಾರತೀಯ ಸಂಸ್ಕೃತಿ ಹಾಗೂ ಜ್ಞಾನದ ಬಗೆಗೆ ಅರಿವು ಮೂಡಿಸುವುದು ಅವಶ್ಯವೆನಿಸಿತು ಪ್ರಮೋದನಿಗೆ. ಆದರೆ, ಹೆಚ್ಚು ಸಮಯವಿಲ್ಲವಾದ್ದರಿಂದ "ನೀನಾಡಿದ ಮಾತುಗಳು ನಿನ್ನ ಮನೋಭಾವದ ಸೂಚಕಗಳು. ಅವು ನಿನ್ನನ್ನು ಪ್ರತಿನಿಧಿಸಿತ್ತವೆಯೇ ವಿನಃ ಭಾರತೀಯರನ್ನಲ್ಲ. ನಾವೇನು ಪ್ರತಿನಿಧಿಸಿತ್ತೇವೆಂದು ನಿನಗಿನ್ನೊಮ್ಮೆ ಹೇಳುತ್ತೇನೆ" ಎಂದು ಪ್ರಮೋದ್ ನುಡಿದ. "ಅದಕ್ಕಾಗಿ ಕಾಯುತ್ತಿರುತ್ತೇನೆ" ಎಂದ ಕ್ರಿಸ್. "ಖಂಡಿತವಾಗಿಯೂ" ಎಂದು ನಿಖರವಾಗಿ ಮರುತ್ತರ ನೀಡಿದ ಪ್ರಮೋದ್ ತನ್ನ ಕೆಲಸದೆಡೆಗೆ ಹೊರಡಲು ಸಜ್ಜಾದ. ಅಷ್ಟರಲ್ಲಿಯೇ ಕ್ರಿಸ್‌ನ ಆಪ್ತೆ ಲಿಂಡಾ ಬೆಳಗಿನ ಕಾಫಿಗಾಗಿ ತನ್ನ ಮಗ್ ಹಿಡಿದು ಬಂದಳು. ಅಲ್ಲಿಯ ವರೆಗೂ ಖಾರವಾಗಿ ಮಾತನಾಡುತ್ತಿದ್ದ ಕ್ರಿಸ್, ಒಮ್ಮೆಲೇ ತನ್ನ ಧ್ವನಿ ಬದಲಾಯಿಸಿ "ಹೇಯ್, ನಿನ್ನ ವೀಕೆಂಡ್ ಹೇಗಿತ್ತು?" ಎಂದು ಉಲ್ಲಾಸದಿಂದ ನಗುತ್ತಾ ಲಿಂಡಾಳನ್ನು ವಿಚಾರಿಸಿದ. ಅವರಿಬ್ಬರ ಸಂವಾದ ಮುಂದುವರೆಯುತ್ತಿದ್ದಂತೆ, ಪ್ರಮೋದ್ ತನ್ನ ಕೆಲಸಕ್ಕೆ ಮರಳಿದ.

ಬಹು ದಿನಗಳಿಂದ ಕಾಡುತ್ತಿದ್ದ ಸಂಶೋಧನಾ ಲೇಖನದ ಒಂದು ಭಾಗವನ್ನಾದರೂ ಬರೆದು ಮುಗಿಸಿ ಬಿಡೋಣವೆಂದು ಪ್ರಮೋದ್

ತನ್ನ ಕಂಪ್ಯೂಟರ್ ಕೀ ಬೋರ್ಡ್ ಮೇಲೆ ಬೆರಳಾಡಿಸತೊಡಗಿದ. ಸ್ವಲ್ಪ ಆರಂಭದ ಅಡಚಣೆ ಇದ್ದರೂ, ಬಿಸಿ ಕಾಫಿ ಹೀರುತ್ತ ಲೇಖನ ಮುಂದುವರೆಸಿದ. ಲೇಖನವೇನೋ ಚೆನ್ನಾಗಿ ಸಾಗುತ್ತಿದೆ, ಆದರೆ ಯಾಕೋ ದಾಹವೆಂದು ಕೈ ಚಾಚಿದಾಗ ಕಾಫಿಯೂ ಮುಗಿದಿತ್ತು ಅದರೊಂದಿಗೆ ತಂದಿದ್ದ ನೀರೂ ಖಾಲಿಯಾಗಿತ್ತು. ಇಷ್ಟು ಬೇಗ ಎಲ್ಲ ಕುಡಿದು ಮುಗಿಸಿ ಬಿಟ್ಟೆನೆ ಎಂದು ಪ್ರಮೋದ್ ವೇಳೆಯನ್ನು ಗಮನಿಸಿದಾಗ ಒಂದೂವರೆ ಗಂಟೆಯೇ ಸಂದಿಸಿತ್ತು. ಮತ್ತೊಮ್ಮೆ ನೀರು ತುಂಬಿಸಿ ಬರೋಣವೆಂದು ಬ್ರೇಕ್ ರೂಮ್ ಕಡೆ ಧಾವಿಸಿದ.

ಬ್ರೇಕ್ ರೂಮ್ ಕಡೆ ಬರುತ್ತಿದ್ದಂತೆಯೇ ಲಿಂಡಾ ಮತ್ತು ಕ್ರಿಸ್‌ರ ನಗು ಭರಿತ ಸಂಭಾಷಣೆ ಪ್ರಮೋದನಿಗೆ ಕೇಳಿ ಬರತೊಡಗಿತು. "ನಮ್ಮ ನಾಯಿ ಜಾಕಿ ಎಷ್ಟು ಕ್ಯೂಟ್ ಅಂದರೆ, ಅವನು ಮಗುವಿನಂತೆ ನಮ್ಮೊಂದಿಗೇ ನಿದ್ರಿಸುತ್ತಾನೆ" ಎಂದೆನ್ನುತ್ತ ತನ್ನ ಮೊಬೈಲ್ ನಲ್ಲಿಯ ಫೋಟೋಗಳನ್ನು ತೋರಿಸುತ್ತಾ ಇದ್ದಳು ಲಿಂಡಾ. "ಜಾಕಿಯ ಫೋಟೋಗಳು ತುಂಬಾ ಕ್ಯೂಟ್ ಆಗಿವೆ" ಎಂದು ತನ್ನ ಮೆಚ್ಚುಗೆ ವ್ಯಕ್ತ ಪಡಿಸಿದ ಕ್ರಿಸ್. ಬೆಳಗಿನ ಒಂದೂವರೆ ಗಂಟೆಯಿಂದ ಅವರಿಬ್ಬರೂ ಅಲ್ಲಿಂದ ಕದಲಿದಂತೆ ಕಾಣಲಿಲ್ಲ ಪ್ರಮೋದನಿಗೆ. ಬೆಳಿಗ್ಗೆಯಿಂದ ಕಾಲ ಹರಣ ಮಾಡುತ್ತಿದ್ದ ಕ್ರಿಸ್ ಮತ್ತು ಲಿಂಡಾಳನ್ನು ಗಮನಿಸಿದ ಪ್ರಮೋದನಿಗೆ ಏನಕ್ಕಾಗಿ ಪರ ರಾಷ್ಟ್ರದ ಉತ್ತಮ ವಿದ್ಯಾರ್ಥಿಗಳಿಗೆ ಶಿಷ್ಯ ವೇತನ ನೀಡಿ ಅಮೇರಿಕಾ ಕೈ ಬೀಸಿ ಕರೆಯುವುದೆಂಬುದಕ್ಕೆ ಅರ್ಧ ಉತ್ತರ ಸಿಕ್ಕಿತು. ಪ್ರಮೋದ್ ಮೌನದಲ್ಲಿ ತನ್ನ ಬಾಟಲಿಯಲ್ಲಿ ನೀರು ತುಂಬಿಸಿಕೊಳ್ಳ ತೊಡಗಿದ.

"ಕ್ರಿಸ್, ನಾನು ಕೇಳಿದ್ದ ಲೇಖನವಿನ್ನೂ ನನ್ನ ಇನ್‌ಬಾಕ್ಸ್ ತಲುಪಿಲ್ಲ" ಎನ್ನುತ್ತಲೇ ಗಡಿಬಿಡಿಯಲ್ಲಿ ಬ್ರೇಕ್ ರೂಮ್ ಪ್ರವೇಶಿಸಿದರು ಪ್ರೊಫೆಸರ್ ಹೆನ್ರಿ. ಕ್ರಿಸ್ ಅವರ ಸಂಶೋಧನಾ ವಿದ್ಯಾರ್ಥಿ. "ಈ ನಡುವೆ ತುಂಬಾ ಕೆಲಸವಿದ್ದಿದ್ದರಿಂದ ಲೇಖನ ಶುರು ಮಾಡಲು ಸಾಧ್ಯವೇ ಆಗುತ್ತಿಲ್ಲ" ಎಂದು ನೆವ ಹೇಳಿದ ಕ್ರಿಸ್. "ಇನ್ನೆರಡು ದಿನಗಳಲ್ಲಿ ನಮ್ಮ ಪೋಸ್ಟರ್ ಶೀರ್ಷಿಕೆ ಹಾಗೂ ಮುನ್ನುಡಿಯನ್ನು ಕಳುಹಿಸದಿದ್ದರೆ, ಅದನ್ನು ಕಾನ್ಫೆರೆನ್ಸನಲ್ಲಿ ಪ್ರಸ್ತುತ ಪಡಿಸಲು ಸಾಧ್ಯವಿಲ್ಲವೆಂಬುದು ನೆನಪಿರಲಿ" ಎಂದು ತಮ್ಮ ಅತೃಪ್ತಿಯನ್ನು ವ್ಯಕ್ತ ಪಡಿಸುತ್ತ ಬಂದ ವೇಗದಲ್ಲೇ ಕಾಫಿ ತೆಗೆದು ಹಿಂದುರಿಗಿದರು ಹೆನ್ರಿ. "ಲಿಂಡಾ, ಇನ್ನು ಶುರುವಾಯಿತು ಹೆನ್ರಿಯ ಕಾಟ. ಲಂಚ್ ಬ್ರೇಕ್ ನಲ್ಲಿ ಪುನಃ ಸಿಗುತ್ತೇನೆ" ಎಂದ ಕ್ರಿಸ್ ಕಷ್ಟದಲ್ಲಿ ಕದಲಿದ. "ನಾನೂ ಬರೆಯಲಾರಂಭಿಸಿಲ್ಲ, ಇನ್ನಾದರೂ ಶುರು ಮಾಡುತ್ತೇನೆ. ಆದರೆ ಬೆಳಿಗ್ಗೆಯೇ ಶುರು ಮಾಡಲು ಬೇಸರ" ಎಂದು ಕ್ರಿಸ್ ಜೊತೆ ಒಲ್ಲದ ಮನಸ್ಸಿಂದ ಲಿಂಡಾಳೂ ನಿರ್ಗಮಿಸಿದಳು. ಇದನ್ನೆಲ್ಲಾ ಗಮನಿಸುತ್ತಿದ್ದ ಪ್ರಮೋದ್ ನೀರು ತುಂಬಿಸಿಕೊಂಡು ತನ್ನ ಕೆಲಸಕ್ಕೆ ಹಿಂದಿರುಗಿದ.

ಆ ದಿನದ ಮಧ್ಯಾಹ್ನ ೨ ಗಂಟೆಯ ಸಮಯವೇ ಆಗಿ ಬಿಟ್ಟಿತ್ತು. ಪ್ರಮೋದ್ ಆಗಷ್ಟೇ ಲ್ಯಾಬೋರೇಟರಿ ಕೆಲಸ ಮುಗಿಸಿ ಊಟದ ವೇಳೆ ಮೀರಿ ಹೋದ ಅರಿವಾಗಿ, ಊಟದ ಬಾಕ್ಸ್ ಹಿಡಿದು ಬ್ರೇಕ್ ರೂಮ್ ಕಡೆ ಧಾವಿಸಿದ. ಅದಾಗಲೇ ಊಟದ ಸಮಯ ಮೀರಿದ್ದರಿಂದ, ಅಲ್ಲಿ ಯಾರೂ ಜೊತೆಗೆ ಕುಳಿತು ಊಟ ಮಾಡಲು ಸಿಗಲಾರರು ಎಂದು ಎಣಿಸಿ ಬ್ರೇಕ್ ರೂಮ್ ಕಡೆ ಹೆಜ್ಜೆ ಹಾಕುತ್ತಿದ್ದ. ಯಾವಾಗಲೂ ಬೇಗ ಊಟ ಮುಗಿಸಿ ಹಿಂದಿರುಗುತ್ತಿದ್ದ ಕ್ರಿಸ್, ಅಂದಿನ ಮಧ್ಯಾಹ್ನ ಇನ್ನೂ ಬ್ರೇಕ್ ರೂಮಿನಲ್ಲಿ ಊಟ ಮಾಡುತ್ತಿದ್ದುದು ಪ್ರಮೋದನ ಗಮನಕ್ಕೆ ಬಂತು. ತನ್ನ ಊಟ ಬಿಸಿ ಮಾಡಿಕೊಂಡು ಕ್ರಿಸ್ ಕುಳಿತಿದ್ದ ಮೇಜಿನ ಹತ್ತಿರ ಬಂದು, "ಜೊತೆಯಲ್ಲಿ ಕುಳಿತು ಊಟ ಮಾಡಬಹುದಾ?" ಎಂದ ಪ್ರಮೋದ್. ಆಗಷ್ಟೇ ಊಟ ಶುರು ಮಾಡಿದ್ದ ಕ್ರಿಸ್ ಒಲ್ಲದ ಮನಸ್ಸಿಂದ ಸಮ್ಮತಿಸಿದ.

ಬಹುತೇಕವಾಗಿ ಬೇಗ ಊಟ ಮುಗಿಸಿ ಹಿಂದಿರುಗುತ್ತಿದ್ದ ಕ್ರಿಸ್ ಅಂದು ಯಾಕೋ ಸಪ್ಪೆ ಮೋರೆ ಹಾಕಿ ತಡವಾಗಿ ಊಟ ಮಾಡುತ್ತಿದ್ದುದನ್ನು ಗಮನಿಸಿದ ಪ್ರಮೋದ್ ಎದುರು ಬದುರಾಗಿ ಊಟಕ್ಕೆ ಕುಳಿತ. ಆಗಾಗ ಬಂದು ನೀರು ಮತ್ತು ಕಾಫಿ ತೆಗೆದುಕೊಂಡು ಹೋಗುವವರನ್ನು ಬಿಟ್ಟರೆ, ಬ್ರೇಕ್ ರೂಮ್ ಶಾಂತವಾಗಿತ್ತು.

"ಏನು ಕ್ರಿಸ್, ತುಂಬಾ ದೀರ್ಘ ಯೋಚನೆಯಲ್ಲಿರುವಂತೆ ಕಾಣುತ್ತೀಯ, ಎಲ್ಲ ಸೌಖ್ಯವೆ?" ಎಂದು ಪ್ರಮೋದ್ ಕ್ರಿಸ್‌ನನ್ನುವಿಚಾರಿಸಿದ.

ಅದಕ್ಕೆ ಕ್ರಿಸ್ "ಹೂಂ, ನಾನು ಹೆನ್ರಿಗೆ ಕಳುಹಿಸಲು ಬರೆಯುತ್ತಿರುವ ವಿಜ್ಞಾನಿಕ ಲೇಖನ ತುಂಬಾ ತಲೆ ನೋವಾಗಿದೆ. ಇದಲ್ಲದೆಯೇ, ಬೇಗ ಲೇಖನವನ್ನು ಕಳುಹಿಸೆಂದು ಹೆನ್ರಿ ನನ್ನನ್ನು ಒತ್ತಾಯ ಪಡಿಸುತ್ತಿದ್ದಾರೆ." ಎಂದು ಹೇಳಿದ.

"ನೀನು ಯಾವ ವಿಷಯದ ಬಗ್ಗೆ ಈ ಲೇಖನ ಬರೆಯುತ್ತಿದ್ದೀಯ ಎಂದು ಕೇಳಬಹುದಾ?"

"ನಾನು ತಾಯಿ ಮತ್ತು ಮಗುವಿನ ಆಹಾರ ಮತ್ತು ಪೋಷಣೆಯ ಕುರಿತಾಗಿ ಸಂಶೋಧನೆ ನಡೆಸುತ್ತಿದ್ದೇನೆ. ನನ್ನ ಲೇಖನವನ್ನೂ ಅದರ ಕುರಿತಾಗಿಯೇ ಬರೆಯಬೇಕು." ಕ್ರಿಸ್ ಗರ್ವದಿಂಲೇ ಉತ್ತರಿಸಿದ.

"ತಾಯಿ ಮತ್ತು ಮಗುವಿನ ಆಹಾರ ಮತ್ತು ಪೋಷಣೆ ಇದು ಒಂದು ಮುಖ್ಯವಾದ ವಿಷಯ ಹಾಗೂ ಬಹಳ ವಿಸ್ತಾರವಾದದ್ದು. ನಿನ್ನ ಸಂಶೋಧನೆಯ ಬಗ್ಗೆ ಇನ್ನೂ ಸ್ವಲ್ಪ ವಿವರಿಸುತ್ತೀಯಾ?"

ಪ್ರಮೋದನು ಆಸಕ್ತಿಯಿಂದ ಕೇಳಿದ ಆ ಪ್ರಶ್ನೆ ಕ್ರಿಸ್ ಗೆ ಬಹಳ ಇಷ್ಟವಾಯಿತು. ಹಾಗಾಗಿ ಬೀಗುತ್ತಲೇ ಉತ್ತರಿಸಿದ ತೊಡಗಿದ.

"ನಾನು ತುಂಬಾ ವಿಷಯಗಳನ್ನು ಓದಿ ಸಂಶೋಧನೆ ಮಾಡಿ ಆರಿಸಿಕೊಂಡ ವಿಷಯವಿದು. ನನ್ನ ಸಂಶೋಧನೆಯ ಬಗ್ಗೆ ಸರಿಯಾಗಿ ಹೇಳಬೇಕೆಂದರೆ ತಾಯಿ ಗರ್ಭಿಣಿಯಾದಾಗ ತಿನ್ನುವ ಆಹಾರ ಅವಳ ಹೊಟ್ಟೆಯಲ್ಲಿ ಬೆಳೆಯುತ್ತಿರುವ ಮಗುವಿನ ಮೇಲೆ ಪರಿಣಾಮ ಬೀರುತ್ತದೆ ಎಂದು ಸಾಬೀತು ಪಡಿಸುವಂತಹುದು. ನಾನು ಲ್ಯಾಬೋರೇಟರಿಯಲ್ಲಿ ಗರ್ಭಿಣಿ ಇಲಿಗಳಿಗೆ ಹೆಚ್ಚು ಕೊಬ್ಬಿರುವ ಊಟ ತಿನ್ನಿಸಿ, ಅವುಗಳ ಮರಿಗಳ ಮೇಲೆ ಉಂಟಾಗುವ ಪರಿಣಾಮವನ್ನು ನೋಡುತ್ತಿದ್ದೇನೆ."

ಕ್ರಿಸ್ ತನ್ನ ಸಂಶೋಧನೆ ಬಗ್ಗೆ ಹೇಳಲು ಶುರು ಮಾಡಿದಾಗ ತುಂಬಾ ಗಹನವಾದ ಮತ್ತು ಆಳವಾದ ವಿಷಯವಿರಬಹುದು ಎಂದು ಎಣಿಸಿದ್ದ ಪ್ರಮೋದ್, ಇದನ್ನು ಕೇಳಿ ಸ್ವಲ್ಪ ನಿರಾಶನಾದ. ಆದರೂ ತಿಳಿದುಕೊಳ್ಳುವ ವಿಷಯವೆಂದು ತನ್ನ ಆಸಕ್ತಿಯನ್ನು ಮುಂದುವರೆಸಿದ.

"ನೀನು ಆ ಮರಿಗಳಲ್ಲಿ ಆಗುವ ಯಾವ ಬದಲಾವಣೆಯನ್ನು ನೋಡುತ್ತಿದ್ದೀಯ ಮತ್ತು ಹೇಗೆ ಅವುಗಳನ್ನು ಪರೀಕ್ಷಿಸುತ್ತೀಯಾ ?"

ಪ್ರಮೋದನ ಆಸಕ್ತ ಪ್ರಶ್ನೆ ಕ್ರಿಸ್ ನನ್ನು ಇನ್ನೂ ಹೆಚ್ಚು ಪ್ರಚೋದಿಸಿತು. ಇನ್ನೂ ಬೀಗುತ್ತ ಕ್ರಿಸ್ ಉತ್ತರಿಸತೊಡಗಿದ:

"ಅದಕ್ಕೆ ತುಂಬಾ ಕೆಲಸವಾಗುತ್ತೆ. ನಾನು ಈ ನಾಲ್ಕೈದು ವರ್ಷಗಳಿಂದ ನನ್ನ ಸಂಶೋಧನೆ ಮುಂದುವರಿಸುತ್ತಿದ್ದೇನೆ. ಕೊನೆಯ ಆರು ತಿಂಗಳಲ್ಲಿ ಸುಮಾರು ೫೦೦ ಕ್ಕಿಂತಲ್ಲೂ ಹೆಚ್ಚು ತಾಯಿ ಹಾಗೂ ಮರಿ ಇಲಿಗಳನ್ನು ಸಾಯಿಸಿ, ಅವುಗಳ ರಕ್ತ ಹಾಗೂ ಬೇರೆ ಬೇರೆ ಅಂಗಾಂಗಗಳನ್ನು ಬೇರ್ಪಡಿಸಿ ಪರೀಕ್ಷಣೆ ಮಾಡುತ್ತಿದ್ದೇನೆ. ಮರಿ ಇಲಿಗಳು ದೊಡ್ಡವರಾದಾಗ ಡಯಾಬಿಟಿಸ್ ಹೊಂದಬಹುದು ಎಂದು ತೋರಿಸುತ್ತದೆ ನನ್ನ ಸಂಶೋಧನೆ."

ನಾಲ್ಕು ವರ್ಷಗಳಿಗಿಂತ ಹೆಚ್ಚು ಸಂಶೋಧನೆ ನಡೆಸಿ ತಿಳಿದ ವಿಷಯವನ್ನೇ ಪುನರಾವರ್ತಿಸುತ್ತ, ಹೊಸತನ್ನೇನೋ ಕಂಡು ಹಿಡಿಯುತ್ತಿದ್ದೇನೆ ಎಂದು ನೂರಾರು ಇಲಿಗಳನ್ನು ಬಲಿ ಕೊಟ್ಟು ನಡೆಸುತ್ತಿದ್ದ ಕ್ರಿಸ್ ನ ಪ್ರಯೋಗಗಳು ಪ್ರಮೋದನ ಕುತೂಹಲಕ್ಕೆ ತಣ್ಣೀರೆರಚಿದವು. ತುಂಬಾ ಸಾಮಾನ್ಯವಾದ ವಿಷಯಗಳನ್ನು ಬಹಳ ದೊಡ್ಡ ವಿಜ್ಞಾನದ ವಿಷಯವೆಂದು ಸಂಶೋಧನೆ ನಡೆಸುವ ಸಂಶೋಧಕರಲ್ಲೊಬ್ಬ ಕ್ರಿಸ್ ಎಂಬುದು ಪ್ರಮೋದನಿಗೆ ಅರಿವಾಗಲು ಸಮಯವಾಗಲಿಲ್ಲ. ಅದಲ್ಲದೇ ತನಗೆ ತಿಳಿದ ಅಮೆರಿಕಾ ಜಗತ್ತಿನಲ್ಲಿಯೇ ಎಲ್ಲಾ ಜ್ಞಾನವೂ ಉದ್ಭವವಾಗಿದೆಯೆಂದು ತಲೆ ಸೊಕ್ಕಿನಿಂದ ಬೀಗುತ್ತಿದ್ದ ಕ್ರಿಸ್ ಗೆ, ಭಾರತೀಯತೆಯನ್ನು ತಿಳಿಸುವ ಒಳ್ಳೆ ಅವಕಾಶ ಇದು ಎಂದು ಮನದಲ್ಲೇ ಎಣಿಸಿದ ಪ್ರಮೋದ್.

"ಓಹೋ ಹಾಗೋ." ಎಂದು ಪ್ರಮೋದ್ ಕುಹಕದಲ್ಲಿ ನುಡಿದ.

ಪ್ರಮೋದನ ಕುಹಕದಿಂದ ಕೋಪ ಹಾಗೂ ಗಲಿಬಿಲಿಗೊಂಡ ಕ್ರಿಸ್, "ಓಹೋ ಹಾಗೋ ಎನ್ನುವುದಕ್ಕೆ ಇದೇನು ಸಾಧಾರಣ ಸಂಶೋಧನೆಯಲ್ಲ. ಆಹಾರವೇ ಸರಿಯಾಗಿ ಸಿಗದ ನಿನ್ನ ದೇಶಕ್ಕೆ ಈ ಸಮಸ್ಯೆಯೇನಿಲ್ಲ ಬಿಡು." ಎಂದು ಕಹಿಯಾಗಿ ನುಡಿದ

ವಿಷಯಕ್ಕೆ ಸಂಬಂಧವಿಲ್ಲದಿದ್ದರೂ ದೇಶದ ಬಗೆಗೆ ಹೀನಾಯವಾಗಿ ಕ್ರಿಸ್ ಮಾತನಾಡಿದ್ದು, ಪ್ರಮೋದನಿಗೆ ಕೋಪ ಬರಿಸಿತು. ಕೋಪದಿಂದ ಉಪಯೋಗವಿಲ್ಲವೆಂದು ನಿರ್ಧರಿಸಿದ ಪ್ರಮೋದ್ ಉಪಾಯ ಮಾರ್ಗ ಯೋಚಿಸಿದ.

"ಕ್ರಿಸ್, ನನ್ನ ದೇಶದ ಸಮಸ್ಯೆ ನಿನಗೆ ಬೇಡ. ನಿಜ ಹೇಳ ಬೇಕೆಂದರೆ, ನಿನ್ನ ಅಪೂರ್ವ ಸಂಶೋಧನೆಯ ವಿಷಯ ನನ್ನ ದೇಶದಲ್ಲಿ ಒಂದು ಸಾಮಾನ್ಯ ಪ್ರಜ್ಞೆಯ ವಿಷಯ.! ಹಾಗಾಗಿ ನಿನ್ನ ಸಂಶೋಧನೆ ನನಗೆ ಸೋಜಿಗವೆನಿಸುತ್ತಿದೆ. ನಮ್ಮ ದೇಶ ವಿಜ್ಞಾನ ಹಾಗೂ ಇತರ ಕ್ಷೇತ್ರಗಳಲ್ಲಿ ಸಾಕಷ್ಟು ವರ್ಷಗಳ ಹಿಂದೆಯೇ ಮುಂದುವರಿದಿತ್ತು. ಉದಾಹರಣೆಗೆ, ಗರ್ಭಿಣಿ ಸೇವಿಸುವ ಆಹಾರವಲ್ಲದೇ, ಅವಳ ಯೋಚನೆಗಳೂ ಮಗುವಿನ ಮಾನಸಿಕ ಬೆಳವಣಿಗೆ ಮತ್ತು ಆಸಕ್ತಿಯ ಮೇಲೆ ಪರಿಣಾಮ ಬೀರುತ್ತವೆ ಎಂಬುದು ನಮಗೆ ಎಷ್ಟೋ ತಲೆ ಮಾರುಗಳಿಂದ ಬಂದ ಒಂದು ಸಾಮಾನ್ಯ ಕಲ್ಪನೆ. ಈ ವಿಷಯ ಅಮೇರಿಕಾ ಹಾಗೂ ಇತರ ಮುಂದುವರಿದ ರಾಷ್ಟ್ರಗಳಲ್ಲಿ ಇತ್ತೀಚಿಗೆ ಅರಿವಿಗೆ ಬಂದಿರುವ ವಿಷಯಗಳು. ಹೀಗೆ ಹೇಳುತ್ತಾ ಹೋದರೆ ನನಗೇ ತಿಳಿದಂತೆ ಹಲವಾರು ವಿಜ್ಞಾನ ವಿಷಯಗಳಿವೆ. ನನಗೆ ತಿಳಿಯದ ಸಂಗತಿಗಳು ಇನ್ನೂ ಎಷ್ಟೋ ಇವೆ."

ಇಂತಹ ತಿರುಗು ಬಾಣವನ್ನು ಒಬ್ಬ ಭಾರತೀಯನಿಂದ ನಿರೀಕ್ಷಿಸದ ಕ್ರಿಸ್ ಸ್ವಲ್ಪ ವಿಚಲಿತನಾಗಿ ಕೇಳಿದ.

"ನಿಜವಾಗಿಯೂ? ಹಾಗಿದ್ದರೆ, ಎಷ್ಟು ಜನರಲ್ಲಿ ನೀನು ಹೇಳುವ ವಿಷಯ ಒಂದು ಸಾಮಾನ್ಯ ಕಲ್ಪನೆ? ಇಷ್ಟು ವೈಜ್ಞಾನಿಕ ವಿಷಯ ಜನ ಸಾಮಾನ್ಯನನ್ನು ಮುಟ್ಟುವ ಪರಿಯಾದರೂ ಬೇಡವೇ? ನೀನು ಹೇಳುವದೆಲ್ಲ ಅಜ್ಜಿಯ ಕಥೆಯಂತಿದೆ." ಎಂದು ಹಂಗಿಸಿ ನುಡಿದ.

"ನೀನು ಒಂದು ವಿಷಯವನ್ನು ಸರಿಯಾಗಿ ಹೇಳಿದೆ. ಎಷ್ಟೋ ವಿಜ್ಞಾನದ ವಿಷಯಗಳು ಅಡಕವಾಗಿರುವ 'ವೇದ' ಎನ್ನುವ ಗ್ರಂಥವನ್ನು ಜನ ಸಾಮಾನ್ಯರಿಗಾಗಿ ನಮ್ಮ ಹಿರಿಯರು ಪುರಾಣ ಹಾಗೂ ಪುಣ್ಯ ಕಥೆಗಳ ರೂಪದಲ್ಲೇ ಹೇಳುತ್ತಿದ್ದರು. ಮೇಲೆ ಹೇಳಿದ ಗರ್ಭಿಣಿ ಸ್ತ್ರೀಯರ ವಿಷಯ ಉದಾಹರಣೆಗೆ ಮಹಾಭಾರತದ ಕಥೆಯಲ್ಲಿದೆ. ಅಭಿಮನ್ಯು ತನ್ನ ತಾಯಿ ಸುಭದ್ರೆಯ ಗರ್ಭದಲ್ಲಿರುವಾಗಲೇ ಕೃಷ್ಣ ಹೇಳಿದ ಚಕ್ರವ್ಯೂಹದ ಕಥೆಯನ್ನು ಆಲಿಸಿ ಚಕ್ರವ್ಯೂಹದ ಬಗೆಗೆ ತಿಳಿದುಕೊಂಡ ಹಾಗೂ ಶೂರನಾಗಿ ಬೆಳೆದ ಎಂಬುದು ಸಾಕಷ್ಟು ಪ್ರಚಲಿತವಾಗಿ ತಿಳಿದ ವಿಷಯ. ಹಾಗಿರುವುದರಿಂದಲೆ, ಗರ್ಭವತಿ ಸ್ತ್ರೀ ಸತ್ಸಂಗದಲ್ಲಿದ್ದು ಒಳ್ಳೆಯ ವಿಷಯಗಳನ್ನು ಮನನ ಮಾಡಿಕೊಳ್ಳಲೆಂದು ಅದಕ್ಕನುಸಾರವಾದ ಆಚರಣೆಗಳು ನಮ್ಮಲ್ಲಿ ಇರುವಂತಹುದು."

"ಅಷ್ಟೆಲ್ಲ ವಿಜ್ಞಾನ ಹಾಗೂ ನೀತಿ ಹೊಂದಿದ್ದ ನಿನ್ನ ದೇಶ ಏನಕ್ಕೆ ಇನ್ನೂ ಬಡ ರಾಷ್ಟ್ರವಾಗಿದೆ ಹಾಗೂ ಏನಾಯಿತು ನೀನು ಹೇಳುವ ವಿಜ್ಞಾನದ ಸಂಪತ್ತಿಗೆ ?"

"ನನ್ನ ರಾಷ್ಟ್ರ ಬಡ ರಾಷ್ಟ್ರವಲ್ಲ, ಇದು ನಿನಗೆ ಕಾಣುತ್ತಿರುವ ಒಂದು ಮಧ್ಯಂತರದ ಸ್ಥಿತಿ. ಅದು ಪುನಃ ಮುಂದುವರಿದ ರಾಷ್ಟ್ರವಾಗುತ್ತಿದೆ. ಸಾವಿರಾರು ವರ್ಷಗಳ ಹಿಂದಿನಿಂದ ಜ್ಞಾನ ಹಾಗೂ ಐಶ್ವರ್ಯ ಸಂಪನ್ನವಾದ ನನ್ನ ರಾಷ್ಟ್ರ ಜಗತ್ತಿನ ಕಣ್ಣು ಕುಕ್ಕುತ್ತಿತ್ತು. ಐಶ್ವರ್ಯ ಹಾಗೂ ಜ್ಞಾನ ಸಂಪನ್ನವಾಗಿದ್ದ ನನ್ನ ರಾಷ್ಟ್ರವನ್ನು ಹುಡುಕುತ್ತ ಯೂರೋಪಿನಿಂದ ಬಂದ ಕೊಲಂಬಸ್ ನಮ್ಮ ರಾಷ್ಟ್ರವನ್ನು ತಲುಪಲಾಗದೆ ಬಂದು ಸೇರಿದ್ದು ಅಮೇರಿಕಾವನ್ನು ಎಂದು ನೆನಪಿರಲಿ. ೮೦೦ ವರ್ಷಕ್ಕೂ ಮೀರಿ ಮಹಮದೀಯರ ಹಾಗೂ ೨೫೦ ವರ್ಷಕ್ಕೂ ಮೀರಿ ಬ್ರಿಟಿಷರ ದಾಳಿ ಹಾಗೂ ದುರಾಡಳಿತವನ್ನು ಕಂಡ ನನ್ನ ದೇಶ ಸ್ವಾತಂತ್ರ್ಯದ ನಂತರದ ನಲವತ್ತು ವರ್ಷಗಳ ಕಾಲ ಬಡ ರಾಷ್ಟ್ರವಾಗಿತ್ತು. ಆದರೆ ಈಗ ಆ ಪರಿಸ್ಥಿತಿ ಬದಲ್ಲಾಗುತ್ತಿದೆ."

ಪ್ರಮೋದ್ ಹೇಳುತ್ತಿರುವುದನ್ನು ಪೂರ್ತಿಗೊಳಿಸುವ ಮುಂಚೆಯೇ ಕ್ರಿಸ್ ಮಧ್ಯಂತರದಲ್ಲಿ ನುಡಿದ.

"ಬ್ರಿಟಿಷರು ಆಳಿದ್ದರಿಂದ ಅಲ್ಪ ಸ್ವಲ್ಪ ಆಂಗ್ಲ ಭಾಷೆಯನ್ನಾದರೂ ಮಾತನಾಡುವಷ್ಟು ಸ್ಥಿತಿ ನಿನ್ನ ದೇಶಕ್ಕಿದೆ. ಅದಿಲ್ಲದಿದ್ದರೆ ನೀವು ಅಲ್ಪ ಸ್ವಲ್ಪ ಭಾಷೆ ತಿಳಿದು ನಡೆಸುವ ಕಾಲ್ ಸೆಂಟರ್ ಗಳನ್ನು ನಡೆಸಲೂ ಸಾಧ್ಯವಾಗುತ್ತಿರಲಿಲ್ಲ. ಅದಿಲ್ಲದೇ ಭಾರತದ ಬೆಲೆ ಬರೀ 'ಶೂನ್ಯ'".

ನಸುನಗುತ್ತ ಪ್ರಮೋದ್ ಖಚಿತ ಧ್ವನಿಯಲ್ಲಿ ನುಡಿದ.

"ಶೂನ್ಯವೂ ಜಗತ್ತಿಗೆ ಭಾರತದ ಕೊಡುಗೆ. ಶೂನ್ಯ ಹಾಗೂ ಅನಂತದ ಕಲ್ಪನೆಯೇ ಇಲ್ಲದ ಜಗತ್ತಿಗೆ ಭಾರತ ಈ ಜ್ಞಾನವನ್ನು ಯಾವುದೇ ಪೇಟೆಂಟ್ ಇಲ್ಲದೆ ಧಾರೆ ಎರೆದಿದೆ. ಭಾರತದ ಗಣಿತ, ವಿಜ್ಞಾನ, ಕಲೆ, ಸಾಹಿತ್ಯ ಹಾಗೂ ಸಂಸ್ಕೃತಿಯನ್ನು ಹಾಳುಗೆಡವಿ ಇಡೀ ದೇಶದ ಶೈಕ್ಷಣಿಕ ಪದ್ಧತಿಯನ್ನು ಕೆಡಿಸಿದ ಶ್ರೇಯಸ್ಸು ನಿಜವಾಗಿಯೂ ಬ್ರಿಟಿಷರಿಗೇ ಸೇರಬೇಕು.ಭಾರತೀಯ ಚಿಂತನಾ ಕ್ರಮಕ್ಕೆ ಹೊಂದಿಕೊಂಡಿದ್ದ ನಮ್ಮ ಶೈಕ್ಷಣಿಕ ಪದ್ಧತಿಯು ಬ್ರಿಟಿಷರಿಂದ ಹಾಳುಗೆಟ್ಟಿದ್ದರಿಂದಲೇ ಮೂಢ ನಂಬಿಕೆಗಳು ಹಾಗೂ ಅಂಧ ಶ್ರದ್ಧೆಗಳು ಸಮಾಜದಲ್ಲಿ ಬೆಳೆಯಲು ಕಾರಣವಾಯಿತು ಎನ್ನಬಹುದು." ಎಂದ ಮರುತ್ತರವಾಗಿ.

"ನಿನ್ನ ದೇಶಕ್ಕೆ ಬ್ರಿಟಿಷರನ್ನು ಯುದ್ಧದಲ್ಲಿ ಮಣಿಸಲು ಮತ್ತು ನಿಮ್ಮ ಸಂಪತ್ತನ್ನು ಅವರಿಂದ ರಕ್ಷಿಸಿ ಕೊಳ್ಳಲು ಸಾಧ್ಯವಾಗಲಿಲ್ಲ. ಅದಕ್ಕಾಗಿ ಬ್ರಿಟಿಷರನ್ನು ದೂಷಿಸಿವುದರಲ್ಲಿ ಅರ್ಥವಿಲ್ಲ. ಅದು ಅವರ ಶೌರ್ಯ ಸೂಚಕವಲ್ಲವೇ?"

"ಇಲಿ ಮರಿಯಂತೆ ವ್ಯಾಪಾರಕ್ಕೆ ಬಂದು, ನಮ್ಮ ಅತಿಥಿ ದೇವೋಭವ ಎಂಬ ಮನೋಭಾವವನ್ನು ದುರುಪಯೋಗ ಪಡಿಸಿಕೊಂಡು ಹಿಂದಿನಿಂದ ಬೆನ್ನಿಗೆ ಚೂರಿ ಇರಿದಿದ್ದರಿಂದ ಯುದ್ಧದಲ್ಲಿ ಮಣಿಸಲು ಸಾಧ್ಯವಾಯಿತೇ ಹೊರತು ಸರಿಯಾದ ಯುದ್ಧ ನೀತಿ ಅನುಸರಿಸದ್ದರಿಂದ ಅಲ್ಲ. ಅದಲ್ಲದೆಯೇ, ಒಂದು ಸಭ್ಯ ಸಮಾಜದ ವ್ಯವಸ್ಥೆಯನ್ನು ದುರುಪಯೋಗ ಪಡಿಸಿಕೊಂಡು ಅದನ್ನು ಮೋಸದಿಂದ ವಶಪಡಿಸಿಕೊಳ್ಳುವುದನ್ನು ಶೌರ್ಯವೆನ್ನುವುದಾದರೆ, ಕಳ್ಳತನವನ್ನೂ ಹಾಗೂ ದರೋಡೆಯನ್ನೂ ಶೌರ್ಯವೆಂದಂತೆ. ಬ್ರಿಟಿಷರು ನಡೆಸಿದ ಕೃತ್ಯಗಳನ್ನು ಶೌರ್ಯವೆನ್ನುವುದಾದರೆ, ಕೆಲವು ತಲೆಹಿಡುಕ ವ್ಯಕ್ತಿಗಳು ಸಭ್ಯ ಸಮಾಜದಲ್ಲಿ ಅಮಾಯಕ ವ್ಯಕ್ತಿಗಳ ಮೇಲೆ ನಡೆಸುವ ಭಯೋತ್ಪಾದಕ ಕೃತ್ಯಗಳನ್ನೆಲ್ಲ ಶೌರ್ಯವೆಂದು ಕರೆದಂತಾದೀತು."

ತಾನು ಹೇಳಿದ ವಿಷಯದಲ್ಲಿಯ ನ್ಯೂನತೆಯನ್ನು ಅರಿತ, ಕ್ರಿಸ್ ಮೂಲ ವಿಷಯಕ್ಕೆ ಬಂದ.

"ಅದು ಹಾಗಿರಲಿ, ಅಂಧ ಶ್ರದ್ಧೆಗಳು ತುಂಬಿರುವ ನಿನ್ನ ದೇಶಕ್ಕೂ, ವಿಜ್ಞಾನಕ್ಕೂ ಸಂಬಂಧವಿರುವ ಯಾವ ಪುರಾವೆಗಳೂ

ಕಾಣುವುದಿಲ್ಲ. ಅರ್ಥಹೀನ ಪುರಾಣ ಕಥೆಗಳು, ಆಚರಣೆಗಳು ಮತ್ತು ಮೂಢ ನಂಬಿಕೆಗಳೇ ಸೇರಿಕೊಂಡಿರುವ ನಿಮ್ಮ ಸಮಾಜ ವಿಜ್ಞಾನದಿಂದ ತುಂಬಾ ದೂರದಲ್ಲಿದೆ. ಇದು ಒಪ್ಪಿಕೊಳ್ಳಲೇ ಬೇಕಾದ ಅಂಶ." ಎಂದ ಕ್ರಿಸ್.

"ನಮ್ಮ ದೇಶದಲ್ಲಿ ಹುಟ್ಟಿದ ಎಲ್ಲಾ ವಿಜ್ಞಾನ ವಿಷಯಗಳಿಗೆ ಪುರಾವೆಗಳಿಲ್ಲ ನಿಜ, ಪುರಾವೆಗಳಿದ್ದರೂ ಅದನ್ನು ಅರ್ಥೈಸುವ ಸಾಮರ್ಥ್ಯವನ್ನು ಹೊಂದಿದವರು ಕೆಲವೇ ಕೆಲವರು. ಆದರೆ, ಪುರಾವೆಗಳನ್ನೇ ಹುಡುಕುತ್ತ ಹೋದರೆ ಅದೂ ಸಿಗುತ್ತದೆ. ಉದಾಹರಣೆಗೆ : ಭೂಮಿ ಗೋಳವಾಗಿದೆಯೆಂದು ನಮಗೆ ಗೆಲಿಲಿಯೋಗಿಂತ ತುಂಬಾ ಹಿಂದಿಯೇ ತಿಳಿದಿತ್ತು. ಇದಕ್ಕೆ ಪುರಾವೆಯೆಂದರೆ ಭೂಮಿಗೆ ಸಂಬಂಧ ಪಟ್ಟ ಶಾಸ್ತ್ರವನ್ನು ನಮ್ಮ ದೇಶದಲ್ಲಿ "ಭೂಗೋಳ" ವೆಂದು ಗೆಲಿಲಿಯೋಗಿಂತ ತುಂಬಾ ಮೊದಲೆಯೇ ಕರೆಯುತ್ತಿದ್ದರು. ಅದಲ್ಲದೆಯೇ, ಸಾವಿರಾರು ವರ್ಷಗಳ ಹಿಂದೆ ಕಲ್ಲಿನಲ್ಲಿ ಕೆತ್ತಿರುವ ವಿಷ್ಣುವಿನ ವರಾಹ ಅವತಾರದ ಶಿಲ್ಪ ಕಲೆಗಳಲ್ಲಿ, ಗೋಳಾಕಾರದ ಭೂಮಿಯನ್ನು ಪುರಾವೆಯಾಗಿ ಕಾಣಬಹುದು.

ನಾನು ಆಗಲೇ ನಿನಗೆ ಹೇಳಿದ ಹಾಗೆ ವೇದಗಳನ್ನು ಅರಿಯಲಾಗದ ಜನ ಸಾಮಾನ್ಯರಿಗಾಗಿ, ಕಥೆಯ ರೂಪದಲ್ಲಿ ಪುರಾಣ ಹಾಗೂ ಪುಣ್ಯ ಕಥೆಗಳನ್ನು ಹೇಳಿದ್ದಾರೆ. ಉದಾಹರಣೆಗೆ: ಹಲ್ಲು ಉಜ್ಜಲು ಒಲ್ಲದ ನನ್ನ ಮಗುವನ್ನು ಒಪ್ಪಿಸಲು ನಾನು, ಕಾರ್ಟೂನಿನಲ್ಲಿ ಕಾಣುವಂತಹ ವಿಧ ವಿಧವಾದ ದೈತ್ಯಗಳು ಅವನ ಹಲ್ಲುಗಳ ಮೇಲೂ ಬೆಳೆಯುತ್ತವೆ ಹಾಗಾಗಿ ನಾವು ಅವುಗಳನ್ನು "ಡಿಶುಮ್, ಡಿಶುಮ್" ಮಾಡುವುದಕ್ಕಾಗಿ ಬ್ರಶ್ ಮಾಡಬೇಕೆಂದು ಒಪ್ಪಿಸುತ್ತೇನೆ. ಇದರ ಅರ್ಥ ನಮ್ಮ ಹಲ್ಲುಗಳ ಮೇಲೆ ದೈತ್ಯಗಳು ಬೆಳೆಯುತ್ತವೆ ಅವುಗಳನ್ನು ನಾವು "ಡಿಶುಮ್, ಡಿಶುಮ್" ಮಾಡಬೇಕೆಂದರ್ಥವೆ? ಪುರಾಣಗಳ ಒಳ ಅರ್ಥ ಅರಿಯದೆ, ಮೇಲಿಂದ ಮೇಲೆ ಕೇಳಿ ತಿಳಿದರೆ ಹೀಗೆಯೇ ತಪ್ಪು ತಿಳುವಳಿಕೆ ಬರುವುದು ಸಹಜ.

ಇನ್ನು ನಮ್ಮ ಆಚರಣೆಗಳ ಬಗೆಗೆ ಹೇಳಬೇಕೆಂದರೆ ಅವುಗಳಲ್ಲಿ ಹಲವಾರು ವೈಜ್ಞಾನಿಕ ಅಂಶಗಳಿವೆ. ಉದಾಹರಣೆಗೆ : ಮೂಗು ಹಿಡಿದು ಪ್ರಾಣಾಯಾಮ ಮಾಡಿ ಸಂಧ್ಯಾವಂದನೆ ಅನ್ನುವಂತಹ ಕ್ರಿಯೆ ಮಾಡುವುದು ಒಂದು ಸಮುದಾಯದ ಭಾರತೀಯರಲ್ಲಿ ದಿನದ ಪ್ರಕ್ರಿಯೆ. ಈ ಕೆಲವೇ ವರ್ಷಗಳ ಹಿಂದಿನವರೆಗೂ ಯೋಗ ಹಾಗೂ ಪ್ರಾಣಾಯಾಮವನ್ನು 'ಅರೆ ಬೆತ್ತಲೆ ಭಾರತೀಯರ ಸರ್ಕಸ್' ಎನ್ನುತ್ತಿದ್ದ 'ಮುಂದುವರಿದ ರಾಷ್ಟ್ರಗಳು' ಇಂದು ಎಚ್ಚೆತ್ತುಕೊಂಡು ಯೋಗವನ್ನು ತಮ್ಮದಾಗಿಸಿಕೊಳ್ಳುವೆಡೆಗೆ ಪೈಪೋಟಿ ನಡೆಸುತ್ತಿದ್ದಾರೆ. ಇದು ಮುಂದುವರಿದ ರಾಷ್ಟ್ರಗಳು ಒಪ್ಪಿಕೊಳ್ಳಲೇ ಬೇಕಾದ ಅಂಶ, ಅಲ್ಲವೇ ಕ್ರಿಸ್?" ಪ್ರಮೋದ್ ಮಂದ ಹಾಸದಿಂದ ಸ್ವಲ್ಪ ದೀರ್ಘವಾಗಿಯೇ ನುಡಿದ.

ಪ್ರಮೋದನ ಈ ಉತ್ತರ ಕ್ರಿಸ್ ನನ್ನು ಸ್ವಲ್ಪ ಯೋಚನೆಗುಂಟುಮಾಡಿತು. ತನ್ನ ಅಸಮ್ಮತಿಯನ್ನು ಸೂಚಿಸುತ್ತ ಕಣ್ಣು ಮುಚ್ಚಿ ತಲೆಯಾಡಿಸಿದ ಕ್ರಿಸ್, ಮುಂದುವರೆದ.

"ನೀನೇ ಹೇಳಿದ ಹಾಗೆ ನಿನ್ನ ದೇಶದಲ್ಲಿ ಕಾರಣಗಳನ್ನು ಅರಿಯದೇ ಪುರಾಣಗಳನ್ನೇ ಇತಿಹಾಸವೆಂದು ನಂಬಿ, ಅಂಧ ಶ್ರದ್ಧೆ ಹಾಗೂ ಮೂಢ ಆಚರಣೆಗಳನ್ನು ಸಾಕಷ್ಟು ನಡೆಸುತ್ತಾರಲ್ಲ, ನಿನ್ನ ದೇಶದ ಈ ಪ್ರತಿನಿಧಿತ್ವ ನಿನಗೆ ಒಪ್ಪಿಗೆಯೆ ?" ಈ ಬಾರಿ ಕ್ರಿಸ್‌ನ ಮಾತಿನಲ್ಲಿ ಕೊಂಕು ಸರಿದಿತ್ತು.

"ಹಲವು ವಿಷಯಗಳಲ್ಲಿ ನಾವು ಅಂಧ ಶ್ರದ್ಧರಾಗಿದ್ದೇವೆ. ಅದನ್ನು ಅಲ್ಲಗಳೆಯುವುದಿಲ್ಲ. ಆದರೆ, ಅಂಧ ಶ್ರದ್ಧೆ ಎಂಬ ಹೆಸರಿನಲ್ಲಿ ಭಾರತೀಯ ಚಿಂತನಾ ಕ್ರಮವನ್ನು ಬದಿಗೊತ್ತುವ ಹಾಗೂ ಮೇಲು ಧ್ವನಿಯಲ್ಲಿ ಮಾತನಾಡುವ ಭಾರತೀಯನಿಗೆ ಬುದ್ಧಿಯೇ ಇಲ್ಲವೆಂಬಂತೆ ನಡೆದು ಕೊಳ್ಳುವ ರೀತಿ ನನಗೆ ಒಪ್ಪಿಗೆ ಆಗುವುದಿಲ್ಲ. ನನ್ನ ದೇಶ ಸನಾತನ ಧರ್ಮವನ್ನು ಪ್ರತಿನಿಧಿಸುತ್ತದೆಯೇ ಹೊರತು ಬೇರೇನನ್ನೂ ಅಲ್ಲ. ಸನಾತನ ಧರ್ಮವೆಂದರೆ ಇಂದಿಗೂ ಹಾಗೂ ಎಂದೆಂದಿಗೂ ಅನ್ವಯವಾಗುವ ಸತ್ಯ, ಜ್ಞಾನ, ಪ್ರಾಮಾಣಿಕತೆ, ಅಹಿಂಸೆ, ಸಹಿಷ್ಣುತೆ, ಸಚ್ಚಾರಿತ್ರ್ಯತೆ, ಕರುಣೆ, ವಾತ್ಸಲ್ಯ, ನಿಸ್ವಾರ್ಥತೆ, ಆತಿಥ್ಯ, ಔದಾರ್ಯತೆ ಮತ್ತು ವಿನಮ್ರತೆಗಳನ್ನು ಅಳವಡಿಸಿಕೊಂಡಿರುವ ಜೀವನ ಕ್ರಮ ಎಂದರ್ಥ. ಇವುಗಳನ್ನು ಆಧರಿಸಿ ಪುರಾಣ ಹಾಗೂ ಪುಣ್ಯ ಕಥೆಗಳೂ, ನಮ್ಮ ಆಚರಣೆಗಳೂ ಇರುವಂಥವು."

ಎಲ್ಲವನ್ನೂ ಗಮನವಿಟ್ಟು ಕೇಳುತ್ತಿದ್ದ ಕ್ರಿಸ್ ಗೆ ಪ್ರಮೋದನ ಸನಾತನ ಧರ್ಮದ ಪ್ರತಿನಿಧಿತ್ವದ ಮಾತು ಹೊಸ ಅರಿವು ಉಂಟು ಮಾಡಿದಂತೆ ಕಂಡಿತು. ಆದರೂ, ತಾನು ಪತ್ರಿಕೆ ಹಾಗೂ ಮಾಧ್ಯಮಗಳಲ್ಲಿ ನೋಡಿ ಹಾಗೂ ಕೇಳಿ ತಿಳಿದ ಭಾರತಕ್ಕೂ ಪ್ರಮೋದನ ವಿವರಿಸಿದ ಭಾರತಕ್ಕೂ ವೆತ್ಯಾಸವಿದೆಯೆಂದು ಅರಿವಿಗೆ ಬಂತು. ಆದರೆ, ಯಾವುದನ್ನು ನಂಬುವುದೆಂದು ಅರಿಯದಾದ ಕ್ರಿಸ್ ಊಟ ಮುಗಿಸಿ ಏಳುತ್ತ:

"ಈ ಸಂಭಾಷಣೆಯೇನೋ ಚೆನ್ನಾಗಿತ್ತು, ಆದರೆ ನೀನು ಪ್ರತಿನಿಧಿಸುವ ಭಾರತ ನಾನು ತಿಳಿದ ಭಾರತಕ್ಕಿಂತ ವಿಭಿನ್ನವಾಗಿದೆ. ನೀನು ಹೇಳಿದ ಭಾರತದ ಬಗ್ಗೆ google ಮಾಡಿ ನೋಡುತ್ತೇನೆ.

ನನಗೇನಾದರೂ ವಿಷಯ ತಿಳಿಯಲು ಸಹಾಯ ಬೇಕಾಗಿದ್ದರೆ ನಿನ್ನನ್ನು ಕೇಳಬಹುದಾ?"

"ಖಂಡಿತವಾಗಿಯೂ. ನನಗೆ ತಿಳಿದಷ್ಟು ವಿಷಯವನ್ನು ಹೇಳುತ್ತೇನೆ. ಅದಿಲ್ಲವಾದರೆ ಕೇಳಿ ತಿಳಿದು ಹೇಳುವ ಪ್ರಯತ್ನ ಮಾಡುತ್ತೇನೆ. ನನಗೂ ಒಂದು ಹೊಸ ವಿಷಯದ ಅರಿವಾದಂತಾಗುತ್ತದೆ."

ವಿನಮ್ರ ಭಾವ ಹಾಗೂ ಮಂದ ಹಾಸದಿಂದ ಕೈ ಕುಲುಕುತ್ತ ಕ್ರಿಸ್ ನನ್ನು ಅಲ್ಲಿಂದ ಬೀಳ್ಕೊಟ್ಟ

.

****************************************

**ಇನ್ನೊಬ್ಬರನ್ನು ಜಡ್ಜ್ ಮಾಡುವ ಮುನ್ನ:**

24 ವರ್ಷದ ಮಗ ರೈಲಿನಲ್ಲಿ ತಂದೆಯೊಂದಿಗೆ ಪ್ರಯಾಣ ಮಾಡುತ್ತಿದ್ದ. ಆ ಬೋಗಿಯಲ್ಲಿ ಇನ್ನೂ ಹಲವಾರು ಮಂದಿಯಿದ್ದರು. ಆ ಹುಡುಗ ಕಿಟಿಕಿಯಿಂದ ಹೊರಗೆ ನೋಡಿ 'ಅಪ್ಪಾ ಅಲ್ಲಿ ನೋಡು, ಮರಗಳೆಲ್ಲಾ ಹಿಂದೆ ಓಡುತ್ತಿವೆ' ಎಂದು ಜೋರಾಗಿ ಕಿರುಚಿದ. ಅಪ್ಪ ಮುಗುಳ್ನಕ್ಕ. ಮಗ ಮತ್ತೆ 'ಅಪ್ಪಾ ಅಲ್ಲಿ ನೋಡು ಕಪ್ಪು ಮೋಡಗಳು', 'ಅಪ್ಪಾ ಅಲ್ಲಿ ನೋಡು ಹಸುಗಳು ಮೇಯುತ್ತಿವೆ' ಎಂದು ಉದ್ವೇಗದಿಂದ ಹೇಳುತ್ತಿದ್ದ.

ಅವನ ಬಾಲಿಶ ವರ್ತನೆಯನ್ನು ನೋಡಿ ಉಳಿದವರಿಗೆ ಅನುಕಂಪ ಮೂಡಿತು. ಕೆಲವರು ಮುಸಿಮುಸಿ ನಗತೊಡಗಿದರು. ಅಲ್ಲೇ ಇದ್ದ ಯುವಕನೊಬ್ಬ ಹುಡುಗನ ತಂದೆಯ ಬಳಿ 'ನೀವೇಕೆ ನಿಮ್ಮ ಮಗನನ್ನು ಡಾಕ್ಟರ್ ಬಳಿ ತೋರಿಸಬಾರದು? ಈ ಶಹರದಲ್ಲಿ ನನಗೆ ತಿಳಿದಿರುವ ಒಬ್ಬ ಡಾಕ್ಟರ್ ಇದ್ದಾರೆ' ಎಂದ. ಅದಕ್ಕೆ ಆತನ ತಂದೆ ಹೇಳಿದರು 'ನಾವೀಗ ಆಸ್ಪತ್ರೆಯಿಂದಲೇಬರುತ್ತಿದ್ದೇವೆ. ನನ್ನ ಮಗ ಹುಟ್ಟು ಕುರುಡನಾಗಿದ್ದ. ದೇವರ ದಯೆ ಯಿಂದ ಯಾರೋ ಒಬ್ಬ ಸಹೃದಯರು ಇವನಿಗೆ ಕಣ್ಣು ನೀಡಿದರು. ಇವತ್ತಷ್ಟೇ ಇವನು ಜಗತ್ತನ್ನು ನೋಡುತ್ತಿದ್ದಾನೆ'

ಎಂದರು. ನೀವು ಭೇಟಿಯಾಗುವ ಪ್ರತಿಯೊಬ್ಬ ವ್ಯಕ್ತಿಯ ಹಿಂದೆಯೂ ಒಂದೊಂದು ಕಥೆಯಿರುತ್ತದೆ. ಇನ್ನೊಬ್ಬರನ್ನು ಜಡ್ಜ್ ಮಾಡುವ ಮುನ್ನ ಸ್ವಲ್ಪ ಯೋಚಿಸಿ.

# Believe it or Not



**Leela Rao Hegde,**
**Naperville, IL**

Do you believe in coincidence? Some say there is no such thing. Everything happens for a reason. Things appear random because we do not know how to connect the dots. I subscribe to this theory. Let me see if you agree.

What is the connection between a Mathematician, Madras Port Trust, Cambridge UK, and a Fellowship of the Royal Society of London? Does this appear random to you or do you see a connection? You may have made up a theory but humor me and listen to mine.

A young and idealistic mathematician named his first-born Ramanujan after the famous figure in history of the same name. The historical Srinivas Ramanujan had humble beginnings in India around 1890. He was a school dropout and worked as a clerk at Madras Port trust. He was however, a mathematical genius and his work was exceptional and amazing. He was invited to Cambridge and his work was revealed to the world. He was elected as a Fellow of the Royal Society in 1918.

The present day Ramanujan grew up in the US, did well in school and when he completed MD/PhD, he went into research in cell biology. The proteins that he tracked around the cell got him invited to Cambridge where he continued his pursuit of those pesky (annoying) proteins. He was elected as a Fellow of the Royal Society in 2016.

As proud parents, (you have guessed by now that I am talking about Ramanujan/Manu Hegde), we attended the ceremony and watched him sign the famous fellowship ledger. This ledger carries the signatures of science greats like Newton and Einstein.

That is when it dawned on me! Manu Hegde signing that ledger was no coincidence. He was completing a circle that started the day he received his name! You see when Srinivas Ramanujan was elected fellow, he was too ill to attend the award ceremony.

Our son by signing his name was taking his award and honoring his namesake.

What was I doing in the picture? As Manu's step mom, I can neither claim to have contributed to his genes or even his upbringing. You see he was already grown up when I met him. Those credits go to his mom and dad. (Alternatively, I can buy him some jeans, so I can change the narrative next time around)

Was I just a coincidence? However, there is no such thing as a coincidence? Of course not! Did you know I worked at Madras Port trust for 6 years and may have walked where the great Ramanujan "the man who knew infinity" had walked! (Unfortunately, I did not pick up any math through ambiance). However, I fulfilled a goal and completed the circle in my own way. I have brought a piece of the senior Ramanujan to Manu, thanks to his father of course. Everything is connected and meant to be.

I write this not just to reveal my greatness to you, but also to show you how it can be life changing to follow my example. If you think hard enough, you can figure out how to get a piece of someone else's greatness. In addition, remembering is not half as hard as trying to work for it. Next time you want to claim "we won the world series" think harder and see how you can make the tale to include you more convincingly. Moreover, thank me in your heart of hearts!

# It's More than Just a Robot



**Ankith Adkoli, 16 years**
*Team Unlimited, Sharon*

On a robotics team, one typically thinks that the robot is the center of the team that all members work solely on the robot. This was my initial perception of robotics before I joined FTC or First Tech Challenge, a division of FIRST, an organization devoted to promoting robotics, science and technology for youth. However, what I find is that FTC is much more than robots, the importance of developing skills such as teamwork and communication are all important aspects of a team that FIRST encourages. On my FTC team, we have several divisions devoted to certain aspects of the team. For example, we have hardware, software and design team




who work on the robot, while the documentation, fundraising, and outreach teams work on various activities. What interested me was that the latter did not seem to have as big of a role

with the robot, but were just as important to the team functioning. The presence of these divisions encourages real world skills such as communication,




documentation, and marketing.

In FTC competitions, the importance of the three divisions is greatly emphasized, as one of the first events is a judging session. A judging session consists of a group of FTC officials asking questions to a team regarding the robot and challenges they have overcome. The judges ask to see the documentation binder, or as FIRST calls it, the Engineering Notebook, which has all the challenges and events documented in its contents. During my first competition, I was astounded by the importance of this binder, as it had no direct connection to the robot, but the judges valued it greatly. The judges also ask about outreach activities the team has done in the present season and how they help the community. The responses the judges receive, and the quality of the Engineering Notebook would factor into various awards given out at the end of every competition. These awards could potentially be qualifying awards

and allow the team to move on to competitions. When my team advanced by winning the Inspire Award, for being ‘a model FTC team’, my perception on what robotics was changed as well.FTC robotics allows students to learn the importance of teamwork, innovation and various STEM skills. Through the use of these skills in the real world, students can become leaders and pioneers of new ideas and innovations throughout the world.

*********************************************

**ಮರಕಡಿಯುವವನು:**

ಮರ ಕಡಿಯುವವನೊಬ್ಬ ಟಿಂಬರ್ ವ್ಯಾಪಾರಿಯ ಬಳಿ ಕೆಲಸಕ್ಕೆ ಸೇರಿದ. ವ್ಯಾಪಾರಿ ಆತನಿಗೆ ಬಹಳ ಒಳ್ಳೆ ಸಂಬಳವನ್ನೇ ನೀಡಿದ್ದ. ಅದರಿಂದ ಸಂತುಷ್ಟನಾದ ಮರಕಡಿಯುವವನು ಜೋಶ್‌ನಲ್ಲೇ ಕೆಲಸ ಪ್ರಾರಂಭಿಸಿದ. ಮೊದಲ ದಿನ 18 ಮರಗಳನ್ನು ಕಡಿದು ಮುಗಿಸಿದ. ಬಹಳ ಒಳ್ಳೆಯ ಕೆಲಸಗಾರ ಎಂದು ಮಾಲೀಕನಿಂದ ಬೆನ್ನು ತಟ್ಟಿಸಿಕೊಂಡ. ಇದರಿಂದ ಪ್ರೇರಿತನಾದ ಆತ ಮರುದಿನವೂ ಬಹಳ ಕಷ್ಟಪಟ್ಟು, ಬೆವರು ಸುರಿಸಿ ಕೆಲಸ ಮಾಡಿದ. ಆದರೆ ಅವತ್ತು ಅವನು ಕೇವಲ 15 ಮರಗಳನ್ನು ಕಡಿಯುವಲ್ಲಿ ಯಶಸ್ವಿಯಾದ. ಮೂರನೇ ದಿನ 10 ಮರ ಕಡಿಯುವಷ್ಟರಲ್ಲಿ ಕತ್ತಲಾಯಿತು. ದಿನದಿಂದ ದಿನಕ್ಕೆ ತನ್ನ ಸಾಮರ್ಥ್ಯ ಕುಗ್ಗುತ್ತಿದೆ ಎಂದು ತಿಳಿದು

ಅವನು ಗಾಬರಿಯಾದ. ‘ನಾನು ಶಕ್ತಿ ಕಳೆದುಕೊಳ್ಳುತ್ತಿದ್ದೇನೆ. ನನಗೆ ಮೊದಲಿನಂತೆ ಕೆಲಸ ಮಾಡಲಾಗುತ್ತಿಲ್ಲ’ ಎಂದು ಮಾಲೀಕನಲ್ಲಿ ಹೇಳಿದ.

ಮಾಲೀಕ ನಸುನಗುತ್ತಾ ಕೇಳಿದ-‘ನೀನು ನಿನ್ನ ಕೊಡಲಿಗೆ ಕೊನೆಯ ಬಾರಿಗೆ ಸಾಣೆ ಹಿಡಿದಿದ್ದು ಯಾವಾಗ?’ ‘ಸಾಣೆ ಹಿಡಿದಿದ್ದೇ? ನನಗೆ ಅದಕ್ಕೆ ಸಮಯವೇ ಇರಲಿಲ್ಲ. ನಾನು ಮರ ಕಡಿಯುವುದರಲ್ಲಿ ಮಗ್ನನಾಗಿದ್ದೆ’ ಎಂದ ಮರಕಡಿಯುವವನು.

ನಾವಿಂದು ಎಷ್ಟು ಬಿಜಿಯಾಗಿಬಿಟ್ಟಿದ್ದೇವೆಂದರೆ ಕೆಲವು ಅತಿ ಮುಖ್ಯ ವಿಚಾರಗಳ ಬಗ್ಗೆ ಗಮನ ಹರಿಸುವ ವ್ಯವಧಾನವೂ ನಮ್ಮಲ್ಲಿಲ್ಲವಾಗಿದೆ. ಬದುಕಿನ ಜಂಜಾಟದಲ್ಲಿ ಮುಳುಗಿದ ನಮಗೆ ಆರೋಗ್ಯ, ಸ್ನೇಹ-ಸಂಬಂಧ, ಮನಶ್ಶಾಂತಿ, ಮಾನವೀಯತೆ ಮುಂತಾದ ಮುಖ್ಯ ವಿಚಾರಗಳಿಗೆ ಸಮಯವೇ ಇಲ್ಲವಾಗಿದೆಯಲ್ಲವೆ? ಹಾಗಾದರೆ ಈಗ ಹೇಳಿ, ನೀವು ನಿಮ್ಮ ಆಯುಧವನ್ನು ಕೊನೆಯ ಬಾರಿ ಸಾಣೆ ಹಿಡಿದಿದ್ದೆಂದು?

# Interview with My Ajja



**Sarah Hegde**
**Spokane, WA Age 12**

*[<u>Notes from Shankar Hegde:</u> During the summer of 2015, we visited our son Raju's family in Spokane. One day I asked my granddaughter Sarah, who was 10 years old at that time, to interview me so she gets to know me better. She was excited. She went to her room, and in a few minutes came down to interview me with a set of questions. She started asking her questions one by one and took notes. When finished, she went back to her room again and within an hour wrote the following essay. Here is typed version of her hand-written set of questions and the essay. It is typed exactly as written with no correction. A sample page in her own handwriting is inserted.]*

*Interview Questions:*

1. What was your favorite subject in school? (SL)
2. Did you enjoy going to school then? (SL)
3. Did you like all your teachers? (SL)
4. Did you go to college and if so which college did you go to and where? (SL)
5. Was one of the things that inspired you to be a teacher was going to school growing up? (SL)

1. How many brothers and sisters do you have? (HL)
2. Did all your brothers and sisters go to school with you? (HL)
3. How old were you when you burnt your foot? (HL)
4. What were your parent's names and what did they do for living? (HL)

<u>Interview Report</u>

Today I interviewed my Ajja. You get to learn about his school life, his childhood, and 5 fun facts about him. After reading this, I hope you are inspired to interview someone in your family.

First, school life. My Ajja's favorite subject is math. He loves math very much. When he was younger, he enjoyed going to school. There was no big pressure to get good grades in India. The school my Ajja went to through 4th grade was very very old. His father went to the same school growing-up. It had one teacher and one room. My Ajja always liked his teachers because everyone was to always respect them. No one ever whether or not they liked their teachers. My Ajja went to college in a town called Sirsi for 2 years. Lucky for him, a new college was opening in Sirsi and Ajja was one of the first ones to try it out. Then he decided he wanted to go to a bigger college.



First, school life. My Ajja's favorite subject is math. He loves math very much. When he was younger, he enjoyed going to school. There was no big pressure to get good grades in India. the school my Ajja went to through 4th grade was very very old. His father went to the same school growing-up. It had one teach and one room My Ajja always liked his teacher because everyone was to always respect them. No one ever whether or not they liked their teachers. My Ajja went to college in a town called Sirsi for 2 years. Then he decided he wanted to go to a bigger college. Lucky for him, a bigger college was opening, and was one of the first ones to try it out. Evently, he graduated out of the bigger college. In India, when he was growing-up, the only role-modles whese teachers. This may be one of the reasons he became a teacher when he got older. So now you know some facts on my Ajja's school life.

Eventually he graduated out of the bigger college. In India, when he was growing-up, the only role-models were teachers. This may be one of the reasons he became a teacher when he got older. So now you know some facts on my Ajja's school life.

Next, home life. My Ajja has 4 siblings, he the youngest out of the 5. His brothers and sisters did not go to past the 4th grade because there was no school past that. They only worked on the farm. He was the only one to go to school past 4th grade. He burned his foot at about 11 months of age, just as he was learning to walk. His parents worked on the farm and their names were Timmayya and Ganga. My Ajja was born on June 6th, 1943, so when he was born, England still ruled India. Now you know all about my Ajja's childhood.

Finally, fun facts. My Ajja now lives in Naperville IL, just outside of Chicago. He loves to eat Indian food, mango, banana, and pineapple. He has no pets, and sometimes goes back to teach classes. He enjoys his life very much. Now you know a couple of fun facts about my Ajja.

In conclusion, I have covered school life, childhood, and some fun facts about him. I hope you learned a couple of things about a very interesting man!

**ಸಂತೋಷ ಯಾವುದರಲ್ಲಿ?**

ಅಪ್ಪ ಮತ್ತು ಹತ್ತು ವರ್ಷದ ಮಗ ಹಳ್ಳಿ ರಸ್ತೆಯಲ್ಲಿ ನಡೆದು ಹೋಗುತ್ತಿದ್ದರು. ದಾರಿ ಪಕ್ಕದಲ್ಲಿ ಒಂದು ಹೊಲ ಸಿಕ್ಕಿತು. ಅಲ್ಲಿ ಹಳೆಯದಾಗಿ ಕೆಸರು ಮೆತ್ತಿಕೊಂಡಿದ್ದ ಒಂದು ಜೊತೆ ಶೂ ಬಿದ್ದು ಕೊಂಡಿತ್ತು. ಹೊಲದೊಳಗೆ ಕೆಲಸ ಮಾಡುತ್ತಿರುವ ರೈತನ ಶೂ ಅದೆಂದು ಗೊತ್ತಾಗುತ್ತಿತ್ತು. ಅದನ್ನು ನೋಡಿದ ಸಣ್ಣ ಹುಡುಗನಿಗೆ ಕೀಟಲೆ ಮಾಡಬೇಕು ಎಂದು ಅನಿಸಿತು. 'ಅಪ್ಪಾ ನಾವು ಈ ಶೂಗಳನ್ನು ಪೊದೆಯೊಳಗೆ ಅಡಗಿಸಿಡೋಣ. ರೈತ ಬಂದು ಶೂ ಇಲ್ಲದೇ ಇರುವುದನ್ನು ನೋಡಿ ಪರದಾಡುವುದನ್ನು ನೋಡಲು ಮಜಾ ಬರುತ್ತದೆ' ಎಂದ.

ಅಪ್ಪನಿಗೆ ಮಗನ ಮಾತು ಕೇಳಿ ಬೇಸರವಾಯ್ತು. ಆದರೂ ತೋರಿಸಿಕೊಳ್ಳದೆ 'ಮಗೂ, ಈ ಹಳೆಯ ಶೂಗಳನ್ನು ನೋಡಿದರೆ ಆ ರೈತ ಬಹಳ ಬಡವನೆಂದು ಕಾಣಿಸುತ್ತದೆ. ಬಡವನಿಗೆ ತೊಂದರೆ ಕೊಟ್ಟು ಅದರಲ್ಲಿ ಆನಂದ ಪಡುವುದು ಕ್ರೂರತನ. ಆದರೆ ನನ್ನಲ್ಲಿ ಇನ್ನೊಂದು ಉಪಾಯವಿದೆ. ಹಾಗೆ ಮಾಡಿದರೂ ನಿನಗೆ ಸಂತೋಷ ಸಿಗುತ್ತದೆ' ಎಂದ. ಮಗನಿಗೆ ಅಪ್ಪ ಹೇಳುತ್ತಿರುವುದು ಸರಿಯಾಗಿ ಅರ್ಥವಾಗಲಿಲ್ಲ. ಮುಂದುವರಿಸಿದ ತಂದೆ, 'ನಾವು ಆತನ ಎರಡೂ ಶೂಗಳೊಳಗೆ ನಾಣ್ಯಗಳನ್ನು ಹಾಕೋಣ. ಕೆಲಸ ಮುಗಿಸಿ ಹೊರಡುವಾಗ ಶೂ ಒಳಗೆ ಹಣ ನೋಡಿದ ಅವನ ವರ್ತನೆ ಹೇಗಿ ರುತ್ತದೆಂದು ಮರೆಯಲ್ಲಿ ನಿಂತು ನೋಡೋಣ ಆಗದೆ?' ಎಂದು ಕೇಳಿದ. ಮಗನಿಗೂ ಇದು ಹಿಡಿಸಿತು. ಎರಡೂ ಶೂ ಒಳಗೆ ನಾಣ್ಯಗಳನ್ನು ಹಾಕಿ ಇಬ್ಬರೂ ಮರೆಯಲ್ಲಿ ನಿಂತು ಗಮನಿಸತೊಡಗಿದರು. ರೈತ ಕೆಲಸ ಮುಗಿಸಿ ವಾಪಸಾದ. ಶೂ ಧರಿಸಿ ಹೊರಡ ಬೇಕೆಂದುಕೊಂಡವನ ಕಾಲಿಗೆ ಏನೋ ತಾಕಿದಂತಾ ಯಿತು. ಏನೆಂದು ನೋಡಿದರೆ ನಾಣ್ಯಗಳು! ಅವನಿಗೆ ಆಶ್ಚರ್ಯವಾಯಿತು. ಅದನ್ನು ಕೈಯಲ್ಲಿ ಹಿಡಿದು ಸುತ್ತಲೂ ನೋಡಿದ, ಯಾರೂ ಇರಲಿಲ್ಲ. ಅದನ್ನು ಕಿಸೆಯೊಳಗೆ ಸೇರಿಸಿದ. ಇನ್ನೊಂದು ಶೂ ಧರಿಸುವಾಗಲೂ ಆತನಿಗೆ ನಾಣ್ಯಗಳು ಸಿಕ್ಕವು. ಅದನ್ನು ನೋಡಿ ಆತನ ಕಣ್ಣುಗಳಲ್ಲಿ ನೀರು ಜಿನುಗಿತು!

ಆತ ಆಕಾಶಕ್ಕೆ ಕೈ ಮುಗಿದು 'ಅಯ್ಯಾ ದೇವರೆ! ನೀನೆಷ್ಟು ದಯಾಳು. ಇಲ್ಲಿ ನಾಣ್ಯಗಳನ್ನಿಟ್ಟ ಪುಣ್ಯಾತ್ಮರು ಯಾರೋ ತಿಳಿಯದು. ಈ ನಾಣ್ಯಗಳನ್ನು ನಾನು ಇಟ್ಟುಕೊಳ್ಳುವುದೂ ತಪ್ಪಾಗಬಹು ದೇನೋ! ಆದರೆ ನನಗೆ ಹಣದ ಅವಶ್ಯವಿದೆ. ಈ ದುಡ್ಡಿನಿಂದ ನಾನು ಕಾಯಿಲೆ ಬಿದ್ದಿರುವ ಹೆಂಡತಿಗೆ ಔಷಧ ತೆಗೆದುಕೊಂಡು ಹೋಗುತ್ತೇನೆ. ಹಣಕ್ಕಾಗಿ ಏನು ಮಾಡುವುದೋ ಎಂದು ಚಿಂತಿಸುತ್ತಿದ್ದ ನನಗೆ ನೀನೇ ದಾರಿ ತೋರಿಸಿದ್ದೀಯ' ಎಂದು ನಾಣ್ಯಗಳನ್ನು ಕಣ್ಣಿಗೊತ್ತಿಕೊಂಡು ಅಲ್ಲಿಂದ ಹೊರಟು ಹೋದ. ಮರೆಯಲ್ಲಿ ನಿಂತು ಇವನ್ನೆಲ್ಲ ನೋಡುತ್ತಿದ್ದ ಮಗ ಅಪ್ಪನನ್ನು ತಬ್ಬಿಕೊಂಡು ಜೋರಾಗಿ ಅತ್ತು ಬಿಟ್ಟ. ಆಗ ಅಪ್ಪ 'ಈಗ ಹೇಳು ಖುಷಿ ಯಾವುದರಲ್ಲಿದೆ? ಆತನ ಶೂಗಳನ್ನು ಅಡಗಿಸಿಟ್ಟು ಪರದಾಟ ನೋಡುವುದರಲ್ಲೋ, ಕಷ್ಟದಲ್ಲಿದ್ದವನಿಗೆ ಕೈಲಾದ ಸಹಾಯ ಮಾಡುವುದರಲ್ಲಿಯೋ?' ಎಂದು ಕೇಳಿದ. ಈಗ ನೀವೇ ಹೇಳಿ ಯಾವುದರಲ್ಲಿದೆ ಆತ್ಮ ತೃಪ್ತಿ?

# ರಾಜಕಾರಣದಲ್ಲಿ ಸ್ತ್ರೀಯರು



ಸರಸ್ವತಿ ಶಂಕರ್
ಬೆಂಗಳೂರು

ಇತ್ತೀಚೆಗೆ ದೂರದರ್ಶನದಲ್ಲಿ ಮಹಿಳಾ ರಾಜಕಾರಣಿಯೋರ್ವರ ಸಂದರ್ಶನವನ್ನು ವೀಕ್ಷಿಸುತ್ತಿದ್ದೆ. ಮಹಿಳೆಯರು ರಾಜಕೀಯ ರಂಗಕ್ಕೆ ಕಾಲಿರಿಸಲು ಹಿಂಜರಿಯುತ್ತಿದ್ದಾರೆ, ಅವರು ಹೆಚ್ಚು ಹೆಚ್ಚಾಗಿ ರಾಜಕೀಯ ಸೇರುವಂತಾಗಬೇಕಾದರೆ ಏನು ಮಾಡಬೇಕು ಎಂದು ಸಂದರ್ಶನಕಾರರು ಕೇಳುತ್ತಿದ್ದ ಪ್ರಶ್ನೆಗಳಿಗೆ ರಾಜಕಾರಣಿ ಉತ್ತರಿಸುತ್ತಿದ್ದರು. ಸ್ತ್ರೀಯರು ಸಮಾಜ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕು, ಕೆಲಸ ಮಾಡಲು ಸೂಕ್ತವಾದ ಪರಿಸರವಿಲ್ಲದಿದ್ದರೂ ಅಂಥ ವಾತಾವರಣವನ್ನು ನಿರ್ಮಿಸಿಕೊಳ್ಳಬೇಕು ಮುಂತಾದ ಸಲಹೆಗಳನ್ನು ಅವರು ನೀಡುತ್ತಿದ್ದರು. ಅವರ ಸಲಹೆಗಳನ್ನು ಕೇಳಿ ನನಗೆ ನಗು ಬಂತು, ಖೇದವೂ ಆಯಿತು. ನಮ್ಮ ದೇಶದಲ್ಲಿ ಒಬ್ಬ ಸಾಮಾನ್ಯ ಮಹಿಳೆಗೆ ರಾಜಕೀಯಕ್ಕೆ ಸೇರುವುದು, ಅದರಲ್ಲಿ ಉತ್ತುಂಗಕ್ಕೇರುವುದು ಅಷ್ಟೊಂದು ಸುಲಭವೇ ಎಂಬ ವಿಚಾರ ನನ್ನ ತಲೆಯನ್ನು ಚಿಂತನೆಗೆ ಹಚ್ಚಿತು.

ರಾಜಕೀಯದಲ್ಲಿ ವಿಶ್ವಮಾನ್ಯತೆ ಪಡೆದು ವಿಜೃಂಭಿಸಿದ ಅನೇಕ ಮಹಿಳಾ ನಾಯಕಿಯರಿದ್ದಾರೆ. ನೆಹರೂ ಮನೆತನದಲ್ಲಿ ಜನಿಸಿದ ಇಂದಿರಾ ಗಾಂಧಿ ಭಾರತದ ಪ್ರಧಾನಿಯಾಗಿ ದೇಶವನ್ನು ಸುಮಾರು ಎರಡು ದಶಕಗಳ ಕಾಲ ಚಕ್ರವರ್ತಿನಿಯಂತೆ ಆಳಿದವರು. ಹನ್ನೊಂದು ವರ್ಷಗಳ ಕಾಲ ಬ್ರಿಟನಿನ ಪ್ರಧಾನಿಯಾಗಿದ್ದ ಮಾರ್ಗರೆಟ್ ಥ್ಯಾಚರ್ ಬ್ರಿಟನಿನ ಉಕ್ಕಿನ ಮಹಿಳೆಯೆಂದೇ ಕರೆಸಿಕೊಂಡಿದ್ದಾರೆ. ಹಾಗೆಯೇ, ಇಸ್ರಾಯೆಲ್ ದೇಶದ ಉಕ್ಕಿನ ಮಹಿಳೆಯೆನಿಸಿಕೊಂಡವರು ಅಲ್ಲಿನ ನಾಲ್ಕನೇ ಪ್ರಧಾನಿ ಗೋಲ್ಡಾ ಮಾಯರ್. ಜರ್ಮನಿಯ ಚಾನ್ಸೆಲರ್ ಏಂಜೆಲಾ ಮೆರ್ಕೆಲ್ ಜಗತ್ತಿನ ಅತ್ಯಂತ ಪ್ರಭಾವೀ ಮಹಿಳೆ ಎನಿಸಿಕೊಂಡಿದ್ದಾರೆ. ದಕ್ಷಿಣ ಕೊರಿಯಾದ ಪ್ರಥಮ ಮಹಿಳಾ ಅಧ್ಯಕ್ಷೆ ಪಾರ್ಕ್ ಗುನ್ ಹೇ ಇತ್ತೀಚೆಗೆ ಪದಚ್ಯುತಿಗೊಂಡರೂ, ದೇಶದ ಸಮಗ್ರತೆಗಾಗಿ ಹೋರಾಡಿದವರು. ಮ್ಯಾನ್ಮಾರಿನ ಮಿಲಿಟರಿ ಆಡಳಿತವನ್ನು ಕೊನೆಗಾಣಿಸಲು ಹೋರಾಡಿ ಅಲ್ಲಿನ "ಲೀಗ್ ಫಾರ್ ಡೆಮೊಕ್ರಸಿ"ಯ ನಾಯಕಿಯಾದ ಆಂಗ್ ಸಾನ್ ಸೂಕೀ, ದೇಶದ ಸಚಿವ ಸಂಪುಟದಲ್ಲಿ ವಿವಿಧ ಹುದ್ದೆಗಳನ್ನು ಅಲಂಕರಿಸಿದವರು. ಇನ್ನು ಬ್ರಿಟನಿನ ಈಗಿನ ಪ್ರಧಾನಿ ತೆರೆಸಾ ಮೇ, ಥಾಯ್ಲೆಂಡಿನ ಪ್ರಥಮ ಮಹಿಳಾ ಪ್ರಧಾನಿ ಯಿಂಗ್ಲಕ್ ಶಿನವತ್ರಾ, ಬ್ರೆಜಿಲಿನ ಪ್ರಥಮ ಮಹಿಳಾ ಅಧ್ಯಕ್ಷೆ ದಿಲ್ಮಾ ರೂಸೆಫ್, ಬಾಂಗ್ಲಾದ ಶೇಕ್ ಹಸೀನಾ, ಶ್ರೀಲಂಕಾದ ಪ್ರಥಮ ಮಹಿಳಾ ಪ್ರಧಾನಿಯಾಗಿದ್ದ ಸಿರಿಮಾವೋ ಭಂಡಾರನಾಯಕೆ ಮುಂತಾದವರು ಜಾಗತಿಕ ಮಟ್ಟದಲ್ಲಿ ಹೆಸರು ಗಳಿಸಿದವರೇ. ಅಮೇರಿಕದ ಅಧ್ಯಕ್ಷೆಯಾಗದಿದ್ದರೂ ಚುನಾವಣೆಯ ಅಂತಿಮ ಘಟ್ಟಕ್ಕೆ ತಲುಪಿದ ಹಿಲರೀ ಕ್ಲಿಂಟನ್ ಮತ್ತು ಭಾರತದ ಪ್ರಧಾನಿಯಾಗದೇ ಇದ್ದರೂ ಕಾಂಗ್ರೆಸ್ ಪಕ್ಷದ ಅಧ್ಯಕ್ಷೆಯಾಗಿ ಸರಕಾರವನ್ನು ತನ್ನ ಹತೋಟಿಯಲ್ಲಿ ಇಟ್ಟುಕೊಂಡಿದ್ದ ಸೋನಿಯಾ ಗಾಂಧಿ ಕೂಡಾ ಈ ಪಟ್ಟಿಯಲ್ಲಿ ಸೇರುತ್ತಾರೆ.

ಆದರೆ ನೂರಮೂವತ್ತು ಕೋಟಿ ಜನಸಂಖ್ಯೆಯಿರುವ ನಮ್ಮ ದೇಶದ ರಾಜಕೀಯದ ಅವಲೋಕನ ಮಾಡಿದರೆ, ಉನ್ನತ ಮಟ್ಟಕ್ಕೇರಿದ ಸ್ತ್ರೀಯರು ಕೇವಲ ಬೆರಳೆಣಿಕೆಯಷ್ಟೇ ಎನ್ನಬಹುದು. ಪ್ರಧಾನಿ ಆಗಿದ್ದ ಇಂದಿರಾ ಗಾಂಧಿ ಅಲ್ಲದೆ, ರಾಜ್ಯ ಮಟ್ಟದಲ್ಲಿ, ಜಯಲಲಿತಾ, ಮಾಯಾವತಿ, ಮಮತಾ ಬ್ಯಾನರ್ಜಿ, ವಸುಂಧರಾ ರಾಜೇ ಅರಸ್, ಶೀಲಾ ದೀಕ್ಷಿತ್ ಮುಂತಾದವರು ಮಹಿಳಾ ಮುಖ್ಯಮಂತ್ರಿಗಳಾಗಿ ಆಡಳಿತ ನಡೆಸಿದ್ದಾರೆ. ಹೀಗಿದ್ದರೂ, ಇವರೆಲ್ಲ ತಮ್ಮ ಸ್ವಸಾಮರ್ಥ್ಯದಿಂದಲೇ ಅಧಿಕಾರಕ್ಕೆ ಬಂದವರು ಎನ್ನಲಾಗುವುದಿಲ್ಲ. ಇವರು ತಮ್ಮ ಕುಟುಂಬದ ಪರಂಪರೆಯ ಬಲವನ್ನುಪಯೋಗಿಸಿಕೊಂಡು ಮೇಲೆ ಬಂದವರು. ಒಬ್ಬ ಸಾಮಾನ್ಯ ಮಧ್ಯಮ ವರ್ಗದ ಸ್ತ್ರೀಗೆ ರಾಜಕೀಯಕ್ಕಿಳಿಯುವುದು ಸುಲಭದ ಕೆಲಸವಲ್ಲ. ಯಾವುದಾದರೂ ಸಣ್ಣ ಸ್ಥಾನಕ್ಕೆ ಸ್ಪರ್ಧಿಸಬೇಕಾದರೂ, ಪುರುಷರ ಬೆಂಬಲ ಅವಳಿಗೆ ಬೇಕೇ ಬೇಕು. ಹೀಗೆ ಇತರರ ಸಹಾಯದಿಂದ ಗೆದ್ದಳೆಂದಾದರೆ, ನಂತರ ಅವಳಿಗೆ ಅವರ ಕೈಗೊಂಬೆಯಾಗಿರಬೇಕಾದ ಅನಿವಾರ್ಯತೆ ಉಂಟಾಗುತ್ತದೆ.

ಪಾಶ್ಚಾತ್ಯ ದೇಶಗಳಲ್ಲಿ ಮಹಿಳೆಯರು ಮಧ್ಯರಾತ್ರಿ ಕೂಡಾ ಒಬ್ಬಂಟಿಯಾಗಿ ಓಡಾಡುತ್ತಾರೆ. ರಾತ್ರೆ, ಬೆಳಗಿನ ಜಾವ ಎಂಬ ಭೇದವಿಲ್ಲದೆ ನಿರ್ಭೀತಿಯಿಂದ ವಾಕಿಂಗ್ ಮಾಡುತ್ತಾರೆ. ಆದರೆ ಇಲ್ಲಿ ಅದು ಸಾಧ್ಯವೇ? ವಾಕಿಂಗ್ ಬಿಡಿ, ಮನೆ ಮುಂದೆ ರಂಗೋಲಿ ಹಾಕುತ್ತಿದ್ದ ಮಹಿಳೆಯ ಕತ್ತಿನಿಂದ ಸರ ಅಪಹರಣವಾದ ಪ್ರಕರಣ ಕೂಡಾ ಇಲ್ಲಿ ಇದೆ. ರಾತ್ರೆ ಹೊತ್ತು ರಸ್ತೆಗಳಲ್ಲಿ ನಿರ್ಭಿಡೆಯಿಂದ ಸಂಚರಿಸಲು ನಮ್ಮಲ್ಲಿ ಮಹಿಳೆಯರಿಗೆ ಸಾಧ್ಯವಿಲ್ಲ. ರಾತ್ರೆಯಾಗುವ ಮುನ್ನ ಮನೆ ಸೇರಬೇಕೆಂಬ ಮಟ್ಟಿಗೆ ಅಭದ್ರತೆ ಅವರನ್ನು ಕಾಡುತ್ತದೆ. ನಿಶಾಚರಿ ಬಸ್ಸುಗಳಲ್ಲಿ ಕೂಡಾ ಪ್ರಯಾಣ ಪೂರ್ತಿ ಸುರಕ್ಷಿತ ಎನ್ನುವ ಹಾಗಿಲ್ಲ.

ಇನ್ನು ಗ್ರಾಮೀಣ ಭಾರತದ ಪರಿಸ್ಥಿತಿಯನ್ನು ಅವಲೋಕಿಸಿದರೆ, ಅಲ್ಲಿನ ಸ್ತ್ರೀಯರು ನಾನಾ ರೀತಿಯ ಶೋಷಣೆಗೊಳಗಾಗುವುದನ್ನು ನಾವು ಕಾಣುತ್ತೇವೆ. ಇಂಥ ಮಹಿಳೆಯರು ಪಂಚಾಯತ್ ಮಟ್ಟದ ಚುನಾವಣೆಯಲ್ಲಾದರೂ ಸ್ಪರ್ಧಿಸಿ ಗೆಲ್ಲಲು ಸಾಧ್ಯವೇ? ನಾಲ್ಕು ಗೋಡೆಗಳ ಮಧ್ಯೆ ಕೂಪಮಂಡೂಕದಂತೆ ಬೆಳೆದ ಸ್ತ್ರೀ, ತನ್ನ ಗಂಡ ಮತ್ತು ಮನೆಯವರ ಬೆಂಬಲವಿಲ್ಲದೆ ಹೇಗೆ ಮನೆಯಿಂದ ಹೊರಬಂದು ಚುನಾವಣಾ ಕಣಕ್ಕೆ ಇಳಿಯಬಲ್ಲಳು? ಮಹಿಳಾ ಮೀಸಲಾತಿ ಇರುವುದರಿಂದ, ಈಗ ಕೆಲವು ಗ್ರಾಮೀಣ ಸ್ತ್ರೀಯರು ಕೂಡಾ ಚುನಾವಣೆಗಿಳಿಯುವಂತಾಗಿದೆ.

ರಾಜಕೀಯದಲ್ಲಿ ಹಂತಹಂತವಾಗಿ ಮೇಲೇರಬೇಕಾದರೆ, ಮೊದಲು ಮಹಿಳೆ ತನಗಿಷ್ಟವಾದ ಪಕ್ಷವನ್ನು ಗುರುತಿಸಿಕೊಂಡು, ಅದರ ಪ್ರಾಥಮಿಕ ಸದಸ್ಯತ್ವವನ್ನು ಪಡೆದುಕೊಳ್ಳಬೇಕು. ನಂತರ ಸುತ್ತುಮುತ್ತಲಿನ ಜನರ ಸಮಸ್ಯೆಗಳನ್ನು ತಿಳಿದುಕೊಂಡು ಅವುಗಳ ಪರಿಹಾರಕ್ಕಾಗಿ ಶ್ರಮಿಸುವುದು ಅಗತ್ಯ. ಇತರರೊಂದಿಗೆ ಬೆರೆತು, ಜನಸೇವೆಯಲ್ಲಿ ತನ್ನನ್ನು ತೊಡಗಿಸಿಕೊಂಡು, ಕೆಲವು ಕಡೆ ಸಕಾರಾತ್ಮಕವಾಗಿ ತನ್ನನ್ನು ಬಿಂಬಿಸಿಕೊಂಡಾಗ, ಅವಳಿಗೆ ತನ್ನದೇ ಆದ ಛಾಪು ಮೂಡುತ್ತದೆ. ಈ ರೀತಿ ಚಿಗುರಿಕೊಳ್ಳುವ ಹಂತವೇ ಬಲು ಕಠಿಣವಾದುದು. ಒಮ್ಮೆ ಹೆಸರು ಬಂತೆಂದರೆ ಮತ್ತೆ ಆ ಊರಿನಲ್ಲಿ ಇತರರ ಹಂಗಿಲ್ಲದೆ ಚುನಾವಣೆ ಗೆಲ್ಲುವುದು ಸಾಧ್ಯವಾಗುತ್ತದೆ.

ಒಂದು ಆರೋಗ್ಯಕರ ಸಮಾಜ ನಿರ್ಮಾಣವಾಗಬೇಕಾದರೆ, ಪುರುಷರಂತೆ ಸ್ತ್ರೀಯರೂ ರಾಜಕೀಯದಲ್ಲಿ ಸಬಲೀಕರಣ ಹೊಂದುವುದು ಅಗತ್ಯ. ತಾಳ್ಮೆ, ಸಾಮಾಜಿಕ ಕಳಕಳಿ, ಹೃದಯ ವೈಶಾಲ್ಯತೆ ಮುಂತಾದ ಸ್ವಾಭಾವಿಕ ಸದ್ಗುಣಗಳಿಂದ, ಮಹಿಳೆಯರು ಯಾವುದೇ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸಬಲ್ಲರು. ತಮಿಳುನಾಡಿನಂಥ ಜನನಿಬಿಡ ಪ್ರಾಂತ್ಯದಲ್ಲಿ, ಅತ್ಯಂತ ಜನಪ್ರಿಯ ಮುಖ್ಯಮಂತ್ರಿಯಾಗಿ ರಾಜ್ಯಭಾರ ಮಾಡಿದ ಜಯಲಲಿತಾ ಇದಕ್ಕೆ ಉದಾಹರಣೆ.

ಕೊನೆಗಾಣದ ಕುಟುಂಬ ರಾಜಕೀಯ ಹಾಗೂ ಸ್ವಜನ ಪಕ್ಷಪಾತ ನಮ್ಮ ದೇಶದ ರಾಜಕಾರಣವನ್ನು ಹದಗೆಡಿಸಿಬಿಟ್ಟಿದೆ. ನೆಹರೂ ಕುಟುಂಬದಿಂದ ಹಿಡಿದು ಶೇಕ್ ಅಬ್ದುಲ್ಲಾ, ಮುಲಾಯಂ ಸಿಂಗ್ ಯಾದವ್, ಸಿಂಧಿ ಯಾ, ಕರುಣಾನಿಧಿ, ದೇವೇಗೌಡ ಮುಂತಾದವರೆಲ್ಲ ತಮ್ಮ ಪೀಳಿಗೆಯವರನ್ನು ರಾಜಕೀಯ ರಂಗದಲ್ಲಿ ಬೃಹತ್ ಆಲದ ಮರದಂತೆ ಪಸರಿಸಲು ಬಿಟ್ಟಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ, ಸಾಮಾನ್ಯ ಮಹಿಳೆಗೆ ರಾಜಕೀಯಕ್ಕಿಳಿಯಲು ಹೇಗೆ ಸಾಧ್ಯ? ಎಲ್ಲರೂ ರಾಜಕಾರಣಿಗಳ ಕುಟುಂಬದಲ್ಲಿ ಹುಟ್ಟಿ ಬರಲು ಸಾಧ್ಯವೇ? ಇಂದಿನ ಕಲುಷಿತ ವಾತಾವರಣವನ್ನು ನೋಡುತ್ತಿರುವ ಮಹಿಳೆಯರು, ಯಾಕೆ ತಾವೂ ಇಂಥ ಕೂಪಕ್ಕೆ ಇಳಿಯಬೇಕು, ಎಂದು ಅಸಹ್ಯಪಟ್ಟು ರಾಜಕೀಯದಿಂದ ದೂರವಿರಲು ಬಯಸುವುದು ಸಹಜ.

ಒಮ್ಮೆ ರಾಜಕೀಯಕ್ಕೆ ಒಳ ಪ್ರವೇಶ ಮಾಡಿದ ಮಹಿಳೆ ಮೇಲ್ಮಟ್ಟಕ್ಕೇರಬೇಕಾದರೆ, ನಮ್ಮ ದೇಶದಲ್ಲಿ ಈಗಿರುವ ವಾತಾವರಣ ಆದರ್ಶಪ್ರಾಯವಾಗಿಲ್ಲ ಎಂಬುದರಲ್ಲಿ ಎರಡು ಮಾತಿಲ್ಲ. ಇದು ರಾಜಕೀಯಕ್ಕೆ ಮಾತ್ರ ಸೀಮಿತವಾಗಿಲ್ಲ; ಎಲ್ಲ ಕ್ಷೇತ್ರಗಳಿಗೂ ಅನ್ವಯಿಸುತ್ತದೆ. ಸಾಹಿತ್ಯಕ್ಷೇತ್ರದಲ್ಲಾಗಲೀ, ಚಿತ್ರರಂಗದಲ್ಲಾಗಲೀ, ಕಿರುತೆರೆಯಲ್ಲಾಗಲೀ ಹೆಸರು ಮಾಡಬೇಕೆಂಬ ಹಂಬಲದಿಂದ ಒಳ ಹೊಕ್ಕವರಿಗೆ, ಅಲ್ಲಿರುವ ಹುಳುಕುಗಳು ಹಂತ ಹಂತವಾಗಿ ಗೋಚರಿಸುತ್ತವೆ. ಹಾಗಿರುವಾಗ ರಾಜಕೀಯದಂತಹ ಪ್ರಭಾವಶಾಲೀ ಕ್ಷೇತ್ರದಲ್ಲಿ ಅಸೂಯೆ, ದ್ವೇಷ, ಕಾಲೆಳೆಯುವಿಕೆ, ಮುಂತಾದುವು ಇಲ್ಲದಿರಲು ಸಾಧ್ಯವೇ? ಪ್ರತಿಯೊಬ್ಬನಿಗೂ ತಾನೊಬ್ಬ ಪ್ರಖ್ಯಾತ ವ್ಯಕ್ತಿಯಾಗಿ, ಸಕಲ ಅಧಿಕಾರಗಳನ್ನೂ ತನ್ನದಾಗಿಸಿಕೊಂಡು ವಿಜೃಂಭಿಸಬೇಕೆಂಬ ಹಂಬಲ. ಈ ಹಾದಿಯಲ್ಲಿ ಹೊರಹೊಮ್ಮುವ ರಾಜಕೀಯ ಪೈಪೋಟಿ, ಹಣಾಹಣಿ, ಧನಲಾಲಸೆ ಇವೆಲ್ಲ ಸರ್ವೇಸಾಮಾನ್ಯ. ಆದರೆ ಸ್ವಾಭಿಮಾನಿ, ನಿಪುಣ ಸ್ತ್ರೀಯೊಬ್ಬಳು ತನ್ನಲ್ಲಿರುವ, ಆಂತರಿಕ ಸ್ಥೈರ್ಯ ಮತ್ತು ಮಾತೃ ಶಕ್ತಿಯಿಂದ ಸುತ್ತಲಿನ ವಾತಾವರಣವನ್ನು ತಿಳಿಗೊಳಿಸಬಲ್ಲಳು. ತನಗೆ ಕೆಲಸ ಮಾಡಲು ಸೂಕ್ತ ವಾತಾವರಣ ಇಲ್ಲದಿದ್ದರೂ, ತನ್ನ ಸಾಮರ್ಥ್ಯದಿಂದ ಅಂತಹ ವಾತಾವರಣ ನಿರ್ಮಿಸಬಲ್ಲಳು. ಹೀಗೆ ಸ್ತ್ರೀಯರೂ ದೇಶದ ರಾಜಕೀಯಕ್ಕೆ ಹೆಚ್ಚು ಹೆಚ್ಚಾಗಿ ಸೇವೆ ಸಲ್ಲಿಸಿದಾಗ ಮಾತ್ರ, ಜಗತ್ತಿನಲ್ಲೇ ಅಧಿಕ ಜನನಿಬಿಡ ದೇಶವಾದ ಭಾರತದ ಸ್ವಾತಂತ್ರ್ಯ ಅರ್ಥಪೂರ್ಣವಾಗಬಲ್ಲುದು

# ಕೊಡಗು - ಒಂದು ಸ್ಥೂಲ ಪರಿಚಯ



**ನೀರ್ಕಜೆ ಮಹಾಬಲೇಶ್ವರ ಭಟ್**
**ಮಡಿಕೇರಿ**

ಕೊಡಗು ಭಾರತದ ಪಶ್ಚಿಮ ಘಟ್ಟಗಳ ಸಾಲಿನಲ್ಲಿರುವ ಕರ್ನಾಟಕದ ಅತಿ ಚಿಕ್ಕ ಜಿಲ್ಲೆ. ವಿಸ್ತೀರ್ಣ ೪೧೦೨ ಚದರ. ಕಿ. ಮೀ. ದಟ್ಟವಾದ ನಿತ್ಯಹರಿದ್ವರ್ಣದ ಕಾಡುಗಳಿಂದ ಅಮೃತವಾದ ಬೆಟ್ಟ ಗುಡ್ಡಗಳ ಪ್ರದೇಶವಿದು. ಬ್ರಹ್ಮಗಿರಿ ಪರ್ವತದ ತಲಕಾವೇರಿ ಎಂಬಲ್ಲಿ ಉಗಮಿಸಿ ಪೂರ್ವಕ್ಕೆ ಹರಿಯುವ, ನಾನಾ ಉಪನದಿಗಳಿಂದ ಕುಡಿ ಬೆಂಗಾಳಕೊಲ್ಲಿಗೆ ಸೇರಿವೆ ಕಾವೇರಿ ನದಿ, ಪಶ್ಚಿಮಕ್ಕೆ ಹರಿಯುವ ಬರಪೊಳೆ, ಪಯಸ್ವಿನಿ ಮೊದಲಾದ ನದಿಗಳು ಸುಮಾರು ಸಾವಿರದ ಐದುನೂರು ಅಡಿಗಳ ಎತ್ತರ, 15′ ಇಂದ 25′ ಸೆಲ್ಸಿಯಸ್ಸಿನ ಹವಾಮಾನ ; ಇತ್ತೀಚಿಗೆ ಏಪ್ರಿಲ್ ಮೇ ತಿಂಗಳುಗಳಲ್ಲಿ ೩೦-೩೫′ ಸೆಲ್ಸಿಯಸ್ಸಿಗೆ ಏರುವುದೂ ಇದೆ. ಜೂನ್ ನಿಂದ ಅಕ್ಟೊಬರ್ ವರೆಗೆ ಮಳೆಗಾಲ ಸುಮಾರು 60-300 ಇಂಚಿನಷ್ಟು ಮಳೆ ಕೊಡಗಿನ ಉದ್ದಗಲಕ್ಕೂ ಬೀಳುತ್ತದೆ. ಆದ್ದರಿಂದಲೇ ಕೊಡಗನ್ನು ಕರ್ನಾಟಕದ ಚಿರಾಪುಂಜಿ ಎಂದೇ ಕರೆಯುವುದುಂಟು.



ಕೊಡವ ಮೂಲದ ಬಗ್ಗೆ ವಿವಿಧ ಸಿದ್ಧಾಂತಗಳಿವೆ, ಕೆಲ ಸಿದ್ಧಾಂತಗಳ ಪ್ರಕಾರ ಈ ಪ್ರದೇಶದ ಸ್ಥಳೀಯ ನಿವಾಸಿಗಳು ಎರಡು ಸಾವಿರ ವರ್ಷಗಳ ಹಿಂದೆ ವಿದೇಶಿ ಮೂಲದವರು. ಆದಾಗ್ಯೂ, ವಿದೇಶಿ ಸಿದ್ಧಾಂತಗಳು ಕೇವಲ ಊಹಾಪೋಹಗಳಾಗಿದ್ದು, ಏಕೆಂದರೆ ಅವು ಯಾವುದೇ ದೃಢವಾದ ಸಾಕ್ಷ್ಯಾಧಾರಗಳಿಲ್ಲ.

ಸ್ಥಳೀಯ ಸಿದ್ಧಾಂತದ ಪ್ರಕಾರ, ಕೊಡವರು ಕೊಡಗುನ ಸ್ಥಳೀಯ ನಿವಾಸಿಯಾಗಿದ್ದಾರೆ ಮತ್ತು ಅವರು ಕೃಷಿಯನ್ನು ಕಲಿಯುತ್ತಾರೆ ಮತ್ತು ಅಭ್ಯಾಸ ಮಾಡುತ್ತಾ ಬೆಳೆದವರಾಗಿದ್ದಾರೆ. ಆದ್ದರಿಂದ ಅವರು ಶತಮಾನಗಳವರೆಗೆ ನಾಗರೀಕತೆಯನ್ನು ಪಡೆದು ಸಮೃದ್ಧಿಯನ್ನು ಪಡೆದುಕೊಂಡಿರುವ ಪುರಾತನ ಯುದ್ಧದ ಬುಡಕಟ್ಟು ಜನರಾಗಿದ್ದರು.
ಕೊಡವರು (ಕೊರ್ಗ್ಸ್) ಇಂಡೋ-ಆರ್ಯನ್ನರು ಮೊದಲು ಸಿಂಧೂ ಕಣಿವೆಯಲ್ಲಿ ಪ್ರವೇಶಿಸಿದ ಬ್ರಾಡ್ ಹೆಡೆಡ್ (ಬ್ರಾಕಿಸ್ಫಾಲಿಕ್) ಸ್ಟಾಕ್ನ ವಂಶಸ್ಥರು ಮತ್ತು ಇವರು ಇಂಡೋ-ಆರ್ಯನ್ನರು ಮೊದಲು ಕೂಗರ್ ಪ್ರದೇಶಕ್ಕೆ ವಲಸೆ ಬಂದರು (ಹಟ್ಟನ್, 1976 ರಲ್ಲಿ ಬಾಲಕೃಷ್ಣನ್ ಉಲ್ಲೇಖಿಸಿದಂತೆ).

ಇಲ್ಲಿನ ಬಹುತೇಕ ಜನರ ಜೀವನ ಕೃಷಿ ಅಥವಾ ಕೃಷಿ ಆಧಾರಿತ. ಕೋಡಗು ಎಂದಾಕ್ಷಣ ಕೆಡಗಿನ ಕಾಫಿ ನೆನಪಿಗೆ ಬರುವುದಕ್ಕೆ ಕಾರಣ ಇಲ್ಲಿಯ ಅತ್ಯುಚ್ಚ ಕಾಪಿ ಬೆಳೆ. ಜಗತ್ತಿನ ಬಹುತೇಕ ರಾಷ್ಟ್ರಗಳಿಗೆ ರಫ್ತಾಗುವ ಕೊಡಗಿನ ಕಾಪಿ ಜಗತ್ಪ್ರಸಿದ್ಧ. ಇನ್ನುಳಿದಂತೆ ಬತ್ತ, ಕಾಳು ಮೆಣಸು, ಏಲಕ್ಕಿ, ಚಹಾ, ರಬ್ಬರ್ ಕೂಡ ಇಲ್ಲಿ ಬೆಳೆಯಲ್ಪಡುತ್ತದೆ. ಸೋಮವಾರ ಪೇಟೆ ತಾಲೂಕಿನಲ್ಲಿ ರಾಗಿ ಜೋಳ ಹೆಚ್ಚಾಗಿ ಬೆಳೆಯಲ್ಪಡುತ್ತದೆ. ಇಲ್ಲಿನ ಕೃಷಿ ಮತ್ತು ಜೀವನ ಮಳೆಯನ್ನು ಅವಲಂಬಿಸಿರುತ್ತದೆ. ನೀರಾವರಿ ಅನುಕೂಲವುಳ್ಳವರು ಆಧುನಿಕ ಉಪಕರಣಗಳ ಮೂಲಕ ಅನುಕೂಲ ಕಲ್ಪಿಸಿಕೊಳ್ಳುತ್ತಾರೆ. ಒತ್ತಾಸೆಯಾಗಿ ಹೈನುಗಾರಿಕೆ ಮತ್ತು ಜೇನು ಸಾಕಾಣಿಕೆ ಕೂಡ ಇದೆ.

೨೦೧೧ ರ ಜನಗಣತಿಯಂತೆ ಕೊಡಗಿನ ಜನಸಂಖ್ಯೆ ಐದೂವರೆ ಲಕ್ಷ. ಕೊಡಗು ಎರಡು ವಿಧಾನ ಸಭಾ ಸ್ಥಾನವನ್ನು

ಪ್ರತಿನಿಧಿಸುತ್ತದೆ. ಪ್ರಮುಖ ಹಬ್ಬಗಳೆಂದರೆ ಕಾವೇರಿ ಸಂಕ್ರಮಣ, ಹುತ್ತರಿ, ಕೈಲ್ ಪೊಳ್ದ್, ಯುಗಾದಿ.

ಈ ಹಬ್ಬಗಳನ್ನು ಇಲ್ಲಿನ ಜನ ಸಂಭ್ರಮದಿಂದ ಆಚರಿಸುತ್ತಾರೆ. ಇಲ್ಲಿನ ಆಡಳಿತ ಭಾಷೆ ಕನ್ನಡ ಆದರೆ ಇಲ್ಲಿ ಅರೆ ಭಾಷೆ, ತುಳು, ಕೊಡವ ಭಾಷೆ, ಕೊಂಕಣಿ, ,ಮಲಯಾಳಮ್, ಬ್ಯಾರಿ ಮತ್ತು ಉರ್ದು ಭಾಷೆಗಳಿವೆ. ಇತ್ತಿಚೆಗೆ ಹಲವು ಪ್ರವಾಸಿ ತಾಣಗಳನ್ನೂ ಅಭಿವೃದ್ಧಿಗೊಳಿಸಲಾಗಿದ್ದು ಕೊಡಗು ಕರ್ನಾಟಕದ ಪ್ರಸಿದ್ಧ ಪ್ರವಾಸೀ ತಾಣವಾಗುತ್ತಿದೆ . ಇಲ್ಲಿನ ಪ್ರಮುಖ ಆಟ ಹಾಕಿ. ಹಾಕಿ ಆಟದ ಪಂದ್ಯಾವಳಿಗಳು ಸರ್ವೇ ಸಾಮಾನ್ಯ. ಇನ್ನು ಭಾರತದ ಮಿಲಿಟರಿಗೆ ಕೊಡಗಿನ ಕೊಡುಗೆ ಅಪಾರ.

### ದ್ರೌಪದಿಯ ವಿವಾಹ ಮಂಟಪದ ವರ್ಣನೆ
### (ಕುಮಾರವ್ಯಾಸ ಮಹಾಭಾರತದಿಂದ)

*ಚಾರಣರ ಕೈವಾರ ತುಂಬುರ*
*ನಾರದರ ಸಂಗೀತ ರಂಭೆಯ*
*ಚಾರುನರ್ತನ ಚಿತ್ರರಥನ ಮೃದಂಗ ಮೃದುಶಬ್ದ*
*ಆರುಭಟೆ ಮಿಗಲಳ್ಳಿರವ ಜಂ*
*ಭಾರಿಯೋಲಗದಲಿ ತದೀಯ ಮ*
*ಹಾರಭಸವಿತರೇತರ ಪ್ರತಿಬಿಂಬವಾಯ್ತೆಂದ*

**ತಾತ್ಪರ್ಯ:**
ಇಂದ್ರಲೋಕದಲ್ಲಿ ಕಾಣುವ ಸ್ತುತಿಪಾಠಕರ ಹೊಗಳಿಕೆ, ತುಂಬುರು ನಾರದರ ಸಂಗೀತ, ರಂಭೆಯ ನರ್ತನ, ಸೂರ್ಯನ ಮೃದಂಗವಾದನ, ಇವುಗಳಿಂದ ಆದ ಮಹಾಕೋಲಾಹಲವು, ಈ ಭೂಮಿಯ ಮೇಲೆ ದ್ರೌಪದಿಯ ಸ್ವಯಂವರ ಮಂಟಪದಲ್ಲಿ ಆಗುತ್ತಿದ್ದ ಶಬ್ದಕ್ಕೆ ಪ್ರತಿಬಿಂಬವೋ ಎಂಬಂತೆ ವಿವಾಹ ಮಂಟಪವು ಇಂದ್ರಲೋಕಕ್ಕೆ ಸಮನಾಗಿ ಕಾಣುತ್ತಿತ್ತು

*ಸಾಳಗದ ಸಮ್ಮೋಹನದ ಮಳೆ*
*ಗಾಲವೋ ಗೀತವೋ ರಸಾಳಿಯ*
*ಕಾಲುವೆಯೊ ನವಕಾವ್ಯಬಂಧದ ಸಾರಸಂಗತಿಯೋ*
*ಆಲಿಗಳಿಗಾಯುಷ್ಯಫಲ ಜೀ*
*ವಾಳವೋ ನರ್ತನವೊ ಸೊಗಸಿನ*
*ಮೇಳವಣೆಗಳ ಪಾಟಿಯಾದುದು ಜನದ ಕಣ್ಮನಕೆ*

**ತಾತ್ಪರ್ಯ:**
ಇಂತಹ ವಿಧವಿಧವಾದ ಸಂಗೀತದ ನಾದದಿಂದ ತುಂಬಿದ್ದ ಆ ಮಂಟಪವು ಇದೇನು ಸಂಗೀತದ ಮೋಹಕವಾದ ಮಳೆಗಾಲವೋ, ಅಥವ ಈ ನವರಸಗಳು ಭರಿತವಾದ ಹಾಡುಗಳು ಹರಿಯುತ್ತಿರುವ ಕಾಲುವೆಯೋ, ನೂತನ ಕಾವ್ಯರಚನೆಯ ರೀತಿಯೋ, ಈ ನೋಟವು ಜೀವಿತಾವಧಿಯಲ್ಲಿ ನೋಡಿದಕ್ಕೆ ಸಾರ್ಥಕವೋ ಎಂಬಂತೆ, ಈ ಸಂಗೀತ, ನೃತ್ಯಗಳ ಸೊಗಸು ಅಲ್ಲಿದ್ದವರ ಕಣ್ಮನಕ್ಕೆ ಆನಂದವನ್ನುಂಟುಮಾಡಿತು.

*ಹೊಳೆವ ಭಿತ್ತಿಯ ಸಾಲ ಭಂಜಿಕೆ*
*ಗಳಲಿ ಮೌಕ್ತಿಕ ವಜ್ರ ಮಣಿಮಂ*
*ಗಳ ಮಹಾರಶ್ಮಿಯಲಿ ರಚನೆಯ ಚಿತ್ರಪತ್ರದಲಿ*
*ಇಳೆಗಿಳಿದ ಪುಷ್ಪಕವೊ ನೂತನ*
*ನಳಿನ ಮಿತ್ರನ ರಥವೊ ಮೇಣಿದು*
*ಜಲಧಿಶಯನನ ಸೆಜ್ಜೆಯೋ ನಾವರಿಯೆವಿದನೆಂದ*

**ತಾತ್ಪರ್ಯ:**
ಆ ವಿವಾಹ ಮಂಟಪವು ಅತ್ಯಮೋಘವಾಗಿತ್ತು. ಆ ಗೋಡೆಗಳ ಮೇಲೆ ವಿಗ್ರಹ ಕೆತ್ತನೆಗಳಿದ್ದವು. ಆ ವಿಗ್ರಹಗಳ ಹೊಳಪನ್ನು ಹೆಚ್ಚಿಸಲು, ಅದಕ್ಕೆ ಹೊಳೆವ ವಜ್ರ ಮಣಿಗಳಿಂದ ಅಲಂಕರಿಸಲಾಗಿತ್ತು. ಆ ಹರಳುಗಳ ಕಾಂತಿಯು ಹಲವು ರೀತಿಯ ಆಕೃತಿಗಳನ್ನು ಮೂಡಿಸಿದವು. ಈ ದೃಶ್ಯ ಎಲ್ಲರ ಕಣ್ಣಿಗು ಆಶ್ಚರ್ಯವನ್ನುಂಟುಮಾಡಿ, ಇದು ಧರೆಗಿಳಿದ ಪುಷ್ಪಕವಿಮಾನವೋ, ಅಥವ ಸೂರ್ಯನ ಹೊಸ ರಥವೋ ಅಥವ ವಿಷ್ಣುವಿನ ಶಯನಾಗೃಹವೋ ಎಂದು ತಿಳಿಯಲಾಗದು ಎಂದು ಎಲ್ಲರು ಅಚ್ಚರಿ ಪಟ್ಟರು.

*ಝಳಿವ ಝೋಂಪಿಸಿ ಬೀಸಿದವು ತಂ*
*ಬೆಲರ ಬೀಸಣಿಗೆಗಳು ಪರಿಮಳ*
*ಕಲಿತ ಮಕರಂದದ ತುಷಾರದ ತುಹಿನ ರೇಣುಗಳ*
*ಸುಳಿವ ಸುತ್ತಣ ಸಾಲಭಂಜಿಕೆ*
*ಗಳಲಿ ಸೂತ್ರಿಸಿ ರಚಿಸಿದರು ಮಂ*
*ಗಳದ ರಿಂಗಣ ಝಾಡಿಸಿತು ವೈವಾಹ ಮಂಟಪವ*

**ತಾತ್ಪರ್ಯ:**
ವಿವಾಹ ಮಂಟಪದೊಳಗೆ ಎಲ್ಲಾ ರಾಜರಿಗು ಆಯಾಸ, ಶಕೆಯಾಗದ ಹಾಗೆ ನಿರ್ಮಿಸಿದ್ದರು. ಸಾಲು ವಿಗ್ರಹಗಳನ್ನು ಸೂತ್ರದಿಂದ ಜೋಡಿಸಿ, ಸುಗಂಧಯುಕ್ತವಾದ ತುಂತುರು ನೀರನ್ನು ಬೀಸಣಿಕೆಗಳು ಬೀಸುವಂತೆ ಮಾಡಿ ಮಂಟಪದಲ್ಲಿ ಶಖೆ ಇಲ್ಲದಂತೆ ಮಾಡಿದ್ದರು. ವಿವಾಹ ಮಂಟಪದಲ್ಲಿ ಸೂತ್ರದೊಡನೆ ಎಳೆದೊಡನೆ, ವಿಗ್ರಹಗಳು ಮಂಗಳ ನೃತ್ಯವನ್ನು ಮಾಡುತ್ತಿದ್ದವು.

# ಕೊಡಗಿನ ಮುಕುಟಮಣಿ "ಭಾರತೀಸುತ"



**ಡಾ. ಶ್ರೀಧರ ಹೆಗಡೆ**
**ಮಡಿಕೇರಿ, ಕೊಡಗು**

"ಭಾರತೀಸುತ" ಎಂಬ ಕಾವ್ಯನಾಮದಿಂದ ಸುಪ್ರಸಿದ್ಧರಾದ ಇವರ ನಿಜವಾದ ಹೆಸರು ಎಸ್. ಆರ್. ನಾರಾಯಣ ರಾವ್, ಅಂದರೆ ಶಾನುಭೋಗರ ಮನೆಯ ರಾಮಯ್ಯನ ಮಗ ನಾರಾಯಣ ರಾವ್. ತಾಯಿ ಸುಬ್ಬಮ್ಮನವರ ಇಬ್ಬರು ಗಂಡುಮಕ್ಕಳಲ್ಲಿ ನಾರಾಯಣರಾವ್ ಹಿರಿಯರು. ಕೊಡಗಿನ ರಾಜರ ಕಾಲದಿಂದಲೂ ಶಾನುಭೋಗಿಕೆ ಇವರ ಕುಲ ಕಸಬು. ಇವರು ಹವ್ಯಕ ಬ್ರಾಹ್ಮಣರು. ಹುಟ್ಟಿದ್ದು 1915ರ ಮೇ 15ರಂದು. ಇವರು ಮಡಿಕೇರಿ ಬಳಿಯ ಬಿಳಿಗೇರಿಯಲ್ಲಿ ಜನಿಸಿದರು.

ಪ್ರಕೃತಿಯ ರಮ್ಯ ತಾಣ ಕೊಡಗು ಜಿಲ್ಲೆ ವೀರಧೀರರ ನಾಡು. ಇವರು ಭೂತಾಯಿಯ ಆರಾಧಕರು ಹಾಗೆಯೇ ರಾಷ್ಟ್ರಭಕ್ತಿಯಲ್ಲಿ ನಿಸ್ಸೀಮತೆ ಮೆರೆಯುವ ವಿಶ್ವಾಸಾರ್ಹರು. ಇಂದಿಗೂ ನಮ್ಮ ದೇಶದ ಸೈನ್ಯದಲ್ಲಿ ಕೊಡಗಿನದೇ ಸಿಂಹ ಪಾಲು. ನಮ್ಮ ರಾಷ್ಟ್ರದ ಪ್ರಪ್ರಥಮ ಸೇನಾದಂಡಾಧಿಕಾರಿ ಫೀ.ಮಾ.ಕೆ.ಎಂ.ಕಾರ್ಯಪ್ಪ ಜನಿಸಿದ್ದು ಈ ನಾಡಿನಲ್ಲೆ. ಕೊಡಗನ್ನು ಹಾಲೇರಿ ವಂಶದ ರಾಜರುಗಳು ಆಳಿದ್ದಾರೆ. ಅದರ ಭವ್ಯತೆಯನ್ನು ಸಾರುವ ಅರಮನೆ, ಕೋಟೆ ಕೊತ್ತಳಗಳು, ಇಂದಿಗೂ ರಾಜ ವೈಭವದ ಕುರುಹುಗಳಾಗಿ, ಉಳಿದುಕೊಂಡಿವೆ. ಇತಿಹಾಸಕಾರರಿಗೆ, ಸಂಶೋಧನೆಗೆ ಕೊಡಗು ಹೇಳಿ ಮಾಡಿಸಿದ ಸ್ಥಳವಾಗಿದೆ. ಭಾರತೀಯ ಹಿಂದೂ ಪರಂಪರೆಯಲ್ಲಿ ಕೊಡಗಿಗೆ ವಿಶಿಷ್ಟಸ್ಥಾನ ಲಭಿಸಿದೆ. ಇವರ ಸಂಸ್ಕೃತಿ, ಆಚಾರ, ವಿಚಾರ ಉಡುಗೆ ತೊಡುಗೆ ಆಡುವ ಭಾಷೆ, ಎಲ್ಲವೂ ತನ್ನ ಪ್ರತ್ಯೇಕತೆಯನ್ನು ಉಳಿಸಿಕೊಂಡಿದೆ. ಇವರ ಸಾಮಾಜಿಕ ಜೀವನದಲ್ಲಿ ಬರುವ ಹುತ್ತರಿಹಬ್ಬ, ಹುತ್ತರಿಹಾಡು, ಹುತ್ತರಿಕೋಲು ಮತ್ತು ಸುಗ್ಗಿಕುಣಿತಗಳು ತಮ್ಮ ವಿಶೇಷತೆಯಿಂದ ಕೊಡಗಿನ ಭವ್ಯತೆಯನ್ನು ಸಾರುತ್ತವೆ.

ಕನ್ನಡ ನಾಡಿನ ಜೀವನದಿಯೆಂದೇ ಖ್ಯಾತವಾದ ಕಾವೇರಿನದಿ ಜನ್ಮತಾಳುವುದು ಇದೇ ನಾಡಿನ ತಲಕಾವೇರಿಯಲ್ಲಿ. ಇಲ್ಲಿಯ ಬ್ರಹ್ಮಗಿರಿ ಎಂಬ ಅತೀ ಎತ್ತರದ ಶಿಖರದ ಅಡಿಯಲ್ಲಿ ಕಾವೇರಿ ನದಿಯು ಉಗಮಿಸುವ ಕುಂಡಿಕೆ ಇದೆ. ಪ್ರತೀ ವರ್ಷ ತುಲಾ ಸಂಕ್ರಮಣದ ಶುಭ ಮುಹೂರ್ತದಲ್ಲಿ ಕಾವೇರಿ ಈ ಕುಂಡಿಕೆಯಲ್ಲಿ ಜುಳುಜುಳುನಾದ ಮಾಡುತ್ತಾ ಉಗಮಿಸುತ್ತಾಳೆ. ಮುಂದೆ ವಿಶಾಲ ನದಿಯಾಗಿ ಮೈಸೂರು ಮಂಡ್ಯ ತಮಿಳುನಾಡನ್ನು ಪಾವನ ಮಾಡಿ ಸಾಗರ ಸೇರುತ್ತಾಳೆ. ಈ ಎರಡೂ ರಾಜ್ಯಗಳಿಗೂ ಕಾವೇರಿ ಕುಲ ದೇವತೆ, ಮನೆದೇವತೆ. ಕೊಡಗಿನವರ ರಕ್ತದ ನರನಾಡಿಗಳಲ್ಲಿ ಕಾವೇರಿ ಹರಿದಾಡಿದ್ದಾಳೆ, ನಲಿದಾಡಿದ್ದಾಳೆ. ಕೊಡವರ ಕುಟುಂಬದ ಗಂಡು ಮಕ್ಕಳಾಗಲಿ, ಹೆಣ್ಣು ಮಕ್ಕಳಾಗಲಿ ಕಾವೇರಪ್ಪ ಅಥವಾ ಕಾವೇರಿ ಇರಲೇಬೇಕು. ಕೊಡವರ ಜೀವನದ ಅವಿಭಾಜ್ಯ ಅಂಗವೇ ಆಗಿರುವ ಕಾವೇರಿ ದಕ್ಷಿಣ ಗಂಗೆಯೆಂದು ಪ್ರಸಿದ್ಧಳಾಗಿದ್ದಾಳೆ.

ಬ್ರಿಟೀಷರ ಅಚ್ಚುಮೆಚ್ಚಿನ ಸ್ಥಳವಾಗಿದ್ದ ಕೊಡಗು ಭಾರತದ ಕಾಫಿ ಕಣಜವೆಂದೆ ಪ್ರಸಿದ್ದಿ. ಜೊತೆಗೆ ಕೊಡಗಿನ ಕಿತ್ತಳೆ ಹಾಗೂ ಏಲಕ್ಕಿ ಬೆಳೆಗಳು ತುಂಬ ಹೆಸರುವಾಸಿಯಾಗಿದೆ. ಇಂತಹ ವಾಣಿಜ್ಯ ಬೆಳೆಗಳಿಂದ ಕೊಡಗು ಸಿರಿಸಂಪತ್ತಿನ ನಾಡಾಗಿದೆ. ಮೈಲುಗಳಷ್ಟು ದೂರ ವ್ಯಾಪಿಸಿರುವ ಕಾಫಿ ತೋಟಗಳು, ಇಲ್ಲಿನ ಸಿರಿವಂತರ ಹೆಮ್ಮೆಯ ಕುರುಹು. ಕಾಫಿ ಎಸ್ಟೇಟ್ ಎಂದೆ ಕರೆಯಲ್ಪಡುವ ಈ ವಲಯಗಳು ಕೊಡಗನ್ನು ಸಂಪತ್ತಿನ ಗಣಿಯಾಗಿಸಿವೆ.

ಇಂತಹ ಸಮೃದ್ಧವಾದ ಪ್ರಾಕೃತಿಕ ವಾತಾವರಣದ ಸಂವೇದನೆಗಳನ್ನು ಮೈಗೂಡಿಸಿಕೊಂಡು ಭಾರತೀಸುತರು ಚಿಕ್ಕ ವಯಸ್ಸಿನಿಂದಲೆ ಶಿಕ್ಷಣ ಮತ್ತು ಸಾಹಿತ್ಯದ ಕುರಿತು ಅಭಿರುಚಿಯನ್ನು ರೂಢಿಸಿಕೊಂಡರು. ಮುಂದೆ ಭಾರತೀಸುತರೆಂಬ ಹೆಸರಿನಿಂದ ಪ್ರಖ್ಯಾತ ಸಾಹಿತಿಯಾಗುವರೆಂದು ಯಾರೂ ಊಹಿಸಿರಲಿಲ್ಲ. ಸಾಹಿತ್ಯಾಗಸದ ನೀಲಾಕಾಶದಲ್ಲಿ ಧೃವತಾರೆಯಂತೆ

ಬೆಳಗುತ್ತಿರುವ ಭಾರತೀಸುತರು ಅಪ್ರತಿಮ ದೇಶಭಕ್ತರಾಗಿದ್ದರು. ನಂತರ ಸ್ವಾತಂತ್ರ್ಯ ಹೋರಾಟದಲ್ಲಿಯೂ ಧುಮುಕಿ ಜೈಲು ಶಿಕ್ಷೆಯನ್ನೂ ಅನುಭವಿಸಿದರು. ತಮ್ಮನ್ನು ತಾವೇ ಭಾರತಾಂಬೆಯ ಪುತ್ರರೆಂದು ಕರೆದುಕೊಂಡ ಇವರಿಗೆ ಭಾರತೀಸುತ ಎಂಬುದು ಅನ್ವರ್ಥ ಕಾವ್ಯನಾಮ.

ಆ ಕಾಲಕ್ಕೆ ಹಳ್ಳಿಗಳಲ್ಲಿ ಶಾನುಭೋಗರೆಂದರೆ ಅಪಾರ ಗೌರವ. ಇಂತಹ ಗೌರವಾನ್ವಿತ ಕುಟುಂಬದಲ್ಲಿ ಜನಿಸಿದ ನಾರಾಯಣರಾಯರು, ತಮ್ಮ ಏಳನೇ ವಯಸ್ಸಿಗೆ ತಂದೆಯನ್ನ ಕಳೆದುಕೊಂಡರು. ಆದರೂ ತಾಯಿ ಸುಬ್ಬಮ್ಮನವರು ವಿದ್ಯಾವಂತೆಯಾಗಿದ್ದರಿಂದ ಮಗನನ್ನು ವಿದ್ಯಾವಂತನನ್ನಾಗಿ ಮಾಡಲೇಬೇಕೆಂದು ಪಣತೊಟ್ಟಿದ್ದರು. ಇದಕ್ಕೆ ಪೂರಕವಾಗಿ ಇವರ ಚಿಕ್ಕಪ್ಪ ಸುಬ್ಬರಾಯರು ಉದ್ದಾಮ ಪಂಡಿತರೂ, ಶಿಕ್ಷಕರೂ ಆಗಿದ್ದು ಇವರ ಪಾಲಿಗೆ ವರದಾನವಾಯಿತು.

ಚಿಕ್ಕಂದಿನಲ್ಲೇ ಅಪಾರ ಬುದ್ಧಿವಂತಿಕೆಯನ್ನು ಪ್ರದರ್ಶಿಸುತ್ತಿದ್ದ ಭಾರತೀಸುತರನ್ನು ಕಂಡರೆ ತಾಯಿಗೆ ಬಹಳ ಹೆಮ್ಮೆ. ಅದರಿಂದಾಗಿ ಎಷ್ಟೇ ಕಷ್ಟವಾದರೂ ಮಡಿಕೇರಿಯಲ್ಲಿರುವ ಆಂಗ್ಲಮಾಧ್ಯಮ ಶಾಲೆಯಲ್ಲಿ ಓದಲು ಸೇರಿಸಿದ್ದರು. ಇಂಗ್ಲೀಷ್‌ರ ದಟ್ಟ ಪ್ರಭಾವವಿದ್ದ ಕಾಲದಲ್ಲಿ ಅವರ ಆಚಾರ ವಿಚಾರಗಳನ್ನು ಅನುಕರಿಸುವುದು ತುಂಬಾ ಹೆಮ್ಮೆಯ ವಿಚಾರವಾಗಿತ್ತು. ಇಲ್ಲಿಯೂ ಬಡವ ಬಲ್ಲಿದ ಎಂಬ ತಾರತಮ್ಯಗಳಿದ್ದವು. ಇದೆಲ್ಲವನ್ನು ಮೆಟ್ಟಿ ಶಾಲೆಯಲ್ಲಿ ಭಾರತೀಸುತರು ಪ್ರತಿಭಾವಂತ ವಿದ್ಯಾರ್ಥಿಯಾಗಿದ್ದರು. ತಮ್ಮ ವಿದ್ಯಾರ್ಥಿದೆಸೆಯಲ್ಲಿ ಓದುವುದರಲ್ಲಿ ಮಾತ್ರವಲ್ಲದೆ, ಉಳಿದ ಆಟೋಟ ಚಟುವಟಿಕೆಗಳಲ್ಲೂ ಹಿಂದೆ ಬೀಳಲಿಲ್ಲ. ತನ್ನ ಗೆಳೆಯರ ಬಳಗದೊಂದಿಗೆ ಕೊಡಗಿನ ರಮ್ಯ ತಾಣಗಳಲ್ಲಿ ವಿಹರಿಸುತ್ತಾ ಪ್ರಕೃತಿಯ ಐಸಿರಿಯನ್ನು ಕಣ್ತುಂಬಿಕೊಳ್ಳುತ್ತಿದ್ದರು. ನಿಸರ್ಗ ಮಡಿಲಲ್ಲಿ ಮಗುವಾಗಿ ವಿಹರಿಸುತ್ತಿದ್ದ ಇವರಿಗೆ ಕಲ್ಪನಾ ಸಾಮರ್ಥ್ಯ ಇಮ್ಮಡಿಯಾಯಿತು.

ಪ್ರತಿಯೊಬ್ಬನ ಒಳಮನಸ್ಸಿನಲ್ಲೂ ಸುಪ್ತವಾಗಿ ಅಡಗಿರುವ ಅಪಾರ ಶಕ್ತಿಯೊಂದಿರುತ್ತದೆ, ಒಳಮನಸ್ಸಿನಲ್ಲೂ ನೋಡಿಕೊಂಡು ಅದು ಪ್ರಕಟಗೊಂಡು ತನ್ನ ವಿಶ್ವರೂಪದರ್ಶನ ಮೂಡಿಸುತ್ತದೆ. ಭಾರತೀಸುತರ ವಿಷಯದಲ್ಲಿ ಆಗಿದ್ದು ಇದೇ ಪವಾಡ. ಭಾರತೀಸುತರು ಶಾಲೆಯಲ್ಲಿ ಓದುತ್ತಿದ್ದ ಕಾಲದಲ್ಲಿ ಆ ಶಾಲೆಗೆ ಮುಖ್ಯೋಪಾಧ್ಯಾಯರಾಗಿ ಆಗಮಿಸಿದ ಪಂಜೆ ಮಂಗೇಶರಾಯರು ಇವರ ಸಾಹಿತ್ಯ ಸಸಿಗೆ ನೀರೆರದು ಮುಂದೆ ಅದು ಹೆಮ್ಮರವಾಗಲು ಕಾರಣರಾದರು. ಮಕ್ಕಳೊಂದಿಗೆ ಮಕ್ಕಳಾಗಿ ಬೆರೆಯುತ್ತಿದ್ದ ಪಂಜೆಯವರು, ಬಾಲಕ ಭಾರತೀಸುತರಲ್ಲಿ ಅಡಗಿದ್ದ ಸಾಹಿತ್ಯ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸಿದರು. ಪಂಜೆಯವರ ಪ್ರೋತ್ಸಾಹದಿಂದ ಅಪ್ಪಟಬಂಗಾರದಂತೆ ಹೊಳೆಯಲಾರಂಭಿಸಿದ ಭಾರತೀಸುತರು, ಮೊದಲು ರಚಿಸಿದ ಕಥೆ 'ಪೃಥ್ವಿರಾಜ', ಆದರೆ ಪ್ರಕಟಗೊಂಡಿದ್ದು 'ಬಂಗಾರದ ಬಳೆ' ಎಂಬ ಕಿರುಗತೆ. ಅಂದಿನ ಕಾಲಕ್ಕೆ ಅಪಾರ ಓದುಗರ ಮನ್ನಣೆ ಪಡೆದಿದ್ದ ಈ ಕಥೆಯನ್ನು ರಚಿಸಿದಾಗ ಭಾರತೀಸುತರ ವಯಸ್ಸು ಕೇವಲ ಹದಿಮೂರು ವರ್ಷಗಳು. ತಮ್ಮ ವಿದ್ಯಾರ್ಥಿದೆಸೆಯಲ್ಲೆ ಬರಹಗಾರರ ಕೂಟವನ್ನು ರಚಿಸಿದ್ದರು. ಇದರಿಂದಾಗಿಯೇ ಇವರ ಕಥೆ ಕಾದಂಬರಿಗಳ ಮುದ್ರಣ ಸಾಧ್ಯವಾಯಿತು.

ಕೊಡಗಿನ ಕಾನನ ಸುಮವಾಗಿದ್ದ ಭಾರತೀಸುತರಲ್ಲಡಗಿದ್ದ ಸಾಹಿತ್ಯ ಪ್ರತಿಭೆ ನಿಧಾನವಾಗಿ ಹೊರಹೊಮ್ಮಲು ಪ್ರಾರಂಭಿಸಿತು. ಕೊಡಗಿನ ಸಾಂಸ್ಕೃತಿಕ ವೈಭವವನ್ನು ತಮ್ಮ ಕಥೆ ಕಾದಂಬರಿಗಳಲ್ಲಿ ಬಹಳ ರಸವತ್ತಾಗಿ ವರ್ಣಿಸುತ್ತಿದ್ದ ಭಾರತೀಸುತರ ಬರವಣಿಗೆ ಅಂದಿನ ಕೊಡವರ ಜೀವನ ಶೈಲಿ, ಆಚಾರ ವಿಚಾರ, ಉಡುಗೆ ತೊಡುಗೆ ಮತ್ತು ರೀತಿ ನೀತಿ, ಉಪಚಾರ, ಆದರಾತಿಥ್ಯವನ್ನು ಸಂಪೂರ್ಣವಾಗಿ ದರ್ಶನ ಮೂಡಿಸುತ್ತದೆ. ಕೊಡಗಿನ ವೈಭವವನ್ನು ಸವಿಯಲು ಭಾರತೀಸುತರ ಕಾದಂಬರಿಯನ್ನು ಓದಿದರೆ ಸಾಕು, ಅದರ ಸಂಪೂರ್ಣ ಚಿತ್ರಣ ನಮ್ಮ ಕಣ್ಣ ಮುಂದೆ ಬರುತ್ತದೆ. ಕೊಡಗಿನ ಚರಿತ್ರೆ, ಪೌರಾಣಿಕ ಮಹಾತ್ಮೆ, ಕೊಡಗಿನ ವಿಶ್ವಕೋಶವೆ ಇವರ ಕಾದಂಬರಿಗಳಲ್ಲಿ ಅನಾವರಣಗೊಂಡಿದೆ.

ಸಾಹಿತಿಯೊಬ್ಬನ ಕಲ್ಪನಾ ವಿಲಾಸದಲ್ಲಿ ಹಲವಾರು ಪಾತ್ರಗಳು ಆವಿರ್ಭವಿಸುತ್ತಿರುತ್ತವೆ. ಅವು ಆತನ ಮನಸ್ಸಿನ ರಂಗ ಮಂಟಪದಲ್ಲಿ ಜೀವ ತಳೆದು ನರ್ತಿಸಲಾರಂಭಿಸುತ್ತವೆ. ಅಂತಹ ಪಾತ್ರಗಳಿಗೆ ತಾರ್ಕಿಕ ರೂಪಕೊಟ್ಟು ಅದನ್ನು ಬಿಳಿಯ ಹಾಳೆಯ ಮೇಲೆ ಮೂಡಿಸುವುದೇ ಸಾಹಿತಿಗೆ ಸವಾಲು. ಇಂತಹ ಸವಾಲನ್ನು ದೈರ್ಯದಿಂದ ಎದುರಿಸಿದ ಖ್ಯಾತಿ ಭಾರತೀಸುತರದ್ದು. ಇವರ ಒಡಲಾಳದಿಂದ ಮೂಡಿಬಂದ ಸಾಹಿತ್ಯಕೃತಿಗಳು ಒಂದೊಂದು ಅಮೂಲ್ಯರತ್ನಗಳು. ಅಂತಹ ರತ್ನಹಾರದಿಂದ ಶೋಭಿತಳಾದ ಶಾರದೆಮಾತೆ ನಿಜಕ್ಕೂ ಧನ್ಯಳು.

ತುಂಬಾ ಮಡಿವಂತ ಆಚರಣೆಗಳ ಸಂಪ್ರದಾಯದ ಹವ್ಯಕ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದ್ದ ನಾರಾಯಣರಾಯರು, ಸಾಮಾಜಿಕ ನಡವಳಿಕೆಗಳಲ್ಲಿ ಸಮಸ್ಥಿತಿ ಕಾಯ್ದುಕೊಂಡಿದ್ದರು. ಅವರೆ ಹೇಳಿಕೊಂಡಂತೆ "ಜಪವ ಮಾಡಿದರೇನು, ತಪವ

ಮಾಡಿದರೇನು, ಕಪಟಗುಣ ವಿಪರೀತ ಕಲುಷವಿದ್ದವರು" ಎಂಬ ಕನಕದಾಸರ ಕೀರ್ತನೆ ಅವರ ಬದುಕಿನ ಮೂಲಮಂತ್ರವಾಗಿತ್ತು. ಅವರು ಜೀವನಲ್ಲಿ ಎದುರಿಸಿದ್ದ ನೋವು ಸಂಕಟಗಳಿಂದ ಬೇಸತ್ತು ತಮಗೆ ತಾವೆ ವಿಧಿಸಿಕೊಂಡಿದ್ದ ಮಂತ್ರ, ಭಕ್ತಿ ಮತ್ತು ಧೈವ ನಿಷ್ಠೆಗಳೆಂಬ ಬಂಧನಗಳಿಂದ ವಿಮೋಚನೆಗೊಂಡು ಸಾಹಿತ್ಯ ಜಗತ್ತಿಗೆ ಉದಾರವಾಗಿ ತೆರೆದುಕೊಂಡರು. ಹೀಗಾಗಿ ಅವರ ಸಾಹಿತ್ಯದಲ್ಲಿ ಬ್ರಾಹ್ಮಣ, ಶೂದ್ರ ವ್ಯತ್ಯಾಸಗಳಿಲ್ಲದೆ ಎಲ್ಲಾ ಮಾನವ ಜೀವಿಗಳ ಒಳಿತು ಕೆಡುಕಿನ ಮನೋಭಾವನೆ, ವಿಷಯ ಲಂಪಟತನದ ಅರಿಷಡ್ವರ್ಗಗಳು ಅನಾವರಣಗೊಂಡಿವೆ. ಇದರಿಂದಾಗಿ ಅವರ ಕಾದಂಬರಿಗಳು ಜನಪ್ರಿಯವಾಗಿವೆ.

ಹುಟ್ಟಿದಾರಭ್ಯ ಮನುಷ್ಯ ಸದ್ಗುಣಗಳ ದಾಸನಲ್ಲ. ಆತನಲ್ಲಿ ರಾಮನಿದ್ದಾನೆ, ಹಾಗೆಯೇ ರಾವಣನೂ ಇದ್ದಾನೆ. ಪಾಂಡವರಿದ್ದಾರೆ, ಅಲ್ಲೇ ಅವರ ಚಿಂತನೆಯ ವಿರುದ್ಧ ದಿಕ್ಕಿನ ಕೌರವರಿದ್ದಾರೆ. ಇವರೆಡನ್ನು ನಿಭಾಯಿಸುವ ಶ್ರೀಕೃಷ್ಣನಿದ್ದಾನೆ. ಮನುಷ್ಯನ ಮನಸ್ಸಿನ ಸಕಾರ ವಿಕಾರಗಳ ವರ್ತನೆಯೆ ಅವನನ್ನು ಈ ಜಗತ್ತಿಗೆ ಅಂಟಿಸಿ ಬಿಡುತ್ತದೆ. ಇವೆರಡರ ಮಧ್ಯೆ ಬಡಿದಾಡುವ ಮನುಷ್ಯ ಕೊನೆಗೆ ಸಾವಿಗೆ ಶರಣಾಗಿ ಬಿಡುವುದು ಸೃಷ್ಟಿ ತನ್ನ ರಹಸ್ಯವನ್ನು ತನ್ನಲ್ಲೇ ಹುದುಗಿ ಕೊಂಡಿರುವುದಕ್ಕೆ ಸಾಕ್ಷಿಯಾಗಿದೆ. ಮಾನವೀಯ ಸಂಬಂಧಗಳಿಗೆ ಬೆಲೆ ಕೊಡುವ ಭಾರತೀಸುತರು ಇವೆಲ್ಲವನ್ನೂ ಬಹಳ ಹೃದ್ಯವಾಗಿ ತಮ್ಮ ಕಥೆ, ಕಾದಂಬರಿಗಳಲ್ಲಿ ಬಣ್ಣಿಸಿದ್ದಾರೆ.

ಓದುಗರ ಮನಸ್ಸನ್ನು ಆವರಿಸಿ ಅವರನ್ನು ಚಿಂತನೆಗೀಡುಮಾಡುವುದೇ ಭಾರತೀಸುತರ ಬರವಣಿಗೆಯ ವೈಶಿಷ್ಟವಾಗಿದೆ. ಸಾಹಿತ್ಯ ಕ್ಷೇತ್ರದಲ್ಲಿ ಅವರು ಕೈಯಾಡಿಸದ ಕ್ಷೇತ್ರವಿಲ್ಲ. ಸಾಹಿತ್ಯ ಸಾಗರದ ಎಲ್ಲಾ ಆಳ ವಿಸ್ತಾರಗಳಲ್ಲಿ ಈಸಿ ಜೈಸಿರುವ ಭಾರತೀಸುತರು ಸಾಹಿತ್ಯ ಕ್ಷೇತ್ರದ ಅನರ್ಘ್ಯರತ್ನ. ಭಾರತೀಸುತರು ಚಿಂತಿಸದ, ಕೈಯಾಡಿಸದ ಕ್ಷೇತ್ರಗಳೆ ಇಲ್ಲವೆನ್ನಬಹುದು. ಭೌತ, ರಾಸಾಯಿನಿಕ, ವಿಜ್ಞಾನ ಗಣಿತ ಎಲ್ಲಾ ಪ್ರಕಾರಗಳಲ್ಲೂ ಅವರ ಅಧ್ಯಯನ ನಡೆದಿದೆ. ಅದರ ಮೇಲೆ ಏಕಕಾಲಕ್ಕೆ ವಿಜ್ಞಾನಿಗಳ ಹಾಗೂ ಸಾಹಿತ್ಯ, ಸಮಾಜ ಚಿಂತಕರ ಮತ್ತು ದಾರ್ಶನಿಕರ ಪ್ರಭಾವ ದಟ್ಟವಾಗಿದೆ.

ಭಾರತೀಸುತರಿಗೆ ಹುಟ್ಟಿ ಬೆಳೆದ ಕೊಡಗು ಮೂಲಸ್ಫೂರ್ತಿಯಾದರೆ, ಓದಿದ ಭಗವದ್ಗೀತೆ, ವೇದಗಳು, ಉಪನಿಷತ್ತುಗಳು, ದಾರ್ಶನಿಕಾರದ ಕನಕ, ಪುರಂದರ, ಬಸವಣ್ಣ, ಶಿಶುನಾಳರ ಪ್ರಭಾವ ಅವರ ಸಾಹಿತ್ಯ ಕೃತಿಗೆ ನೀರೆರೆದು ಪೋಷಿಸಿವೆ. ಇಷ್ಟೊಂದು ಸಮೃದ್ಧವೂ ವೈವಿಧ್ಯಪೂರ್ಣವೂ ಆದ ವಿಚಾರಗಳು ಅವರನ್ನು ಒಬ್ಬ ಪರಿಪೂರ್ಣ ಮನುಷ್ಯನನ್ನಾಗಿಸಿ, ವಿಶ್ವಮಾನವನೆತ್ತರಕ್ಕೆ ಏರಿಸಿದೆ. ಅವರ ಸಾಹಿತ್ಯ ರಚನೆಗೆ ಡಿ.ವಿ.ಜಿ., ಕುವೆಂಪು, ಹಾಗೇ ಶಿವರಾಮ ಕಾರಂತರಂತಹ ಅನೇಕ ಮಹಾನ್ ಚೇತನಗಳು ಸ್ಫೂರ್ತಿದಾಯಕರಾಗಿದ್ದಾರೆ. ಅವರೆ ಹೇಳಿದಂತೆ "ಯಾವುದೇ ವ್ಯಕ್ತಿಗೆ ಆತನ ತಂದೆ, ತಾಯಿ ಜನ್ಮಸ್ಥಳ ಅಥವಾ ಕಾಲಗಳ ಆಯ್ಕೆಯ ಸ್ವಾತಂತ್ರ್ಯವಿಲ್ಲ. ಹುಟ್ಟಿದ ಬಳಿಕ ವ್ಯಕ್ತಿಯ ವಿಕಾಸದಲ್ಲಿ ಪ್ರಮುಖ ಪಾತ್ರವಹಿಸುವ ಪ್ರಭಾವಗಳು ಐದು. ಗೃಹ ಪರಿಸರ, ಶಿಕ್ಷಣ ಸ್ಥಳೀಯ ಇವುಗಳು ಮನುಷ್ಯನನ್ನು ನಾಗರೀಕನನ್ನಾಗಲು ಪ್ರೇರೇಪಿಸುತ್ತವೆ. ಆತನ ಕ್ಷೇತ್ರದಲ್ಲಿ, ವೃತ್ತಿಯಲ್ಲಿ ಅತ್ಯುನ್ನತ ಶಿಖರವನ್ನೇರಲು ಸಹಕಾರ ನೀಡುತ್ತವೆ."

ಭಾರತೀಸುತರು ತಮ್ಮ ಕಥೆ ಕಾದಂಬರಿಗಳಲ್ಲಿ ಆಯ್ದುಕೊಂಡಿರುವ ವಿಷಯ ವಿಸ್ತಾರ ಹಾಗೂ ಆಸಕ್ತಿಗಳ ವೈವಿಧ್ಯತೆಯನ್ನು ಅವರು ತಮ್ಮ ಸಾಮಾಜಿಕ ಬದುಕಿನಲ್ಲಿ ಅನುಭವಿಸಿದ್ದಾರೆ. ಎಲ್ಲಾ ತರಹದ ಪಾತ್ರಗಳ ಚಿತ್ರಣ ದಟ್ಟವಾಗಿ ಕಂಡು ಬರುತ್ತದೆ. ತಮ್ಮ ಬರವಣಿಗೆಯ ಶ್ರೀಮಂತಿಕೆಯಿಂದ ಬದುಕಿನ ಹಲವಾರು ಪಾತ್ರಗಳ ಜೀವಂತ ದರ್ಶನಮಾಡಿಸಿದ್ದಾರೆ. ತಮ್ಮ ಇಳಿವಯಸ್ಸಿನಲ್ಲಿಯೂ ಬರವಣಿಗೆಯನ್ನು ನಿಲ್ಲಿಸದಿದ್ದ ಭಾರತೀಸುತರು "ಆಯಾಸವೆನ್ನಿಸುವುದು ಮನಸ್ಸಿನ ಒಂದು ಸ್ಥಿತಿಯೇ ವಿನಃ ದೇಹದ್ದಲ್ಲ", ಎಂದಿದ್ದಾರೆ. ಯುಕ್ತಾಹಾರ, ಮುಕ್ತ ವಿಹಾರದಿಂದ ದೇಹ ಮತ್ತು ಮನಸ್ಸು ಎರಡೂ ಸ್ವಾಸ್ಥದಿಂದ ಕೂಡಿರುತ್ತವೆ ಎಂಬುದನ್ನು ಪ್ರಾಯೋಗಿಕವಾಗಿ ಬದುಕಿನಲ್ಲಿ ಕಂಡುಕೊಂಡಿದ್ದವರು.

ಒಬ್ಬ ಮನುಷ್ಯ ತನ್ನ ಅಗಾಧ ಸಾಮರ್ಥ್ಯದ ಅರ್ಧದಷ್ಟನ್ನು ಸರಿಯಾಗಿ ಬಳಸುವುದಿಲ್ಲ. ಇದು ವೈಜ್ಞಾನಿಕವಾಗಿ ಸತ್ಯವೂ ಕೂಡ ಹೌದು. ಒಬ್ಬ ಸೃಜನಶೀಲವುಳ್ಳ ಸಾಹಿತಿ ತನ್ನ ಸಾಹಿತ್ಯ ಕೃತಿಗೆ ಮುಂಚಿತವಾಗಿ ಎಲ್ಲಾ ಅಗತ್ಯ ಸಿದ್ಧತೆಗಳನ್ನು ಮಾಡಿಕೊಂಡಿರುತ್ತಾನೆ. ಕೃತಿ ರಚನೆಗೆ ಬೇಕಾದ ಅಧ್ಯಯನಗಳು, ವ್ಯಕ್ತಿಗಳ ಒಡನಾಟದಿಂದ ಕಂಡುಕೊಂಡು ಭಿನ್ನ ಭಿನ್ನ ವ್ಯಕ್ತಿತ್ವಗಳು, ಎಲ್ಲವೂ ಸುಸೂತ್ರವಾಗಿ ಮುಗಿದ ಮೇಲೆ, ಸೃಜನಶೀಲ ಬರೆವಣಿಗೆ ತನ್ನಿಂದ ತಾನೇ ಮೂಡಿ ಬರಲಾರಂಭಿಸುತ್ತದೆ.

ಅಧ್ಯಾಪಕರಾಗಿದ್ದ ಭಾರತೀಸುತರು ಸಾಹಿತ್ಯ ಕೃತಿಗಳ ಮೂಲಕ ಪ್ರಸಿದ್ಧರಾದವರು. ಅವರ ಕಾದಂಬರಿಗಳಾದ 'ಬೆಳಕಿನೆಡೆಗೆ', 'ಹೊಂಗಿರಣ', 'ಗಿರಿಕನ್ನಿಕೆ', 'ಎಡಕಲ್ಲು ಗುಡ್ಡದ ಮೇಲೆ' ಮತ್ತು

'ಹುಲಿಯ ಹಾಲಿನ ಮೇವು' ಜನಪ್ರಿಯವಾದವುಗಳು. ಇವರ ಕೃತಿಗಳನ್ನಾಧರಿಸಿ 'ಎಡಕಲ್ಲು ಗುಡ್ಡದ ಮೇಲೆ', ' ಬಯಲು ದಾರಿ', ' ಗಿರಿಕನ್ಯೆ' ಮತ್ತು ' ಹುಲಿಯ ಹಾಲಿನ ಮೇವು' ಚಲನಚಿತ್ರಗಳಾಗಿವೆ. ಉತ್ತಮ ಕಥೆಗಾರರಾದ ಇವರು ಸಮರ್ಥ ಅನುವಾದಕರೂ ಕೂಡ ಆಗಿದ್ದರು.

ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ಭಾರತೀಸುತರ ಮೇಲೆ ಗಾಂಧೀಜಿಯವರ ಪ್ರಭಾವವಿದ್ದಂತೆ ಸಮಾಜವಾದಿ ವಿಚಾರಧಾರೆ, ಕಾರ್ಲ್‌ಮಾರ್ಕ್ಸ್, ಲೆವಿನ್, ಸ್ಟಾಲಿನ್, ರಸ್ಕಿನ್ ಮಾದಲಾದವರ ಪ್ರಭಾವವೂ ಇತ್ತು. ಅವರ ಬಹುಮುಖಿ ಆಯಾಮದ ವ್ಯಕ್ತಿತ್ವವು ತ್ಯಾಗ, ದೇಶಸೇವೆ, ಸ್ವಾತಂತ್ರ್ಯ ಹೋರಾಟ, ಸೆರೆಮನೆ ವಾಸ, ಅನೇಕ ಮಹಾನ್ ವ್ಯಕ್ತಿಗಳ ಒಡನಾಟಗಳಿಂದ ಪರಿಪೂರ್ಣವಾಗಿತ್ತು. ಸಾಹಿತ್ಯ ಕ್ಷೇತ್ರದಲ್ಲಿ "ಭಾರತೀಸುತ" ಎಂದು ಪ್ರಖ್ಯಾತರಾದ ನಾರಾಯಣ ರಾವ್ ಅವರು ಕೊಡಗಿನ ಮುಕಟ ಮಣಿಯಾಗಿದ್ದಾರೆ.

ಇಂತಹ ಅವಿರತ ಸೇವಾ ಮನೋಭಾವದ "ಭಾರತೀಸುತ"ರು 1976ರ ಎಪ್ರಿಲ್ 4ರಂದು ಇಹಲೋಕವನ್ನು ತ್ಯಜಿಸಿದರು. ಇಂದು ಅವರು ಇಲ್ಲದಿದ್ದರೂ ಅವರ ಬದುಕು ಮತ್ತು ಸಾಧನೆ ಶಾಶ್ವತವಾಗಿದೆ.

*******************************************

**ಶ್ರೀಮಂತಿಕೆ**

ಸಂತನೊಬ್ಬ ಮಂದಿರದಲ್ಲಿ ಪ್ರಾರ್ಥನೆ ಸಲ್ಲಿಸುತ್ತಿದ್ದ. ಅಲ್ಲಿಗೆ ಬಂದ ಶ್ರೀಮಂತ ವರ್ತಕನಿಗೆ ಸಂತ ನನ್ನು ನೋಡಿ ಕನಿಕರವೆನಿಸಿತು. ಆತ ಸಾವಿರ ಬೆಳ್ಳಿಯ ನಾಣ್ಯಗಳನ್ನು ದಾನವಾಗಿ ನೀಡಲು ಮುಂದಾದ.

ಆಗ ಸಂತ ಕೇಳಿದ, 'ಒಂದು ನಿಮಿಷ ತಡೆಯಿರಿ. ನಾನು ಈ ಹಣವನ್ನು ತೆಗೆದುಕೊಳ್ಳುವುದು ಸರಿಯೋ, ತಪ್ಪೋ ಎಂದು ಗೊತ್ತಾಗುತ್ತಿಲ್ಲ. ನೀವು ಶ್ರೀಮಂತರೇ? ನಿಮ್ಮ ಬಳಿ ಇನ್ನಷ್ಟು ಹಣವಿದೆಯೇ?'

'ನಾನು ಈ ಊರಿಗೇ ಶ್ರೀಮಂತ. ನನ್ನ ಬಳಿ ಇದರ ಸಾವಿರ ಪಟ್ಟು ಹಣವಿದೆ' ಎಂದ ಶ್ರೀಮಂತ.

'ಅಷ್ಟು ಹಣ ಸಾಕೇ ಅಥವಾ ಇನ್ನಷ್ಟು ಸಂಪಾದಿಸುವ ಆಸೆಯಿದೆಯೇ?'

'ನಾನು ಈ ಊರಿಗಷ್ಟೇ ಅಲ್ಲ ಇಡೀ ದೇಶಕ್ಕೇ ಶ್ರೀಮಂತ ನಾಗಬೇಕು. ಅದಕ್ಕಾಗಿ ಪ್ರತಿದಿನ ನಾನು ಕಷ್ಟಪಟ್ಟು ದುಡಿಯುತ್ತಿದ್ದೇನೆ'.

'ಶ್ರೀಮಂತನಾಗಬೇಕು ಎಂದು ನೀವು ದೇವರಲ್ಲಿ ಪ್ರಾರ್ಥಿಸುತ್ತೀರ?'

'ಹೌದು, ಪ್ರತಿದಿನ ನಾನು ದೇವರಲ್ಲಿ ಇನ್ನಷ್ಟು ಹಣಕ್ಕಾಗಿ ಬೇಡಿಕೊಳ್ಳುತ್ತೇನೆ' ಎಂದ ಶ್ರೀಮಂತ.

ನಾಣ್ಯಗಳಿದ್ದ ಚೀಲವನ್ನು ಸಂತ ಶ್ರೀಮಂತನ ಕೈಯಲ್ಲಿಡುತ್ತಾ

ಹೇಳಿದ-'ಕ್ಷಮಿಸಿ, ಭಿಕ್ಷುಕನಿಂದ ಶ್ರೀಮಂತನೊಬ್ಬ ದಾನ ತೆಗೆದು ಕೊಳ್ಳುವುದು ಸರಿಯಲ್ಲ!' ಎಂದ.

'ಏನು? ನೀವು ನನ್ನನ್ನುಭಿಕ್ಷುಕ ಎನ್ನುತ್ತಿದ್ದೀರ? ನಿಮ್ಮನ್ನು ನೀವು ಶ್ರೀಮಂತರು ಎಂದು ಭಾವಿಸುವುದು ಮೂರ್ಖತನ ವಲ್ಲವೆ?' ಎಂದು ಕುಪಿತನಾದ ಶ್ರೀಮಂತ.

ಸಂತ ಅಷ್ಟೇ ಶಾಂತಿಯಿಂದ ಹೇಳಿದ- 'ಹೌದು ನಾನು ಶ್ರೀಮಂತನೇ. ಏಕೆಂದರೆ ದೇವರು ನನಗೇನು ಕೊಟ್ಟಿದ್ದಾನೋ ಅಷ್ಟರಲ್ಲಿ ನನಗೆ ತೃಪ್ತಿಯಿದೆ. ಆದರೆ ದೇವರು ಇಷ್ಟೆಲ್ಲಾ ಕೊಟ್ಟಿದ್ದರೂ ಇನ್ನೂ ಬೇಕು ಎಂದು ದೇವರಲ್ಲಿ ಬೇಡುವ ನೀವು ಭಿಕ್ಷುಕರಲ್ಲವೇ?'

**Some people are so poor, all they have is money.**

# ಪೈಥಾಗೊರಸ್‌ನ ಗುಟ್ಟಿನ ಕನಸು



**ಶಂಕರ ಹೆಗಡೆ**
**ನೇಪರವಿಲ್, ಇಲಿನೊಯ್ಸ್**

*[ಇದೊಂದು ಕಾಲ್ಪನಿಕ ಕಥೆ. ಶಾಲೆಯ ಗಣಿತದ ಕ್ಲಾಸಿನಲ್ಲಿ ಕಲಿತ "ಪೈಥಾಗೊರಸ್ ಪ್ರಮೇಯ" ನಿಮಗೂ ನೆನಪಿರಬಹುದು. ನೀವು ಬಹಳ ಸಲ ಉಪಯೋಗಿಸಿರಲೂಬಹುದು. ಆದರೆ ನಿಮಗೆ ಗೊತ್ತೇ? ಪೈಥಾಗೊರಸನಿಗಿಂತ ಸುಮಾರು ೨೫೦ ವರ್ಷಕ್ಕೂ ಮೊದಲೇ ಈ ಸಿದ್ಧಾಂತ ಭಾರತೀಯರಿಗೆ ಗೊತ್ತಿದ್ದಿತು. ಪೈಥಾಗೊರಸ್‌ನು ಕ್ರಿ. ಪೂ. ೫೬೯ ರಿಂದ ೪೭೫ ರ ತನಕ ಬಾಳಿದ ಗ್ರೀಕ್ ಗಣಿತ ಶಾಸ್ತ್ರಜ್ಞ. ಕ್ರಿ.ಪೂ. ೮೦೦ ರ ಸುಮಾರಿಗೆ ಸಂಸ್ಕೃತದಲ್ಲಿರಚಿತವಾದ "ಬೌಧಾಯನ ಶುಲ್ವಸೂತ್ರ" ದಲ್ಲಿ ಈ ಪ್ರಮೇಯಕ್ಕೆ ಸರಿಸಮಾನವಾದ ಪ್ರಮೇಯವೊಂದನ್ನು ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ. ಈ ಕಾಲ್ಪನಿಕ ಕಥೆಯಲ್ಲಿ ಪೈಥಗೊರಸನು ತನ್ನ ಪ್ರಮೇಯವನ್ನು ಕಂಡು ಹಿಡಿಯುವ ಮೊದಲು ಒಂದು ದಿನ ಬೌಧಾಯನನು ಆತನ ಕನಸಿನಲ್ಲಿ ಕಾಣಿಸಿಕೊಂಡು ತನ್ನ ಸಿಧ್ಧಾಂತವನ್ನು ವಿಸ್ತಾರವಾಗಿ ಚರ್ಚಿಸಿದ್ದನೆಂದು ಕಲ್ಪಿಸಲಾಗಿದೆ.]*

*************************

ಇಟಲಿಯ ಕ್ರೋಟೋನ್ ನಗರದಲ್ಲಿ ಕ್ರಿ. ಪೂ. ೫೧೨ರ ಒಂದು ಮಧ್ಯರಾತ್ರಿ. ಪೈಥಾಗೊರಸನು ನಿದ್ದೆಯಿಲ್ಲದೆ ಹೊರಳಾಡುತ್ತಿದ್ದಾನೆ. ಮೂರು ರಾತ್ರಿಯಿಂದ ನಿದ್ದೆ ಬರುತ್ತಿಲ್ಲ. ತಲೆತುಂಬ ಒಂದೇ ವಿಚಾರ. ತನ್ನ ವಿದ್ಯಾಲಯದ ಗಣಿತಶಾಸ್ತ್ರ ವಿಧ್ಯಾರ್ಥಿಯೊಬ್ಬ ಕೇಳಿದ ಪ್ರಶ್ನೆಗೆ ತನ್ನಲ್ಲಿ ಉತ್ತರ ಹೊಳೆಯುತ್ತಿಲ್ಲ ಎಂಬ ಚಿಂತೆ. ಬನ್ನಿ, ಮುಂದಿನ ಕಥೆಯನ್ನು ವಿಸ್ತಾರವಾಗಿ ಪೈಥಾಗೊರಸ್‌ನ ಮುಖದಿಂದಲೇ ಕೇಳೋಣ.

ನಾನು ಕ್ರೋಟೋನಿಗೆ ನನ್ನ ವಿದ್ಯಾಲಯವನ್ನು ಸ್ಥಳಾಂತರಿಸಿ ಈಗಾಗಲೇ ಮೂರು ವರ್ಷಗಳಾಗುತ್ತ ಬಂತು. ನಾನು ಹುಟ್ಟಿ ಬೆಳೆದದ್ದು ಗ್ರೀಕ್ ದೇಶದ ಸಾಮೋಸದಲ್ಲಿ. ತಂದೆ ವ್ಯಾಪರಸ್ಥ. ವ್ಯಾಪಾರಕ್ಕೆಂದು ಹಲವು ಪ್ರದೇಶಗಳಿಗೆ ಹೋಗುತ್ತಿದ್ದಾಗ ನನ್ನನ್ನೂ ಜೊತೆಗೆ ಕರೆದೊಯ್ಯುತ್ತಿದ್ದ. ನನ್ನ ಹತ್ತೊಂಭತ್ತನೇ ವಯಸ್ಸಿನಲ್ಲಿ ಮಿಲೆಟಸ್‌ಗೆ ಹೋದಾಗ ಪ್ರಸಿದ್ಧ ಗಣಿತ ಶಾಸ್ತ್ರಜ್ಞ ಥೇಲ್ಸನನ್ನು ಭೆಟ್ಟಿಯಾಗಿ ಸ್ವಲ್ಪ ಸಮಯ ಕಳೆಯುವ ಅವಕಾಶ ಸಿಕ್ಕಿತು. ಅದು ನನ್ನ ಜೀವನದ ತಿರುವು ಎನ್ನಬಹುದು. ಥೇಲ್ಸನು ನನಗೆ ಗಣಿತ ಶಾಸ್ತ್ರದಲ್ಲಿ ಅಭಿರುಚಿ ಹುಟ್ಟಿಸಿದ. ಗಣಿತದ ಅಭ್ಯಾಸವನ್ನು ಮುಂದುವರಿಸಲು ತುಂಬ ಪ್ರೋತ್ಸಾಹಿಸಿದ. ಥೇಲ್ಸನಿಗೆ ಆಗಲೆ ೮೭ ವರ್ಷ. ನಿವೃತ್ತನಾಗಿದ್ದ. ಥೇಲ್ಸನ ಸಲಹೆಯಂತೆ ಆತನ ಶಿಷ್ಯ ಅನಕ್ಷಿಮಾಂಡರ್ ಅವನ ಕ್ಲಾಸಿಗೆ ಸೇರಿಕೊಂಡು ಕೆಲಕಾಲ ಗಣಿತವನ್ನು ಅಭ್ಯಾಸ ಮಾಡಿದೆ.

ನನಗೆ ತತ್ವಶಾಸ್ತ್ರದಲ್ಲಿ ಕೂಡ ತುಂಬ ಆಸಕ್ತಿ. ನನ್ನ ೩೫ನೇ ವಯಸ್ಸಿನಲ್ಲಿ ಇಜಿಪ್ತಿಗೆ ಹೋಗಿ ಅಲ್ಲಿ ಹತ್ತು ವರ್ಷಗಳ ಕಾಲ ಇದ್ದೆ. ಆಗ ಕೆಲವು ಮಂದಿರಗಳಿಗೆ ಭೆಟ್ಟಿ ಕೊಟ್ಟು ಅಲ್ಲಿಯ ಪೂಜಾರಿಗಳೊಂದಿಗೆ ತತ್ವಜ್ಞಾನದ ಚರ್ಚೆಗಳಲ್ಲಿ ಸಕ್ರಿಯವಾಗಿ ಬಾಗವಹಿಸುತ್ತಿದ್ದೆ. ಅಷ್ಟೇ ಅಲ್ಲ, ಅಲ್ಲಿಯ ಮಂದಿರವೊಂದರಲ್ಲಿ ಪೂಜಾರಿಯಾಗಲು ಅವಶ್ಯವಾದ ಎಲ್ಲ ಕರ್ಮಾಂಗಗಳನ್ನು ಕಲಿತು ಪೂಜಾರಿ ಪಟ್ಟವನ್ನು ಸಹ ಗಳಿಸಿಕೊಂಡಿದ್ದೆ. ಇಜಿಪ್ತಿನ ರಾಜಕೀಯ ಬದಲಾವಣೆಯಿಂದಾಗಿ, ನನ್ನನ್ನು ಸೆರೆ ಹಿಡಿದು ಬ್ಯಾಬಿಲೋನಿಯದ ಒಂದು ಜೇಲಿನಲ್ಲಿ ಇಡಲಾಯಿತು. ಮೂರು ವರ್ಷ ಜೇಲಿನಲ್ಲಿದ್ದೆ. ಇಜಿಪ್ತಿನ ರಾಜಕೀಯದಲ್ಲಿ ಮತ್ತೊಮ್ಮೆ ಬದಲಾವಣೆಯಾಗಿ, ನನ್ನನ್ನು ಜೇಲಿನಿಂದ ಮುಕ್ತ ಮಾಡಿ ತಿರುಗಿ ಸಾಮೋಸಕ್ಕೆ ಕಳಿಸಿದರು.

ನನಗಾಗಲೇ ವಯಸ್ಸು ಐವತ್ತರ ಸಮೀಪ. ತತ್ವಶಾಸ್ತ್ರ, ಗಣಿತಶಾಸ್ತ್ರಗಳೆರಡರಲ್ಲಿಯೂ ಸಾಕಷ್ಟು ಅನುಭವ ಪಡೆದಿದ್ದೆ. ಬಂದ ಸ್ವಲ್ಪ ದಿನಗಳಲ್ಲಿಯೇ ವಿದ್ಯಾಲಯವೊಂದನ್ನು ಸ್ಥಾಪಿಸಿದೆ. ಒಂದೆರಡು ವರ್ಷ ನಡೆಯಿತು. ಆದರೆ ನನಗೇಕೋ ಅಲ್ಲಿಯ ವಾತಾವರಣ ಹಿಡಿಸಲಿಲ್ಲ. ಮೂರು ವರ್ಷಗಳ ನಂತರ ನನ್ನ ವಿದ್ಯಾಲಯವನ್ನು ಇಟಲಿಯ ಕ್ರೋಟೋನ್ ಎಂಬ ಈ ಊರಿಗೆ ಸ್ಥಳಾಂತರಿಸಿದೆ. ತತ್ವಶಾಸ್ತ್ರ, ಗಣಿತಶಾಸ್ತ್ರಗಳ ಸಂಶೋಧನೆಯೂ ಪ್ರಗತಿಪಥದಲ್ಲಿದೆ. ಆದರೆ ಈ ಒಂದು ಸಮಸ್ಯೆ ಎರಡು ತಿಂಗಳಿಂದ ಕಾಡುತ್ತಿದೆ.

ವಿದ್ಯಾರ್ಥಿಯೊಬ್ಬ ಕೇಳಿದ ಲಂಬಕೋನ ತ್ರಿಭುಜದ ಸಮಸ್ಯೆಯೇನೋ ಸರಳವಾದದ್ದೆನಿಸುತ್ತದೆ. ತ್ರಿಭುಜಗಳ ಮೇಲೆ ಈಗಾಗಲೇ ಕೆಲವು ಸಂಶೋಧನೆಗಳನ್ನು ಮಾಡಿದ ನನಗೆ ಕಷ್ಟವಾಗಲಾರದು ಎಂದಿದ್ದೆ. ಆದರೇಕೋ ಏನೂ ಸೂಚಿಸುತ್ತಿಲ್ಲ. ತ್ರಿಭುಜಗಳ ಗುಣಧರ್ಮಗಳನ್ನು ಕುರಿತು ಈಗಾಗಲೇ ಕೆಲವು ಸಿದ್ಧಾಂತಗಳನ್ನು ಕಂಡುಹಿಡಿದಿದ್ದೇನೆ. ತ್ರಿಭುಜದ ಯಾವುದೇ ಎರಡು ಬಾಹುಗಳ ಮೊತ್ತ ಮೂರನೆಯ ಬಾಹುವಿಗಿಂತ ದೊಡ್ಡದಿರುತ್ತದೆಯೆಂದು ಮನಗಂಡಿದ್ದೇನೆ. ಯಾವುದೇ ತ್ರಿಭುಜದ ಮೂರೂ ಕೋನಗಳ ಮೊತ್ತ ಎರಡು ಲಂಬ ಕೋನಗಳಿಗೆ ಸರಿ ಇರುತ್ತದೆ ಎಂದು ಕೂಡ ಸಾಧಿಸಿದ್ದೇನೆ. ಆದರೆ ಲಂಬಕೋನ ತ್ರಿಭುಜದಲ್ಲಿ ವಿಕರ್ಣಕ್ಕೂ ಉಳಿದೆರಡು ಬಾಹುಗಳಿಗೂ ಇದಕ್ಕೂ ಹೆಚ್ಚಿನ ವಿಶಿಷ್ಟ ಸಂಬಂಧವೇನಾದರೂ ಇದೆಯೇ ಎಂಬ ವಿದ್ಯಾರ್ಥಿಯ ಪ್ರಶ್ನೆಗೆ ನಿಖರವಾದ ಉತ್ತರ ಕೊಡಲಾರದೆ ತೊಳಲಾಡುತ್ತಿದ್ದೇನೆ.

ನಾನು ಇಜಿಪ್ತಿನಲ್ಲಿದ್ದಾಗ ಹಲವರು ಹೇಳುತ್ತಿದ್ದರು: ಭಾರತೀಯರು ಗಣಿತಶಾಸ್ತ್ರ, ಖಗೋಲಶಾಸ್ತ್ರಗಳಲ್ಲಿ ಬಹಳ ವರ್ಷಗಳಿಂದ ಸಂಶೋಧನೆ ಮಾಡುತ್ತ ಬಂದಿದ್ದಾರೆ. ನೀನೇಕೆ ಭಾರತಕ್ಕೆ ಹೋಗಿ ಸ್ವಲ್ಪ ಸಮಯ ಕಳೆಯಬಾರದು ಎಂದು ಸಹ ಕೇಳುತ್ತಿದ್ದರು. ಆದರೆ ನನಗೆ ಆ ಸಂದರ್ಭ ಒದಗಿ ಬರಲಿಲ್ಲ. ನಿಜವಾಗಿಯೂ ಯಾವುದಾದರೂ ಭಾರತೀಯ ಗಣಿತ ಶಾಸ್ತ್ರಜ್ಞನು ಲಂಬಕೋನ ತ್ರಿಭುಜದ ಈ ಪ್ರಶ್ನೆಗೆ ಈಗಾಗಲೇ ಸಮಂಜಸ ಉತ್ತರ ಸಾಧಿಸಿರಬಹುದೇ? ಇದನ್ನೇ ವಿಚಾರ ಮಾಡುತ್ತ ನಾನು ನಿದ್ದೆಹೋದೆ. ಗಾಢವಾದ ನಿದ್ದೆ ಬಂತು.”




ನೋಡುತ್ತೇನೆ; ಎದುರಿಗೆ ಯಾರೋ ನಿಂತಿದ್ದಾರೆ. ಕಂದು ಬಣ್ಣ, ತೇಜಸ್ವಿ ಮುಖ, ಹೊಳೆಯುವ ಕಣ್ಣುಗಳು, ಸೊಂಪಾಗಿ ಬೆಳೆದ ಶುಭ್ರ ಬಿಳಿಯ ಗಡ್ಡ. ನೋಡಿದ ತಕ್ಷಣ ಗೌರವ ಬರುವಂತಹ ವ್ಯಕ್ತಿ.

“ತಾವು ಯಾರು, ಸ್ವಾಮಿ” ನಾನು ಅನುಮಾನಿಸುತ್ತಲೇ ಕೇಳಿದ.

“ನೀವು ಈಗ ತಾನೆ ನೆನೆಸಿಕೊಂಡಿರಲ್ಲ, ಯಾರಾದರೂ ಭಾರತೀಯರು ನನ್ನ ಈ ಸಮಸ್ಯೆಗೆ ಉತ್ತರವನ್ನು ಕಂಡು ಹಿಡಿದಿದ್ದಿರಬಹುದೇ ಎಂದು. ನಾನೇ ಆ ಭಾರತೀಯ. ನನ್ನ ಹೆಸರು ಬೌಧಾಯನ. ನಿಮಗೆ ತೀಳಿದಿರಲಿಕ್ಕಿಲ್ಲ, ಗಣಿತ ಮತ್ತು ಖಗೋಲ ಶಾಸ್ತ್ರಗಳಲ್ಲಿ ಸುಮಾರು ಮುನ್ನೂರಕ್ಕೂ ಹೆಚ್ಚು ವರ್ಷಗಳಿಂದ ನಾವು ಭಾರತೀಯರು ಸಂಶೋಧನೆಗಳನ್ನು ಮಾಡುತ್ತ ಬಂದಿದ್ದೇವೆ. ಇನ್ನೂರು ಮುನ್ನೂರು ವರ್ಷಗಳ ನಂತರವೂ ದುರ್ದೈವದಿಂದ ಈ ಸಂಶೋಧನೆಗಳು ಪಾಶ್ಚಾತ್ಯರಿಗೆ ತಲುಪಲಿಲ್ಲ. ಹಾಗಾಗಿ ಇವುಗಳ ಪುನರ್ ಆವಿಷ್ಕಾರಗಳಾಗುತ್ತಿವೆ. ನೀವು ನನ್ನನ್ನು ನೆನೆಸಿಕೊಂಡಾಗ ನಾನು ದೇವಲೋಕದಲ್ಲಿದ್ದೆ. ತಕ್ಷಣ ಮನೋವೇಗದಲ್ಲಿ ಇಳಿದು ಬಂದೆ. ದೇವಲೋಕದಲ್ಲಿರುವವರಿಗೆ ಇದೊಂದು ಸೌಕರ್ಯ. ಭೂಲೋಕದಿಂದ ಯಾರಾದರೂ ಆರ್ತವಾಗಿ ನೆನೆಸಿಕೊಂಡರೆ ಒಂದೆರಡು ಕ್ಷಣಗಳಲ್ಲಿಯೇ ಕಾಣಿಸಿಕೊಳ್ಳಬಹುದು. “ ಬೌಧಾಯನ ಉತ್ತರಿಸಿದ.

ಬೌಧಾಯನನು ಮೂಲತಃ ಗಣಿತ ಶಾಸ್ತ್ರಜ್ಞನಲ್ಲ. ಆತನು ಕ್ರಿ. ಪೂ. ೮೫೦ ೭೫೦ ರ ಮಧ್ಯೆ ಬಾಳಿದ ಒಬ್ಬ ವೇದಪಾರಂಗತ ಋಷಿ. ಇಂದಿಗೂ ಪ್ರಚಲಿತವಿರುವ ಹಲವು ಧರ್ಮಸೂತ್ರಗಳನ್ನು ಬೌಧಾಯನ ಮುನಿಯು ರಚಿಸಿದ್ದಾನೆ. ಈ ಸೂತ್ರಗಳು ವೇದಗಳ ಅನುಬಂಧಗಳಾಗಿವೆ. ಶುಲ್ವಸೂತ್ರವು ಈ ಧರ್ಮಸೂತ್ರಗಳ ಒಂದು ಭಾಗ. ಪ್ರಾಚೀನ ಭಾರತದ ಅನೇಕ ಗಣಿತಸೂತ್ರಗಳ ಮಾಹಿತಿ ಶುಲ್ವಸೂತ್ರದಲ್ಲಿ ಕಾಣಸಿಗುತ್ತವೆ. ಶುಲ್ವಸೂತ್ರದ ಮುಖ್ಯ ಉದ್ದೇಶ ಯಜ್ಞಕುಂಡಗಳ ವಿನ್ಯಾಸ ಮತ್ತು ನಿರ್ಮಾಣಕ್ರಮವನ್ನು ಹಂತ ಹಂತವಾಗಿ ವಿವರಿಸುವದು. ಯಜ್ಞಕ್ಕೆ ಬೇಕಾಗುವ ಸಲಕರಣೆಗಳು, ಅವುಗಳ ಗುಣಧರ್ಮಗಳ ವಿವರಗಳನ್ನು ಸಹ ಶುಲ್ವಸೂತ್ರ ತಿಳಿಸುತ್ತದೆ. ಯಜ್ಞಕುಂಡಗಳನ್ನು ನಿರ್ಮಿಸುವಾಗ ಋಷಿ ಮುನಿಗಳು ಮಾಪಕ ಸೂತ್ರವನ್ನು ಬಳಸುತ್ತಿದ್ದರು. ಮಾಪನಕ್ಕಾಗಿ ಬಳ್ಳಿ, ಹಗ್ಗ ಮುಂತಾದ ಸಲಕಣೆಗಳನ್ನು ಉಪಯೋಗಿಸುತ್ತಿದ್ದರು. ಯಜ್ಞಕುಂಡಗಳ ಮಾಪನ ಮತ್ತು ರಚನೆಗಳ ನಿಖರತೆಯನ್ನು ಕಾಯ್ದುಕೊಳ್ಳಲು ಗಣಿತ ಅವಶ್ಯ. ಇಂತಹ ಸಂದರ್ಭದಲ್ಲೇ ರೇಖಾಗಣಿತ ಹಾಗೂ ಬೀಜಗಣಿತ ಸೂತ್ರಗಳ ಆವಿಷ್ಕಾರವಾಗಿತ್ತು. ಬೌಧಾಯನನ ಶುಲ್ವಸೂತ್ರದಲ್ಲಿ ಅಂಕಗಣಿತ ಮತ್ತು ರೇಖಾಗಣಿತಕ್ಕೆ

ಸಂಬಂಧಪಟ್ಟ ಅನೇಕ ಸೂತ್ರಗಳಿವೆ. ಪೈಥಾಗೊರಸ್ ಪ್ರಮೇಯದ ಇನ್ನೊಂದು ರೂಪವಾದ ಬೌಧಾಯನ ಸಿದ್ಧಾಂತವೂ ಈ ಶುಲ್ವಸೂತ್ರದಲ್ಲಿದೆ.

"ಹಾಗಾದರೆ ನೀವು ತ್ರಿಭುಜಗಳ ಗುಣಧರ್ಮಗಳ ಮೇಲೆ ಸಾಕಷ್ಟು ಸಂಶೋಧನೆಗಳನ್ನು ಮಾಡಿದ್ದಿರಬೇಕಲ್ಲವೇ." ನಾನು ಕೇಳಿದೆ

"ಆವಶ್ಯವಾಗಿ ಮಾಡಿದ್ದೇವೆ. ನೀನು ಚಿಂತಿಸುತ್ತಿರುವ ಸಮಸ್ಯೇಯಾದರೂ ಏನು ? " ಬೌಧಾಯನ ಕೇಳಿದ.

"ಲಂಬಕೋನ ತ್ರಿಭುಜದಲ್ಲಿ ವಿಕರ್ಣಕ್ಕೂ ಉಳಿದೆರಡು ಬಾಹುಗಳಿಗೂ ಏನಾದರೂ ವಿಶಿಷ್ಟ ಸಂಬಂದವಿದೆಯೇ ಎಂದು ನನ್ನ ವಿದ್ಯಾರ್ಥಿಯೊಬ್ಬ ಕೇಳಿದ ಪ್ರಶ್ನೆಗೆ ನನ್ನಿಂದ ನಿಖರವಾದ ಉತ್ತರ ಕಂಡು ಹಿಡಿಯಲಾಗುತ್ತಿಲ್ಲ. ಎಲ್ಲ ತ್ರಿಭುಜಗಳಂತೆ, ಲಂಬಕೋನ ತ್ರಿಭುಜದಲ್ಲಿಯೂ ವಿಕರ್ಣವು, ಉಳಿದೆರಡು ಬಾಹುಗಳ ಮೊತ್ತಕ್ಕಿಂತ ಚಿಕ್ಕದಿರುತ್ತದೆ ಎಂದು ಗೊತ್ತು. ಆದರೆ ಇದಕ್ಕಿಂತ ಹೆಚ್ಚಿನ ವಿಶಿಷ್ಟ ಸಂಬಂಧವಿದೆಯೇ ಎನ್ನುವದೇ ನನ್ನನ್ನು ಕಾಡುತ್ತಿರುವ ಪ್ರಶ್ನೆ. ಸುಮಾರು ಎರಡು ತಿಂಗಳುಗಳಿಂದ ಪ್ರಯತ್ನಿಸುತ್ತಿದ್ದೇನೆ."

"ಈ ಸಮಸ್ಯೆಗೆ ನಾನು ಎರಡು ನೂರಾ ಐವತ್ತು ವರ್ಷಗಳ ಮೊದಲೇ ಪರಿಹಾರ ಕಂಡು ಹಿಡಿದಿದ್ದೇನೆ. ಇದನ್ನು ಸಿದ್ಧಾಂತರೂಪದಲ್ಲಿ ಪ್ರಸ್ತುತ ಪಡಿಸಿದ್ದಲ್ಲದೆ, ತಾರ್ಕಿಕವಾಗಿ ಸಾಧಿಸಿದ್ದೇನೆ. ಇದನ್ನೆಲ್ಲ ನನ್ನ ಶುಲ್ವಸೂತ್ರ ಗ್ರಂಥದಲ್ಲಿ ಉಲ್ಲೇಖಿಸಿದ್ದೇನೆ."

"ನಾನು ಎಷ್ಟು ದಿನಗಳಿಂದ ಇದರ ಸಲುವಾಗಿ ಹೋರಾಡುತ್ತಿದ್ದೇನೆ! ನೀವು ಹೇಗೆ ಈ ಸಂಬಂಧವನ್ನು ಗುರುತಿಸಿದಿರಿ? ಎಷ್ಟು ಸಮಯ ಬೇಕಾಯಿತು ?"

"ನಾವು ಗಣಿತ ಶಾಸ್ತ್ರವನ್ನು ಅಭ್ಯಾಸಿಸುವದು ಕೇವಲ ಮನಸ್ಸಿನ ತಾರ್ಕಿಕ ಕುತೂಹಲಕ್ಕಾಗಿಯಲ್ಲ. ದಿನನಿತ್ಯ ಜೀವನದ ಇತರ ಸಮಸ್ಯೆಗಳ ಪರಿಹಾರಗಳನ್ನು ಕಂಡು ಹಿಡಿಯುವ ಒಂದು ಸಾಧನವಾಗಿ ಗಣಿತದ ತತ್ವಗಳನ್ನು ಬಳಸುತ್ತೇವೆ. ಅಷ್ಟೇ ಅಲ್ಲ, ಪರಿಹಾರವೊಂದನ್ನು ಕಂಡಾಗ ಅದು ಸರಿಯೋ ತಪ್ಪೋ ಎಂದು ಪರಿಶೀಲಿಸಲು ಕೂಡ ಗಣಿತದ ತತ್ವಗಳನ್ನೆ ಉಪಯೋಗಿಸುತ್ತೇವೆ"

"ತುಂಬ ಸ್ವಾರಸ್ಯಕರವಾಗಿದೆ. ಕೇಳುತ್ತಿದ್ದೇನೆ. ವಿಸ್ತಾರವಾಗಿ ಹೇಳಿರಿ." ನನ್ನ ಕುತೂಹಲವನ್ನು ತಡೆಯಲಾರದೆ ಕೇಳಿಕೊಂಡೆ.

ಭೌಧಯನ ಮುಂದುವರಿಸಿದ. "ಅಗ್ನಿ ಹಿಂದುಗಳಿಗೆ ಬಹುಮುಖ್ಯ ದೇವತೆ. ಎಲ್ಲ ಮಂಗಲ ಕಾರ್ಯಗಳೂ ಅಗ್ನಿ ಸಮ್ಮುಖದಲ್ಲಿಯೇ ನಡೆಯುತ್ತವೆ. ಯಜ್ಞ ಯಾಗಾದಿಗಳು ನಮ್ಮ ಜೀವನದ ಬಹುಮುಖ್ಯ ಅಂಗ. ಪ್ರತಿದಿನ ಊಟಕ್ಕೆ ಮೊದಲು ಅಗ್ನಿಪೂಜೆಯಾಗಬೇಕು. ಅಲ್ಲದೆ ದೇಶಕಲ್ಯಾಣಕ್ಕಾಗಿ ದೇವತೆಗಳನ್ನು ತೃಪ್ತಿಪಡಿಸಲು ಆಗಾಗ ದೊಡ್ಡ ಪ್ರಮಾಣದ ಸಾರ್ವಜನಿಕ ಯಜ್ಞಗಳನ್ನು ಕೈಗೊಳ್ಳುತ್ತೇವೆ. ಇತರ ದೇವತೆಗಳನ್ನು ಆಹ್ವಾನಿಸುವದೂ ಅಗ್ನಿಯ ಮುಖಾಂತರವೇ. ಬೆಂಕಿ ಅಗ್ನಿ ದೇವತೆಯ ಸಂಕೇತ. ಹವನಕುಂಡದಲ್ಲಿ (ಹೋಮಕುಂಡ, ಯಜ್ಞಕುಂಡ ) ಬೆಂಕಿಯನ್ನು ವಿಧಿವತ್ತಾಗಿ ಸ್ಥಾಪಿಸಿ ಅಗ್ನಿ ದೇವತೆಯನ್ನು ಆಹ್ವಾನಿಸಲಾಗುತ್ತದೆ. ಅಗ್ನಿ ಮತ್ತು ಇತರ ದೇವತೆಗಳನ್ನು ಸಂತೃಪ್ತಪಡಿಸಲು ತುಪ್ಪ, ಹಣ್ಣು ಹಂಪಲುಗಳು, ತೆಂಗಿನಕಾಯಿ, ಕಬ್ಬು ಇತ್ಯಾದಿ ವಿವಿಧ ಖಾದ್ಯಗಳನ್ನು ಅಗ್ನಿಗೆ ಅರ್ಪಿಸಿ ಬೇಡಿಕೊಳ್ಳುತ್ತೇವೆ. ಯಾವುದೇ ಯಜ್ಞ ಯಶಸ್ವಿಯಾಗಲು, ಫಲಕಾರಿಯಾಗಲು ಹೋಮಕುಂಡ ನಿರ್ದಿಷ್ಟ ಆಕಾರ ಮತ್ತು ಮಾಪನವನ್ನು ಹೊಂದಿರಬೆಕಾಗುತ್ತದೆ ಮತ್ತು ನಿರ್ದಿಷ್ಟ ಗುಣಧರ್ಮಗಳನ್ನೊಳಗೊಂಡಿರಬೇಕಾಗುತ್ತದೆ. ಮಾಪನದಲ್ಲಿ ಕಿಂಚಿತ್ತು ಬದಲಾವಣೆಯಾದರೂ ಯಜ್ಞ ಸಂಪೂರ್ಣ ಸಫಲವಾಗುವದಿಲ್ಲ. ಮಾಪನದಲ್ಲಿ ನಿಖರತೆಯನ್ನು ಕಾಯ್ದುಕೊಳ್ಳಲು ನಾವು ಗಣಿತ ಸಿದ್ಧಾಂತಗಳನ್ನು ಉಪಯೋಗಿಸುತ್ತೇವೆ."

ನಾನು ಕೇಳಿದೆ: "ಹವನಕುಂಡ ಯಾವ ಆಕಾರದ್ದಿರುತ್ತದೆ? ಎಂಥ ಹವನಕುಂಡದ ವಿನ್ಯಾಸದಲ್ಲಿ ಲಂಬಕೋನ ತ್ರಿಭುಜದ ಸಮಸ್ಯೆ ಎದುರಾಯಿತು ?" ಎಂದು.

"ಎಲ್ಲ ಹವನಕುಂಡಗಳೂ ಸಾಮಾನ್ಯವಾಗಿ ಚೌರಸ ಅಥವ ವರ್ತುಳ ಆಕಾರದ್ದಿರುತ್ತವೆ. ಒಂದು ಚೌರಸಾಕಾರದ ಹವನಕುಂಡವನ್ನು ತೆಗೆದುಕೊಳ್ಳಿ. ಕೆಲವೊಮ್ಮೆ ಅದರ ಎರಡುಪಟ್ಟು ವಿಸ್ತೀರ್ಣವುಳ್ಳ ಇನ್ನೊಂದು ಚೌರಸಾಕಾರದ ಹೋಮಕುಂಡವನ್ನು ಕಟ್ಟಬೇಕಾಗುತ್ತದೆ. ಈ ದೊಡ್ಡ ಹೋಮಕುಂಡದ ಭುಜ ಎಷ್ಟಿರಬೇಕು ಎಂಬ ಪ್ರಶ್ನೆ ಉದ್ಭವಿಸಿತು. ಸಣ್ಣ ಕುಂಡದ ಭುಜದ ಎರಡು ಪಟ್ಟು ಉದ್ದದ ಭುಜದಿಂದ ದೊಡ್ಡ ಕುಂಡ ರಚಿಸಿದರೆ, ಅದರ ವಿಸ್ತೀರ್ಣ ಸಣ್ಣದರ ನಾಲ್ಕರಷ್ಟಾಗುತ್ತದೆ. ಅಂದರೆ ವಿಸ್ತೀರ್ಣ ಎರಡು ಪಟ್ಟು ಇರಬೇಕೆಂದರೆ, ಭುಜ ಸಣ್ಣ ಕುಂಡದ ಎರಡು ಪಟ್ಟಿಗಿಂತ ಸಣ್ಣದಿರಬೇಕು. ಆದ್ದರಿಂದ ಮೂಲ ಚೌರಸದ ಕರ್ಣದ ಮೇಲೆ ಚೌರಸವನ್ನು ರಚಿಸಿ ನೋಡಿದೆವು. ಈ ಚೌರಸದ ಎರಡು ಕರ್ಣಗಳು ಒಂದಕ್ಕೊಂದು ಛೇದಿಸಿ ಚೌರಸವನ್ನು ನಾಲ್ಕು ತ್ರಿಭುಜಗಳಾಗಿ ವಿಭಜಿಸುತ್ತದಷ್ಟೆ. ಪ್ರತಿ ತ್ರಿಭುಜವೂ ಮೂಲ ಚೌರಸಾರ್ಧ ತ್ರಿಭುಜದ ಕನ್ನಡಿ ಪ್ರತಿಬಿಂಬವೆಂಬುದನ್ನು ಸುಲಭವಾಗಿ

ಮನಗಾಣಬಹುದು. ಅಂದರೆ ಕರ್ಣದ ಮೇಲೆ ರಚಿಸಿದ ಚೌರಸದ ವಿಸ್ತೀರ್ಣ, ಮೂಲ ಚೌರಸದ ಎರಡು ಪಟ್ಟು ಇರುತ್ತದೆ."

"ಹಾಗಾದರೆ ಒಂದು ಲಂಬಕೋನ ತ್ರಿಭುಜದ ಎರಡು ಬಾಹುಗಳು ಸಮಾನವಿದ್ದಾಗ, ವಿಕರ್ಣದ ಮೇಲಿನ ವರ್ಗವು ಉಳಿದೆರಡು ಬಾಹುಗಳ ವರ್ಗಗಳ ಮೊತ್ತಕ್ಕೆ ಸಮಾನವಿರುತ್ತದೆ ಎಂದಂತಾಯಿತು. ಲಂಬಕೋನ ತ್ರಿಭುಜದ ಬಾಹುಗಳು ಭಿನ್ನ ಭಿನ್ನ ಮಾಪನಗಳಿದ್ದಾಗಲೂ ಈ ಸಿದ್ಧಾಂತವು ಅನ್ವಯಿಸುತ್ತದೆಯೇ?"

"ಅವಶ್ಯವಾಗಿ. ಈ ಪ್ರಶ್ನೆ ನಮಗೆ ಎದುರಾದದ್ದು ಹೀಗೆ. ಎರಡು ವಿಭಿನ್ನ ಮಾಪನಗಳ ಚೌರಸಾಕಾರದ ಹೋಮಕುಂಡಗಳಿವೆಯೆನ್ನಿ. ಕೆಲವೊಮ್ಮೆ ನಮಗೆ ಈ ಎರಡು ಹೋಮಕುಂಡಗಳ ವಿಸ್ತೀರ್ಣಗಳ ಮೊತ್ತಕ್ಕೆ ಸಮನವಾದ ವಿಸ್ತೀರ್ಣವುಳ್ಳ ಇನ್ನೊಂದು ಚೌರಸಾಕಾರದ ಹೋಮಕುಂಡವನ್ನು ನಿರ್ಮಿಸಬೇಕಾಗುತ್ತದೆ. ರೇಖಾಗಣಿತದ ಭಾಷೆಯಲ್ಲಿ ಹೇಳಬೇಕೆಂದರೆ ಒಂದು ಆಯತದ ಉದ್ದ ಮತ್ತು ಅಗಲಗಳು ಬೇರೆ ಬೇರೆಯಾಗಿ ಉಂಟು ಮಾಡುವ ಚೌರಸಗಳ ಒಟ್ಟು ವಿಸ್ತೀರ್ಣವುಳ್ಳ ಚೌರಸವೊಂದನ್ನು ರಚಿಸುವ ಸಮಸ್ಯೆ. ಈ ಚೌರಸದ ಬಾಹು ಎಷ್ಟಿರಬೇಕು ಎಂದು ನಿರ್ಧರಿಸಬೇಕು. "

"ತಿಳಿಯಿತು. ಈ ಚೌರಸದ ಬಾಹು ಮೂಲ ಆಯತದ ಕರ್ಣದಷ್ಟಿರಬೇಕೆಂದು ನಿರ್ಧರಿಸಿದಿರಿಯಲ್ಲವೇ?

"ಹೌದು. ನೀವು ಸರಿಯಾಗಿ ಊಹಿಸಿದಿರಿ. ಆದರೆ ಇದನ್ನು ಸಾಧಿಸುವದು, ಚೌರಸವನ್ನು ಇಮ್ಮಡಿಸುವ ಸಮಸ್ಯೆಯ ಸಾಧನೆಯಷ್ಟು ಸುಲಭವಾಗಿರಲಿಲ್ಲ. ಮೊದಲು ಆಯತವನ್ನು ವಿಸ್ತರಿಸಿ ಅದರ ಉದ್ದ ಮತ್ತು ಅಗಲದ ಮೊತ್ತಕ್ಕೆ ಸಮಯಾದ ಬಾಹುವುಳ್ಳ ಚೌರಸವೊಂದನ್ನು ರಚಿಸಿದೆವು. ಅದರ ಒಳಗಡೆ ಆಯತದ ಕರ್ಣದ ಮೇಲೆ ಇನ್ನೊಂದು ಚೌರಸವನ್ನು ರಚಿಸಿದೆವು. ದೊಡ್ಡ ಚೌರಸದ ವಿಸ್ತೀರ್ಣವನ್ನು ಎರಡು ವಿಭಿನ್ನ ವಿಧಾನದಿಂದ ಲೆಕ್ಕ ಮಾಡಿದಾಗ ಸಮಸ್ಯೆಗೆ ಪರಿಹಾರ ಸಿಕ್ಕಿತು. ಇದನ್ನೇ ನಾನು "ಒಂದು ಆಯತದ ಉದ್ದ ಮತ್ತು ಅಗಲಗಳು ಬೇರೆ ಬೇರೆಯಾಗಿ ಉಂಟು ಮಾಡುವ ಚೌರಸಗಳ ಒಟ್ಟು ವಿಸ್ತೀರ್ಣವನ್ನು ಆ ಆಯತದ ಕರ್ಣವು ಉಂಟು ಮಾಡುತ್ತದೆ." ಎಂದು ಸಿದ್ಧಾಂತ ರೂಪದಲ್ಲಿ ನನ್ನ ಶುಲ್ವಸೂತ್ರ ಗ್ರಂಥದಲ್ಲಿ ಉಲ್ಲೇಖಿಸಿದ್ದೇನೆ. ಆಯತದ ಕರ್ಣವು ಆಯತವನ್ನು ಎರಡು ಲಂಬಕೋನ ತ್ರಿಭುಜವಾಗಿ ವಿಭಜಿಸುತ್ತದಷ್ಟೆ. ಆದ್ದರಿಂದ ಈ ಸಿದ್ಧಾಂತವನ್ನು ಲಂಬಕೋನ ತ್ರಿಭುಜಕ್ಕೆ ಅನ್ವಯಿಸುವಂತೆ ಕೂಡ ಪ್ರಸ್ತುತಪಡಿಸಬಹುದು"

ಬೌಧಾಯನರ ಆಯತದ ಸಿದ್ಧಾಂತವನ್ನು ನಾನು ಲಂಬಕೋನ ತ್ರಿಭುಜದ ಪ್ರಮೇಯವಾಗಿ ಹೇಗೆ ಪರಿವರ್ತಿಸಬಹುದು ಎಂಬುದು ನನಗೆ ತಕ್ಷಣ ಹೊಳೆಯಿತು. ಆದರೆ ಹವನಕುಂಡದ ನಿರ್ಮಾಣದ ಬಗ್ಗೆ ಇನ್ನೊಂದು ಸಂಶಯ ಬಂತು.

"ಅರ್ಥವಾಯಿತು. ಆದರೂ ಇನ್ನೊಂದು ಚಿಕ್ಕ ಪ್ರಶ್ನೆ. ಲಂಬಕೋನವೊಂದರ ಕರ್ಣದ ಲೆಕ್ಕ ಮಾಡುವಾಗ, ವರ್ಗಮೂಲವನ್ನು ಕಂಡು ಹಿಡಿಯಬೇಕಾಗುತ್ತದೆಯಷ್ಟೇ. ಹಲವು ಸನ್ನಿವೇಷಗಳಲ್ಲಿ ವರ್ಗಮೂಲವು ಪೂರ್ಣಾಂಕವಿರಲಿಕ್ಕಿಲ್ಲ. ಅಷ್ಟೇ ಏಕೆ, ಅದು ಭಾಗಲಬ್ಧ ಸಂಖೆ ಕೂಡ ಇರಲಿಕ್ಕಿಲ್ಲ. ಅಭಾಗಲಬ್ಧ ಸಂಖೆ ಇರಬಹುದು. ಅಂಥ ಸಂದರ್ಭಗಳಲ್ಲಿ ನೀವು ವರ್ಗಮೂಲದಷ್ಟು ಬಾಹುವಿರುವ ಹೋಮಕುಂಡವನ್ನು ಹೇಗೆ ರಚಿಸುತ್ತೀರಿ?"

"ಉತ್ಕೃತಮ ಪ್ರಶ್ನೆ. ಒಂದೆರಡು ಉದಾಹರಣೆ ತೆಗೆದುಕೊಳ್ಳಿ. ಎರಡು ಚೌರಸಾಕಾರದ ಹೋಮಕುಂಡಗಳ ಬಾಹುಗಳು ಅನುಕ್ರಮವಾಗಿ ೩ ಮತ್ತು ೪ ಮೂಲಮಾನಗಳಿವೆಯೆನ್ನಿ. ಆಗ ೫ ಮೂಲಮಾನವಿರುವ ಚೌರಸಾಕಾರದ ಹೋಮಹೊಂಡದ ಕ್ಷೇತ್ರ ಎರಡು ಸಣ್ಣ ಹೋಮಕುಂಡಗಳ ಕ್ಷೇತ್ರಗಳ ಮೊತ್ತಕ್ಕೆ ಸರಿ ಇರುತ್ತದೆ. ಇದೇ ಪ್ರಕಾರ ಎರಡು ಚೌರಸಾಕಾರದ ಹೋಮಕುಂಡಗಳ ಬಾಹುಗಳು ಅನುಕ್ರಮವಾಗಿ ೫ ಮತ್ತು ೧೨ ಮೂಲಮಾನಗಳಿವೆಯೆನ್ನಿ. ಆಗ ೧೩ ಮೂಲಮಾನವಿರುವ ಚೌರಸಾಕಾರದ ಹೋಮಹೊಂಡದ ಕ್ಷೇತ್ರ ಎರಡು ಸಣ್ಣ ಹೋಮಕುಂಡಗಳ ಕ್ಷೇತ್ರಗಳ ಮೊತ್ತಕ್ಕೆ ಸರಿ ಇರುತ್ತದೆ. ಇಂಥ ಹತ್ತೆಂಟು ಉದಾಹಣೆಗಳನ್ನು ನಾವು ಈಗಾಗಲೇ ಕಂಡು ಹಿಡಿದಿದ್ದೇವೆ. ಕೆಲವು ಅಪರೂಪದ ಸನ್ನಿವೇಷಗಳಲ್ಲಿ ನಿಜ ಮಾಪನಕ್ಕೆ ಆದಷ್ಟು ಸಮೀಪವಿರುವ ಅಂದಾಜು ಮಾಪನವನ್ನು ಉಪಯೋಗಿಸಬೇಕಾಗುತ್ತದೆ. ಅದಕ್ಕಾಗಿಯೇ ಹಲವು ಅಭಾಗಲಬ್ಧ ವರ್ಗಮೂಲಗಳ ಅಂದಾಜುಗಳನ್ನು ಲೆಕ್ಕಮಾಡುವ ಸೂತ್ರಗಳನ್ನು ಕೂಡ ಆವಿಷ್ಕರಿಸಿದ್ದೇವೆ."

ನನ್ನ ಸಮಸ್ಯೆಗೆ ಪರಿಹಾರ ಸಿಕ್ಕಿತೆಂದು ಸಂತೋಷ ಉಕ್ಕಿಬಂದು "ಯುರೇಕಾ" ಎಂದು ಕಿರಿಚಿಕೊಂಡೆ. ತಕ್ಷಣ ಎಚ್ಚರವಾಯಿತು. ಎಂಥ ಅದ್ಭುತ ಸ್ವಪ್ನ! ನಿಜವಾಗಿಯೂ ಬೌಧಾಯನನೆಂಬ ಈ ಋಷಿಯಂತೆ ಕಾಣುವ ಭಾರತೀಯ ಎರಡುನೂರಾ ಐವತ್ತು ವರ್ಷಗಳ ಮೊದಲೇ ಆಯತದ ಸಂಬಂಧವಾಗಿ ಈ ಪ್ರಮೆಯವನ್ನು ಸಾಧಿಸಿ ಬರೆದಿಟ್ಟಿರುವದು ಸತ್ಯವಿರಬಹುದೇ. ನಾನು ಇಜಿಪ್ತಿನಲ್ಲಿದ್ದಾಗ ಭಾರತೀಯರು ಗಣಿತ ಹಾಗೂ ಖಗೋಲ ಶಾಸ್ತ್ರಗಳಲ್ಲಿ ತುಂಬ ಮುಂದುವರಿದಿದ್ದಾರೆಂದು ಹೇಳಿದುದೇನೋ ನಿಜ. ಆದರೆ ಅವರ ಸಂಶೋಧನೆಗಳು ಗ್ರೀಕರಿಗೆ ಇನ್ನೂ ತಲುಪಿರಲಿಲ್ಲ. ನನ್ನ ಸ್ವಪ್ನದ ವಿಚಾರವನ್ನು ನಾನೇಕೆ ಬಹಿರಂಗ

ಪಡಿಸಬೇಕು? ನಾನು ಹೇಳಿದರೂ ಜನರು ನಂಬಲಿಕ್ಕಿಲ್ಲ. ಸುಮ್ಮನಿರುವದೇ ಲೇಸು ಅಂದುಕೊಂಡೆ.

ಮಾರನೆಯ ದಿನ ವಿದ್ಯಾಲಯಕ್ಕೆ ಹೋದವನೇ ವಿದ್ಯರ್ಥಿಗಳೆದುರಿಗೆ ಘೋಷಿಸಿದೆ: "ನೀವು ಕೇಳಿದ ಲಂಬಕೋನ ತ್ರಿಭುಜದ ಪ್ರಶ್ನೆಗೆ ನಾನು ನಿನ್ನೆ ನಿಖರವಾದ ಉತ್ತರವನ್ನು ಕಂಡು ಹಿಡಿದಿದ್ದೇನೆ. ಒಂದು ಲಂಬಕೋನ ತ್ರಿಭುಜದಲ್ಲಿ ವಿಕರ್ಣದ ಮೇಲಿನ ವರ್ಗವು ಉಳಿದೆರಡು ಬಾಹುಗಳ ಮೇಲಿನ ವರ್ಗಗಳ ಮೊತ್ತಕ್ಕೆ ಸಮಾನವಾಗಿರುತ್ತದೆ. ಈ ಪ್ರಮೇಯವು ಗಣಿತಶಾಸ್ತ್ರಕ್ಕೆ ನಮ್ಮ ಅತ್ಯಂತ ಮಹತ್ವದ ಕೊಡುಗೆಯೆಂದು ಜಗತ್ಪಸಿದ್ಧವಾಗುವುದರಲ್ಲಿ ಸಂಶಯವಿಲ್ಲ."

**ಒಂದೊಳ್ಳೆ ಕೆಲಸ:**

ಅದೊಂದು ಕಗ್ಗತ್ತಲೆಯ ಮಳೆಗಾಲದ ಮಧ್ಯರಾತ್ರಿ. ಗಂಟೆ ಸುಮಾರು ಒಂದು ಆಗಿರಬಹುದು. ಫಿಲಡೆಲ್ಫಿಯಾದ ಸಣ್ಣ ಹೋಟೆಲ್ ಒಂದರ ರಿಸೆಪ್ಶನ್ ಡೆಸ್ಕ್‌ನಲ್ಲಿ ಒಬ್ಬ ಕ್ಲರ್ಕ ನಿದ್ದೆಗಣ್ಣಿನಲ್ಲಿ ಕುಳಿತಿದ್ದ. ಅಲ್ಲಿಗೆ ವೃದ್ಧ ದಂಪತಿ ಬಂದರು. ಹೊರಗೆ ಮಳೆ ಜೋರಾಗಿ ಸುರಿಯುತ್ತಿದ್ದುದರಿಂದ ಹೋಟೆಲ್ನಲ್ಲಿ ರೂಮ್ ಸಿಗಬಹುದೆಂದು ಅವರು ಬಂದಿದ್ದರು. 'ಈ ರಾತ್ರಿ ತಂಗಲು ಹೋಟೆಲ್‌ನಲ್ಲಿ ರೂಮ್ ಸಿಗಬಹುದೇ?' ಎಂದು ಗಂಡ ಕ್ಲರ್ಕ್‌ನ ಬಳಿ ಕೇಳಿದ.
ಆ ಕ್ಲರ್ಕ್ ಸ್ನೇಹಜೀವಿ. ಮಧ್ಯರಾತ್ರಿ ಬಂದವರನ್ನು ಕಂಡು ಕೋಪಿಸಿಕೊಳ್ಳದೆ ಮುಗುಳ್ನಗೆಯಿಂದಲೇ ಹೇಳಿದ- 'ನಗರದಲ್ಲಿ ಮೂರು ಸಮಾರಂಭಗಳು ನಡೆಯುತ್ತಿವೆ. ಹಾಗಾಗಿ ನಮ್ಮ ಹೋಟೆಲ್‌ನ ಎಲ್ಲ ರೂಂಗಳೂ ಭರ್ತಿಯಾಗಿವೆ'. ದಂಪತಿಯ ಮುಖದಲ್ಲಿ ಆತಂಕ ಮೂಡಿತು. ಅದನ್ನು ಗಮನಿಸಿದ ಕ್ಲರ್ಕ್ ಮಾತು ಮುಂದುವರಿಸಿದ 'ಆದರೆ... ಮಳೆಗಾಲದ ಮಧ್ಯರಾತ್ರಿಯಲ್ಲಿ ನಮ್ಮ ಹೋಟೆಲ್‌ಗೆ ಬಂದ ಅತಿಥಿಗಳನ್ನು ನಾನು ಹಾಗೆಯೇ ಕಳಿಸಬಾರದಲ್ಲವೆ? ನೀವು ಒಪ್ಪುವುದಾದರೆ ನನ್ನ ಕೋಣೆಯಲ್ಲಿಯೇ ತಂಗಬಹುದು. ಅದು ದೊಡ್ಡ ರೂಮೇನಲ್ಲ. ಆದರೆ ಒಂದು ರಾತ್ರಿ ಕಳೆಯಲು ತೊಂದರೆಯಿಲ್ಲ' ಎಂದ ಸೌಜನ್ಯದಿಂದ. 'ಇಲ್ಲ, ನಿಮಗೇಕೆ ನಮ್ಮಿಂದ ತೊಂದರೆ. ಇಲ್ಲೇ ಹತ್ತಿರದಲ್ಲಿ ಬೇರೆ ಹೋಟೆಲ್ ಇದ್ದರೆ ತಿಳಿಸಿ' ಎಂದಳು ಮಹಿಳೆ. 'ಇದರಲ್ಲಿ ತೊಂದರೆಯೇನು ಬಂತು. ನೀವೇ ನೋಡಿದಿರಲ್ಲ ನಾನು ಈ ಕುರ್ಚಿಯ ಮೇಲೆ ಕುಳಿತು ರಾತ್ರಿ ಕಳೆಯಬೇಕು. ನಾನು ಡ್ಯೂಟಿ ಮೇಲಿದ್ದೇನಲ್ಲ. ನೀವು ನನ್ನ ರೂಮಲ್ಲಿ ಧಾರಾಳವಾಗಿ ವಿಶ್ರಾಂತಿ ಪಡೆಯಬಹುದು' ಎಂದನಾತ.
ಕೊನೆಗೂ ಆ ದಂಪತಿ ಕ್ಲರ್ಕ್‌ನ ರೂಂ ಬಳಸಲು ಒಪ್ಪಿದರು. ಮರುದಿನ ಬಿಲ್ ಪಾವತಿಸಿ ಹೊರಟು ನಿಂತ ವೃದ್ಧ ಆತನಿಗೆ 'ನೀನೊಬ್ಬ ಒಳ್ಳೆಯ ಮ್ಯಾನೇಜರ್. ನಿನ್ನಂಥ ಸಹೃದಯಿಗಳು ಒಂದು ದೊಡ್ಡ ಹೋಟೆಲ್‌ನ ಬಾಸ್ ಆಗಬೇಕು. ಮುಂದೊಮ್ಮೆ ನಿನಗಾಗಿ ಒಂದು ಹೋಟೆಲ್ ಕಟ್ಟಿಸೋಣ ಬಿಡು' ಎಂದರು. ಅದನ್ನು ಕೇಳಿದ ಆ ಕ್ಲರ್ಕ್ ನಕ್ಕುಬಿಟ್ಟ. ದಂಪತಿ ಆತನೊಂದಿಗೆ ಒಂದಷ್ಟು ಹೊತ್ತು ಹರಟಿ ಹೊರಟು ಹೋದರು. ಆತ ಎಂಥ ಅಪರೂಪದ ವ್ಯಕ್ತಿ ಎಂದು ದಂಪತಿಗೆ ಅರಿವಾಯಿತು.
